ಶುಕ್ರವಾರ, ಆಗಸ್ಟ್ 1, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

4 ಲಕ್ಷ ಭಕ್ತರ ಭೇಟಿ

ಪ್ರಸಕ್ತ ವರ್ಷ ದಕ್ಷಿಣ ಕಾಶ್ಮೀರದ ಅಮರನಾಥ ಗುಹಾ ದೇಗುಲದ ದರ್ಶನ ಪಡೆದ ಭಕ್ತರ ಸಂಖ್ಯೆ 4 ಲಕ್ಷ ದಾಟಿದೆ. ಜುಲೈ 3ರಂದು ಆರಂಭವಾಗಿರುವ 38 ದಿನಗಳ ಯಾತ್ರೆಯು ಆಗಸ್ಟ್ 9ರಂದು ಮುಕ್ತಾಯಗೊಳ್ಳಲಿದೆ



ಪ್ರವಾಸಿಗರ ನೋಂದಣಿ ಕಡ್ಡಾಯ

ಉತ್ತರಾಖಂಡದ ಮಸ್ಸೂರಿಗೆ ಭೇಟಿ ನೀಡುವ ಪ್ರವಾಸಿಗರು ಪ್ರವಾಸೋದ್ಯಮ ಇಲಾಖೆಯ ವೆಬ್‌ಸೈಟ್‌ನಲ್ಲಿ ಮುಂಚಿತವಾಗಿ ನೋಂದಣಿ ಮಾಡಿಕೊಳ್ಳಬೇಕು ಎಂದು ಸರ್ಕಾರ ತಿಳಿಸಿದೆ



ಚುಟುಕೆ ಸುದ್ದಿ

ಮುಡಾ: ವರದಿ ಸಲ್ಲಿಸಿದ ವಿಚಾರಣಾ ಆಯೋಗ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ, ಪರಿಹಾರ ಮತ್ತು ಬದಲಿ ನಿವೇಶನಗಳ ಹಂಚಿಕೆಯಲ್ಲಿನ ಅವ್ಯವಹಾರಗಳ ವಿಚಾರಣೆಗೆ ರಚಿಸಲಾಗಿದ್ದ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದ ಆಯೋಗವು, ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದೆ.


ನ್ಯಾಯಮೂರ್ತಿ ದೇಸಾಯಿ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿ, ವರದಿ ಸಲ್ಲಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ಪರಿಹಾರದ ನಿವೇಶನಗಳನ್ನು ಹಂಚಿಕೆ ಮಾಡುವಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಬಂದ ಬೆನ್ನಲ್ಲೇ, ರಾಜ್ಯ ಸರ್ಕಾರವು ನ್ಯಾಯಮೂರ್ತಿ ದೇಸಾಯಿ ನೇತೃತ್ವದಲ್ಲಿ ಆಯೋಗ ರಚಿಸಿತ್ತು. 2006ರಿಂದ 2024ರ ಜುಲೈ 15ರವರೆಗೂ ನಡೆದಿರುವ ಭೂಸ್ವಾಧೀನ, ಬಡಾವಣೆಗಳ ನಿರ್ಮಾಣ, ನಿವೇಶನ ಹಂಚಿಕೆ, ಪರಿಹಾರ ವಿತರಣೆಯ ಬಗ್ಗೆ ವಿಚಾರಣೆ ನಡೆಸುವಂತೆ ಸೂಚಿಸಿತ್ತು.

ಎಚ್.ಡಿ.ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ (ಎರಡು ಅವಧಿ), ಡಿ.ವಿ.ಸದಾನಂದ ಗೌಡ, ಜಗದೀಶ ಶೆಟ್ಟರ್, ಸಿದ್ದರಾಮಯ್ಯ (ಎರಡು ಅವಧಿ) ಮತ್ತು ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಪ್ರಾಧಿಕಾರದಲ್ಲಿ ನಡೆದಿರಬಹುದಾದ ಅವ್ಯವಹಾರಗಳ ಕುರಿತು ನಡೆಸಿರುವ ವಿಚಾರಣೆಯ ವಿವರಗಳು ವರದಿಯಲ್ಲಿವೆ ಎಂದು ಮೂಲಗಳು ತಿಳಿಸಿವೆ.

ದಯಾನಂದ ಕಾರಾಗೃಹ ಎಡಿಜಿಪಿ

ಬೆಂಗಳೂರು: ಹುದ್ದೆಯ ನಿರೀಕ್ಷೆಯಲ್ಲಿದ್ದ ಹಿರಿಯ ಐಪಿಎಸ್ ಅಧಿಕಾರಿ ಬಿ.ದಯಾನಂದ ಅವರನ್ನು ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಹೆಚ್ಚುವರಿ ಮಹಾನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.



ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಿಂದ 11 ಮಂದಿ ಸಾವಿಗೀಡಾದ ಘಟನೆಯ ಹಿನ್ನೆಲೆಯಲ್ಲಿ ಅಂದಿನ ಬೆಂಗಳೂರು ಪೊಲೀಸ್ ಕಮಿಷನರ್ ಆಗಿದ್ದ ದಯಾನಂದ ಅವರನ್ನು ಅಮಾನತುಗೊಳಿಸಲಾಗಿತ್ತು. ಇತ್ತೀಚೆಗಷ್ಟೇ ಸರ್ಕಾರ ಅವರ ಅಮಾನತು ಆದೇಶವನ್ನು ರದ್ದುಪಡಿಸಿತ್ತು. ಎಡಿಜಿಪಿ ಮಾಲಿನಿ ಕೃಷ್ಣಮೂರ್ತಿ ಅವರ ನಿವೃತ್ತಿಯಿಂದ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಹುದ್ದೆ ತೆರವಾಗಿತ್ತು.

ಕಾಲ್ತುಳಿತ ಪ್ರಕರಣದಲ್ಲಿ ಶೇಖರ್ ಟಿ ತೆಕ್ಕಣ್ಣವರ್ ಕೂಡ ಅಮಾನತು ಆಗಿದ್ದರು. ಈಚೆಗೆ ಅವರ ಅಮಾನತು ರದ್ದಾಗಿದ್ದು, ಅವರನ್ನು ಗುಪ್ತದಳದ ಎಸ್ಪಿ ಹುದ್ದೆ ನೀಡಲಾಗಿದೆ.

‘ಕ್ವಾಂಟಮ್ ಮಿಷನ್‌ಗೆ ಸಾವಿರ ಕೋಟಿ’

ಕ್ವಾಂಟಮ್ ಇಂಡಿಯಾ ಬೆಂಗಳೂರು ಸಮ್ಮೇಳನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸ್ಟಾರ್ಟ್ ಅಪ್ ನೆರವಿಗೆ ಕ್ವಾಂಟಮ್ ವೆಂಚರ್ ಕ್ಯಾಪಿಟಲ್ ಫಂಡ್
- ರಾಜ್ಯವನ್ನು ಜಾಗತಿಕ ಕ್ವಾಂಟಮ್ ಕೇಂದ್ರ ಮಾಡಲು ಕ್ರಮ
- 2035ರ ವೇಳೆಗೆ 10 ಸಾವಿರ ಉದ್ಯೋಗ ಸೃಷ್ಟಿ: ಸಿ.ಎಂ

ಬೆಂಗಳೂರು: 2035ರ ವೇಳೆಗೆ ಕರ್ನಾಟಕವನ್ನು ಕ್ವಾಂಟಮ್‌ನ ಆರ್ಥಿಕ ರಾಜ್ಯವನ್ನಾಗಿ ಮಾಡುವ ಗುರಿ ಹೊಂದಲಾಗಿದೆ. ಇದನ್ನು ಸಾಧಿಸಲು ಬೇಕಾದ ಕೌಶಲ, ಮೂಲಸೌಕರ್ಯ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ₹1 ಸಾವಿರ ಕೋಟಿ ನಿಧಿ ಮೀಸಲಿರಿಸಿ ಕರ್ನಾಟಕ ಕ್ವಾಂಟಮ್ ಮಿಷನ್ (ಕೆಕ್ಯುಎಂ) ಪ್ರಾರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಗುರುವಾರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ಐಐಎಸ್‌ಸಿ ಕ್ವಾಂಟಮ್ ತಂತ್ರಜ್ಞಾನ ಉಪಕ್ರಮ (ಐಕ್ಯುಟಿಐ) ಆಯೋಜಿಸಿದ್ದ ‘ಕ್ವಾಂಟಮ್ ಇಂಡಿಯಾ ಬೆಂಗಳೂರು’ ಎರಡು ದಿನಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಸ್ಟಾರ್ಟ್ ಅಪ್‌ಗಳ ಬೆಳವಣಿಗೆಗೆ ನೆರವು ನೀಡಲು ಕ್ವಾಂಟಮ್ ವೆಂಚರ್ ಕ್ಯಾಪಿಟಲ್ ಫಂಡ್ ಪ್ರಾರಂಭಿಸಲಾಗುವುದು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಸಹಯೋಗದಂತಹ ಕ್ರಮಗಳಿಂದಾಗಿ ಕರ್ನಾಟಕ ರಾಜ್ಯವನ್ನು ಜಾಗತಿಕ ಕ್ವಾಂಟಮ್ ಕೇಂದ್ರ ಮಾಡಲಾಗುವುದು. 2035ರ ವೇಳೆಗೆ 10 ಸಾವಿರ ಉದ್ಯೋಗ ಸೃಷ್ಟಿಸಿ, ಬೆಂಗಳೂರು ಅನ್ನು ಏಷ್ಯಾದ ಕ್ವಾಂಟಮ್ ರಾಜಧಾನಿ ಮಾಡುವ ಗುರಿ ಇದೆ. ₹1.75 ಲಕ್ಷ ಕೋಟಿ ಮೌಲ್ಯದ ಕ್ವಾಂಟಮ್ ಆರ್ಥಿಕತೆ ಸೃಷ್ಟಿಸಲಾಗುವುದು ಎಂದು ಹೇಳಿದರು.

ಐ.ಟಿ, ಜೈವಿಕ ತಂತ್ರಜ್ಞಾನ ಮತ್ತು ಸಂಶೋಧನೆಯಲ್ಲಿ ಸಮರ್ಥವಾಗಿರುವ ಕರ್ನಾಟಕ, ದೇಶದ ತಂತ್ರಜ್ಞಾನ ಮತ್ತು ನಾವೀನ್ಯತೆಯ ರಾಜಧಾನಿಯಾಗಿದೆ. ಸಾಮಾನ್ಯ ನಾಗರಿಕರಿಗೆ ಕ್ವಾಂಟಮ್ ಹೇಗೆ ಪ್ರಯೋಜನಕಾರಿ ಎಂದು ಕೆಲವರು ಕೇಳಬಹುದು. ಪ್ರಾರಂಭಿಕ ಹಂತದಲ್ಲಿ ರೋಗಗಳ ಪತ್ತೆಗೆ, ಸುರಕ್ಷಿತ ಸಂವಹನ ಹಾಗೂ ಸ್ಮಾರ್ಟ್ ಕೃಷಿಯನ್ನು ಸಾಧ್ಯವಾಗಿಸುತ್ತದೆ ಎಂದರು.

ದೇಶದ ಕ್ವಾಂಟಮ್ ಕ್ರಾಂತಿಯನ್ನು ಕರ್ನಾಟಕ ಮುನ್ನಡೆಸುವುದನ್ನು ಖಾತ್ರಿಪಡಿಸಲು ಐದು ಪ್ರಮುಖ ಸ್ತಂಭಗಳ ಮೇಲೆ ಕಾರ್ಯತಂತ್ರ ರೂಪಿಸಲಾಗಿದೆ. ಇಪ್ಪತ್ತಕ್ಕೂ ಹೆಚ್ಚು ಕಾಲೇಜುಗಳಲ್ಲಿ ಕ್ವಾಂಟಮ್ ಕೌಶಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಚಯಿಸಿ, ಪ್ರತಿ ವರ್ಷ 150 ಪಿಎಚ್.ಡಿ ಫೆಲೋಶಿಪ್‌ಗಳಿಗೆ ನೆರವು ನೀಡಲಾಗುವುದು. 1000- ಕ್ಯುಬಿಟ್ ಪ್ರೊಸೆಸರ್‌ಗಳನ್ನು ಒಳಗೊಂಡಂತೆ ಅತ್ಯಾಧುನಿಕ ಕ್ವಾಂಟಮ್ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವುದು. ಆರೋಗ್ಯ ರಕ್ಷಣೆ, ರಕ್ಷಣಾ ಮತ್ತು ಸೈಬರ್ ಭದ್ರತೆ ಹಾಗೂ ಕ್ವಾಂಟಮ್ ಘಟಕಗಳ ಸ್ಥಳೀಯ ಉತ್ಪಾದನೆ ಉತ್ತೇಜಿಸಲು ಮೀಸಲಾದ ಫ್ಯಾಬ್ ಲೈನ್ ಅನ್ನು ಸ್ಥಾಪಿಸಲಾಗುವುದು ಎಂದು ವಿವರಿಸಿದರು.



ಬೆಂಗಳೂರಿನಲ್ಲಿ ಗುರುವಾರ ಆರಂಭವಾದ ಕ್ವಾಂಟಮ್ ಇಂಡಿಯಾ ಸಮಾವೇಶದಲ್ಲಿ ಸಿದ್ದರಾಮಯ್ಯ ಅವರು ಕಿರುಹೊತ್ತಿಗೆ ಬಿಡುಗಡೆ ಮಾಡಿದರು. ಎಂ.ಸಿ. ಸುಧಾಕರ್, ಕೃಷ್ಣ ಬೈರೇಗೌಡ, ಎನ್.ಎಸ್.ಬೋಸರಾಜು, ಎಂ.ಬಿ.ಪಾಟೀಲ, ಪ್ರಿಯಾಂಕ್ ಖರ್ಗೆ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ:ರಂಜು ಪಿ.

ಕ್ವಾಂಟಮ್ ನಗರ ಸ್ಥಾಪನೆ

‘ಬೆಂಗಳೂರು ಬಳಿ ಕ್ಯು- ಸಿಟಿ (ಕ್ವಾಂಟಮ್) ನಗರ ಸ್ಥಾಪಿಸಿ, ವಿಶ್ವ ದರ್ಜೆಯ ಸೌಲಭ್ಯ ಒದಗಿಸಲಾಗುವುದು’ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಹೇಳಿದರು.
ಕೇಂದ್ರ ಸರ್ಕಾರವು ₹6 ಸಾವಿರ ಕೋಟಿ ವೆಚ್ಚದಲ್ಲಿ ರಾಷ್ಟ್ರೀಯ ಕ್ವಾಂಟಮ್ ಮಿಷನ್ (ಎನ್‌ಕ್ಯುಎಂ) ಆರಂಭಿಸಿದ್ದು, ಕರ್ನಾಟಕದ ನೇತೃತ್ವದಲ್ಲಿ ನಾವೀನ್ಯತೆ ಮತ್ತು ವಿಕೇಂದ್ರೀಕೃತ ವಿಧಾನಗಳನ್ನು ಅಳವಡಿಸಿಕೊಳ್ಳಲು ಅನುಮತಿ ನೀಡಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ಬೆಂಗಳೂರಿನಲ್ಲಿ ಕ್ವಾಂಟಮ್ ಕ್ಲಸ್ಟರ್ ಆರಂಭಿಸಲಾಗುತ್ತಿದ್ದು, ಶೀಘ್ರವೇ ಬೆಂಗಳೂರು ಕ್ವಾಂಟಮ್ ತಂತ್ರಜ್ಞಾನದ ರಾಜಧಾನಿಯಾಗಲಿದೆ. ಎರಡು ಹಾಗೂ ಮೂರನೇ ಹಂತದ ನಗರಗಳು ಕೂಡ ಅತ್ಯುತ್ತಮ ಮಾನವ ಸಂಪನ್ಮೂಲ ಹಾಗೂ ಮೂಲಸೌಕರ್ಯ ನೀಡಲಿದ್ದು, ಈ ಭಾಗಗಳತ್ತಲೂ ಉದ್ಯಮಿಗಳು ಗಮನಹರಿಸಬಹುದು ಎಂದು ಸಲಹೆ ನೀಡಿದರು.

ಇದೇ ವೇಳೆ ನೊಬೆಲ್ ಪ್ರಶಸ್ತಿ ಪುರಸ್ಕೃತ ಪ್ರೊ. ಡಂಕನ್ ಹಲ್ಡಾನೆ, ಪ್ರೊ. ಡೇವಿಡ್ ಗ್ರಾಸ್ ಹಾಗೂ ಪಂಚರತ್ನಂ ಪ್ರಶಸ್ತಿ ವಿಜೇತ ರಾಜಮಣಿ ವಿಜಯ ರಾಘವನ್ ಅವರನ್ನು ಸಿದ್ದರಾಮಯ್ಯ ಸನ್ಮಾನಿಸಿದರು.

ಸಮಾವೇಶದಲ್ಲಿ ದೇಶ, ವಿದೇಶಗಳಿಂದ 700ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದು, ಕ್ವಾಂಟಮ್ ವಿಜ್ಞಾನಕ್ಕೆ ಸಂಬಂಧಿಸಿದಂತೆ 31 ಮಳಿಗೆಗಳನ್ನು ತೆರೆಯಲಾಗಿದೆ.


ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಏಕರೂಪ್ ಕೌರ್, ಸಮ್ಮೇಳನದ ಅಧ್ಯಕ್ಷ ಪ್ರೊ. ಅರಿಂದಮ್ ಘೋಷ್, ಪ್ರಾಧ್ಯಾಪಕರಾದ ಅಕ್ಷಯ್ ನಾಯಕ್, ಸ್ಮಿತಾ ವಿಶ್ವೇಶ್ವರ ಹಾಜರಿದ್ದರು.

ಸುದ್ದಿ 2 ನಿಮಿಷ

8ರಿಂದ ರಾಯರ ಆರಾಧನೆ

ರಾಯಚೂರು: ಮಂತ್ರಾಲಯ ಮಠದಲ್ಲಿ ಆಗಸ್ಟ್ 8ರಿಂದ 14ರವರೆಗೆ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 354ನೇ ಆರಾಧನಾ ಮಹೋತ್ಸವ ನಡೆಯಲಿದೆ.

ಆ.8ರಿಂದ ಒಂದು ವಾರ ನಿತ್ಯ ಬೆಳಿಗ್ಗೆ ಧಾರ್ಮಿಕ ಹಾಗೂ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. 8ರ ಸಂಜೆ 6 ಗಂಟೆಗೆ ಧ್ವಜಾರೋಹಣದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ಸಿಗಲಿದೆ.



ಆ. 9ರಂದು ಬೆಳಿಗ್ಗೆ 8.15ಕ್ಕೆ ದೇವಸ್ಥಾನದ ಅಧಿಕಾರಿಗಳು ಶ್ರೀನಿವಾಸದೇವರ ವಸ್ತ್ರ ಸಮರ್ಪಿಸುವರು. ರಾತ್ರಿ 8ಕ್ಕೆ ಶಾಖೋತ್ಸವ ರಜತ ಮಂಟಪೋತ್ಸವ ನಡೆಯಲಿದೆ. ಆ.10ರಂದು ಪೂರ್ವಾ ಆರಾಧನೆ, ಆ.11ರಂದು ಮಧ್ಯಾರಾಧನೆ, ಆ.12 ರಂದು ಉತ್ತರ ಆರಾಧನೆ ನಡೆಯಲಿವೆ. 12ರಂದು ಮೂಲ ಬೃಂದಾವನಕ್ಕೆ ವಜ್ರಕವಚ ಸಮರ್ಪಣೆ, ಬೆಳಿಗ್ಗೆ 10ಗಂಟೆಗೆ ಮಹಾರಥೋತ್ಸವ ಜರುಗಲಿವೆ. ಆ.13ರಂದು ಅಶ್ವ ವಾಹನೋತ್ಸವ ಹಾಗೂ ಶ್ರೀಸುಗಣೇಂದ್ರ ತೀರ್ಥರ ಆರಾಧನೆ, ಆ.14ರಂದು ರಾತ್ರಿ 8 ಗಂಟೆಗೆ ಸಮಾರೋಪ ಕಾರ್ಯಕ್ರಮ ನಡೆಯಲಿದೆ ಎಂದು ಮಠದ ಪ್ರಕಟಣೆ ತಿಳಿಸಿದೆ.

ಮೂಡುಬಿದಿರೆ: ‘ಆಳ್ವಾಸ್ ಪ್ರಗತಿ’ ಉದ್ಯೋಗ ಮೇಳ ಇಂದು, ನಾಳೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಇಲ್ಲಿನ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಆ.1, 2ರಂದು ಏರ್ಪಡಿಸಿರುವ 15ನೇ ಆವೃತ್ತಿಯ ‘ಆಳ್ವಾಸ್ ಪ್ರಗತಿ’ ಉದ್ಯೋಗ ಮೇಳಕ್ಕೆ ವಿದ್ಯಾಗಿರಿ ಆವರಣ ಸಜ್ಜಾಗಿದೆ.

ಈವರೆಗೆ 305 ಕಂಪನಿಗಳು ನೋಂದಣಿ ಮಾಡಿಕೊಂಡಿದ್ದು, ವಿವಿಧ ಹುದ್ದೆಗಳ ಭರ್ತಿಗೆ ನೇಮಕಾತಿ ನಡೆಸಲಿವೆ. 11,509 ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಹೆಸರು ನೋಂದಾಯಿಸಿಕೊಂಡಿದ್ದಾರೆ. ಸ್ಥಳದಲ್ಲಿಯೂ ಹೆಸರು ನೋಂದಣಿಗೆ ಅವಕಾಶವಿದೆ.

ಆಕಾಂಕ್ಷಿಗಳಿಗೆ ಅನುಕೂಲವಾಗುವಂತೆ ಈ ಬಾರಿ ಎಐ ಆಧಾರಿತ ವಿಶೇಷ ಚಾಟ್‌ಬಾಟ್ ತಂತ್ರಜ್ಞಾನ ಸಿದ್ಧಪಡಿಸಲಾಗಿದೆ. ವ್ಯಕ್ತಿಗತ ವಿವರ, ಅರ್ಹತೆ ಆಧರಿಸಿ ಅಭ್ಯರ್ಥಿಗಳು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದಾಗ ಸೂಕ್ತ ಹುದ್ದೆ, ಕಂಪನಿಗಳ ಮಾಹಿತಿ ಪಡೆಯಬಹುದಾಗಿದೆ. ಜೊತೆಗೆ, ಕಂಪನಿಗಳ ವಿವರಗಳಿರುವ ಕೈಪಿಡಿ, ಅಗತ್ಯವಿರುವವರಿಗೆ ವಸತಿ ವ್ಯವಸ್ಥೆ, ಐಟಿಐ, ಡಿಪ್ಲೊಮಾ ಕಾಲೇಜುಗಳಿಗೆ ವಾಹನ ಸೌಲಭ್ಯ, ಅಭ್ಯರ್ಥಿ ಸಹಾಯವಾಣಿ ಕೇಂದ್ರಗಳು ಇರಲಿವೆ.

ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರು ಬೆಳಿಗ್ಗೆ 9.30ಕ್ಕೆ ಉದ್ಘಾಟಿಸುವರು. ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪಿ.ಎಲ್ ಧರ್ಮ, ಶಾಸಕ ಉಮಾನಾಥ್ ಕೋಟ್ಯಾನ್ ಹಾಗೂ ಜಿಲ್ಲೆಯ ಜನಪ್ರತಿನಿಧಿಗಳು ಭಾಗವಹಿಸುವರು.

ಅಂಗಾಂಗ ದಾನ: ಕಾದಿವೆ ಸಾವಿರಾರು ಜೀವ

ಆರೋಗ್ಯ ಇಲಾಖೆಯ ರಾಜ್ಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯಿಂದ ಅಂಗಾಂಗ ದಿನ ಆಚರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ರಾಜ್ಯದಲ್ಲಿ 43,221 ಮಂದಿ ಅಂಗಾಂಗ ದಾನಕ್ಕೆ ಪ್ರತಿಜ್ಞೆ
- ಪ್ರತಿಜ್ಞೆ ಮಾಡಿದವರಲ್ಲಿ ಧಾರವಾಡ ಜಿಲ್ಲೆ ಮುಂಚೂಣಿ



ಬೆಂಗಳೂರು: ರಾಜ್ಯದಲ್ಲಿ ಅಂಗಾಂಗಕ್ಕೆ ಬೇಡಿಕೆ ಹೆಚ್ಚುತ್ತಲೇ ಇದ್ದು, ಈ ವರ್ಷ ಈವರೆಗೆ 121 ಮಂದಿ ಅಂಗಾಂಗ ದಾನ ಮಾಡಿದ್ದಾರೆ. ಐದು ಸಾವಿರಕ್ಕೂ ಅಧಿಕ ಮಂದಿ ಅಂಗಾಂಗಕ್ಕೆ ಕಾಯುತ್ತಿದ್ದು, ಮೂತ್ರಪಿಂಡಕ್ಕೆ ಹೆಚ್ಚಿನ ಬೇಡಿಕೆಯಿದೆ.

ಆರೋಗ್ಯ ಇಲಾಖೆಯ ರಾಜ್ಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯು (ಜೀವಸಾರ್ಥಕತೆ) ಶುಕ್ರವಾರದಂದು ಅಂಗಾಂಗ ದಿನ ಆಚರಿಸುತ್ತಿದೆ. ಈ ಸಂಬಂಧ ಸಂಸ್ಥೆ ಪ್ರಕಟಣೆ ಹೊರಡಿಸಿದ್ದು, ಅಂಗಾಂಗ ದಾನದ ಪ್ರತಿಜ್ಞೆ ಕೈಗೊಳ್ಳುವಂತೆ ಮನವಿ ಮಾಡಿದೆ.

‘ಅಂಗಾಂಗ ಕಸಿ ಸ್ವೀಕರಿಸುವವರು ಮತ್ತು ಅಂಗಾಂಗ ದಾನದ ಪ್ರತಿಜ್ಞೆ ಕೈಗೊಳ್ಳುವವರ ನೋಂದಣಿಯನ್ನು ಮಾಡಿಕೊಳ್ಳಲಾಗುತ್ತಿದೆ. ವ್ಯಕ್ತಿಯು ಬದುಕಿದ್ದಾಗಲೇ ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಬಹುದು. 2025ರ ಜುಲೈ 30ರ ವೇಳೆಗೆ ರಾಜ್ಯದಲ್ಲಿ 43,221 ಮಂದಿ ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಿದ್ದಾರೆ. ಈ ಪಟ್ಟಿಯಲ್ಲಿ ರಾಜ್ಯವು ರಾಷ್ಟ್ರ ಮಟ್ಟದಲ್ಲಿ ಮೂರನೇ ಸ್ಥಾನದಲ್ಲಿದೆ. ಧಾರವಾಡ ಜಿಲ್ಲೆಯು ರಾಜ್ಯದಲ್ಲಿಯೇ ಅಂಗಾಂಗ ದಾನದ ಪ್ರತಿಜ್ಞೆಯಲ್ಲಿ ಮುಂಚೂಣಿಯಲ್ಲಿದ್ದು, ಅಲ್ಲಿನ 11,186 ಮಂದಿ ಅಂಗಾಂಗ ದಾನದ ಪ್ರತಿಜ್ಞೆ ಮಾಡಿದ್ದಾರೆ’ ಎಂದು ಸಂಸ್ಥೆ ತಿಳಿಸಿದೆ.

8 ಜೀವ ಉಳಿಸಲು ಸಾಧ್ಯ: ‘ರಾಜ್ಯದಲ್ಲಿ ಅಂಗಾಂಗ ಮತ್ತು ಅಂಗಾಂಶಗಳ ತೀವ್ರ ಕೊರತೆಯಿದೆ. ಒಬ್ಬ ವ್ಯಕ್ತಿಯು ಅಂಗಾಂಗ ದಾನದ ಮೂಲಕ ಎಂಟು ಜೀವವನ್ನು ಉಳಿಸಬಹುದಾಗಿದೆ. ಹೃದಯ, ಮೂತ್ರಪಿಂಡಗಳು, ಪಿತ್ತಜನಕಾಂಗ, ಮೇದೋಜೀರಕ ಗ್ರಂಥಿ, ಸಣ್ಣ ಕರುಳು ಮತ್ತು ಶ್ವಾಸಕೋಶವನ್ನು ದಾನ ಮಾಡಬಹುದು. ಅಂಗಾಂಶದ ಮೂಲಕ 50ಕ್ಕೂ ಹೆಚ್ಚು ಮಂದಿಗೆ ನೆರವಾಗಬಹುದು’ ಎಂದು ಹೇಳಿದೆ.

‘ಅಂಗಾಂಗ ದಾನದ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹಾಗೂ ಅಂಗಾಂಗ ದಾನಕ್ಕೆ ಸಂಬಂಧಿಸಿದ ಮೂಢನಂಬಿಕೆಗಳು, ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಸರ್ಕಾರ ನಿರಂತರ ಪ್ರಯತ್ನ ಮಾಡುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ನಂತರ ಅಂಗಾಂಗಗಳು ಮತ್ತು ಅಂಗಾಂಶಗಳನ್ನು ದಾನ ಮಾಡಿದ ವ್ಯಕ್ತಿಯ ಕುಟುಂಬದ ಸದಸ್ಯರಿಗೆ ಪ್ರಶಂಸಾ ಪತ್ರ ವಿತರಿಸಲಾಗುತ್ತಿದೆ. ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ದಾನಿಯ ಕುಟುಂಬದ ಸದಸ್ಯರನ್ನು ಗೌರವಿಸಲಾಗುತ್ತಿದೆ’ ಎಂದು ಸಂಸ್ಥೆ ತಿಳಿಸಿದೆ.

ಹೆಚ್ಚಿನ ವಿವರಕ್ಕೆ: www.jeevasarthakathe.karnataka.gov.in

ಅಂಗಾಂಗ ದಾನಕ್ಕೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ವರ್ಷವಾರು ಅಂಗಾಂಗ ದಾನಿಗಳು

ವರ್ಷ	ದಾನಿಗಳು
2022	151
2023	178
2024	162
2025	121

ರಾಜ್ಯದಲ್ಲಿ ಅಂಗಾಂಗಕ್ಕೆ ಕಾಯುತ್ತಿರುವವರು

ಅಂಗಾಂಗಗಳು	ಕಾಯುತ್ತಿರುವವರು
ಮೂತ್ರಪಿಂಡ	4,582
ಯಕೃತ್	583
ಹೃದಯ	133
ಶ್ವಾಸಕೋಶ	31
ಹೃದಯ ಮತ್ತು ಶ್ವಾಸಕೋಶ	13
ಮೂತ್ರಪಿಂಡ ಮತ್ತು ಮೇದೋಜೀರಕ ಗ್ರಂಥಿ	21
ಹೃದಯ ಮತ್ತು ಮೂತ್ರಪಿಂಡ	01
ಸಣ್ಣ ಕರುಳು	00

ರೋಗಿಗಳಿಗೆ ಉಚಿತ ಪ್ಯಾಕೇಜ್

ಸರ್ಕಾರವು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿ, ಮೂತ್ರಪಿಂಡ, ಹೃದಯ, ಯಕೃತ್ ಮತ್ತು ಬಹು ಅಂಗಾಂಗ ವೈಫಲ್ಯಕ್ಕೆ ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳಿಗೆ ಉಚಿತವಾಗಿ ಕಸಿ ಶಸ್ತ್ರಚಿಕಿತ್ಸೆ ನಡೆಸುತ್ತಿದೆ. ಈ ಸಂಬಂಧ ಚಿಕಿತ್ಸಾ ಪ್ಯಾಕೇಜ್ ನಿಗದಿಪಡಿಸಲಾಗಿದೆ.

ಕಸಿ	ಪ್ಯಾಕೇಜ್ ದರ
ಮೂತ್ರಪಿಂಡ ಕಸಿ	₹ 2 ಲಕ್ಷ
ಯಕೃತ್ ಕಸಿ	₹ 11 ಲಕ್ಷ
ಹೃದಯ ಕಸಿ	₹ 10 ಲಕ್ಷ
ಶ್ವಾಸಕೋಶ ಕಸಿ	₹ 15 ಲಕ್ಷ
ಹೃದಯ ಮತ್ತು ಶ್ವಾಸಕೋಶ ಕಸಿ	₹ 22 ಲಕ್ಷ

‘ಅಡುಗೆ ಎಣ್ಣೆ: 6 ತಿಂಗಳಿಗೊಮ್ಮೆ ವಿಶ್ಲೇಷಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಯಾರಿಸಲಾದ ಅಡುಗೆ ಎಣ್ಣೆಯನ್ನು ಪ್ರತಿ ಆರು ತಿಂಗಳಿಗೊಮ್ಮೆ ವಿಶ್ಲೇಷಣೆಗೆ ಒಳಪಡಿಸಬೇಕು’ ಎಂದು ಆಹಾರ ಸುರಕ್ಷತೆ ಇಲಾಖೆ ಆಯುಕ್ತ ಕೆ. ಶ್ರೀನಿವಾಸ ಅವರು ಅಡುಗೆ ಎಣ್ಣೆ ಉದ್ದಿಮೆದಾರರಿಗೆ ಸೂಚಿಸಿದ್ದಾರೆ.

ಅಡುಗೆ ಎಣ್ಣೆಗೆ ಸಂಬಂಧಿಸಿದಂತೆ ವರ್ಚುವಲ್ ವೇದಿಕೆ ಮೂಲಕ ಅವರು ಸಭೆ ನಡೆಸಿದರು. ಜಿಲ್ಲಾ ಅಂಕಿತಾಧಿಕಾರಿಗಳು, ಅಡುಗೆ ಎಣ್ಣೆ ತಯಾರಿಕಾ ಘಟಕದ ಮಾಲೀಕರು, ಹೋಟೆಲ್ ಉದ್ದಿಮೆದಾರರ ಸಂಘದ ಪದಾಧಿಕಾರಿಗಳು, ಬೇಕರಿ ಉತ್ಪನ್ನಗಳ ತಯಾರಿಕಾ ಸಂಘದ ಪದಾಧಿಕಾರಿಗಳು, ಉಪಯೋಗಿಸಿದ ಅಡುಗೆ ಎಣ್ಣೆ ವಿಲೇವಾರಿ ಏಜೆನ್ಸಿ (ಆರ್‌ಯುಸಿಒ) ಮಾಲೀಕರು ಮತ್ತು ವ್ಯವಸ್ಥಾಪಕರು ಹಾಗೂ ಕರ್ನಾಟಕ ರಾಜ್ಯ ಜೈವಿಕ ಅನಿಲ ಅಭಿವೃದ್ಧಿ ಮಂಡಳಿ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

‘ಕಡಿಮೆ ಕೊಬ್ಬಿನಾಂಶ ಇರುವ ಅಡುಗೆ ಎಣ್ಣೆಯನ್ನು ಉಪಯೋಗಿಸಬೇಕು. ಬಳಸಿದ ಅಡುಗೆ ಎಣ್ಣೆಯನ್ನು ಸಮರ್ಪಕವಾಗಿ ವಿಲೇವಾರಿ ಮಾಡಬೇಕು. ಅಡುಗೆ ಎಣ್ಣೆ ತಯಾರಿಕಾ ಘಟಕದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಎಣ್ಣೆಗೆ ಸಂಬಂಧಿಸಿದಂತೆ ಅಗತ್ಯ ವಿವರಗಳನ್ನೊಳಗೊಂಡ ಚೀಟಿಯನ್ನು ಕಡ್ಡಾಯವಾಗಿ ಅಳವಡಿಕೆ ಮಾಡಬೇಕು’ ಎಂದು ಸೂಚಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರು, ‘ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಳಸಿದ ಅಡುಗೆ ಎಣ್ಣೆಯನ್ನು ಸಂಗ್ರಹಿಸಿ, ಜೈವಿಕ ಅನಿಲ ತಯಾರಿಕಾ ಘಟಕಗಳಿಗೆ ನೀಡಬೇಕು. ಹೋಟೆಲ್‌ಗಳಲ್ಲಿ ಬಳಸಲಾದ ಎಣ್ಣೆಯನ್ನು ಕಡ್ಡಾಯವಾಗಿ ಆರ್‌ಯುಸಿಒ ಏಜೆನ್ಸಿಗೆ ನೀಡಿ, ಮರುಬಳಕೆ ಆಗದಂತೆ ನೋಡಿಕೊಳ್ಳಬೇಕು’ ಎಂದು ಹೇಳಿದರು.

ಕರಗ ಸಂಭ್ರಮ..

ಪ್ರಜಾವಾಣಿ ಚಿತ್ರ: ಅನೂಪ್ ರಾಘ. ಟಿ.



ಮೈಸೂರಿನ ವಿದ್ಯಾರಣ್ಯಪುರಂನ ಚಾಮುಂಡಿವನದಲ್ಲಿ ಗುರುವಾರ ಚಾಮುಂಡೇಶ್ವರಿ ಮತ್ತು ಕರುಮಾರಿಯಮ್ಮ ದೇವಸ್ಥಾನ ಟ್ರಸ್ಟ್ ವತಿಯಿಂದ 95ನೇ ವರ್ಷದ ವಿಶೇಷ ಕರಗ ಮಹೋತ್ಸವ ಸಂಭ್ರಮದಿಂದ ನಡೆಯಿತು

ಆಸ್ಪತ್ರೆಗಳ ಬಲವರ್ಧನೆ: ಶಸ್ತ್ರಚಿಕಿತ್ಸೆ ಪ್ಯಾಕೇಜ್ ದರ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳ ಬಲವರ್ಧನೆಗೆ ‘ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ’ ಯೋಜನೆಯಡಿ ಮಂಡಿಚಿಪ್ಪು ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆಯ ಪ್ಯಾಕೇಜ್ ದರ ಪರಿಷ್ಕರಣೆ ಮಾಡಿ, ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಯೋಜನೆಯಡಿ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಮಂಡಿಚಿಪ್ಪು ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆಗೆ ಪ್ರೋತ್ಸಾಹ ನೀಡಲು, ಚಿಕಿತ್ಸಾ ವೆಚ್ಚದ ಶೇ 100 ರಷ್ಟು ಹಣವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಿಂದ ಸಂಸ್ಥೆಗೆ ಮರು ಪಾವತಿಸಲು ನಿರ್ದೇಶನ ನೀಡಲಾಗಿದೆ.

ಯೋಜನೆಯಡಿ ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆಗೆ ₹ 65 ಸಾವಿರ ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆಗೆ ₹ 1 ಲಕ್ಷ ನಿಗದಿಪಡಿಸಲಾಗಿದೆ. ಈ ಮೊತ್ತದಲ್ಲಿ ಶೇ 100 ರಷ್ಟು ಹಣವನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ನೀಡಲಾಗುತ್ತದೆ. ಈ ಮೊದಲು ಶೇ 75 ರಷ್ಟು ಹಣವನ್ನು ಮಾತ್ರ ಸಂಸ್ಥೆಗೆ ನೀಡಲಾಗುತ್ತಿತ್ತು.

ಶಸ್ತ್ರಚಿಕಿತ್ಸೆ ನಡೆಸುವ ವೈದ್ಯರಿಗೆ ಪ್ರೋತ್ಸಾಹ ಧನವನ್ನೂ ನೀಡಲಾಗುತ್ತದೆ. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ತಜ್ಞ ವೈದ್ಯರ ಕೊರತೆಯಿದ್ದರೆ, ಇತರೆ ಸರ್ಕಾರಿ ಅಥವಾ ಸ್ವಾಯತ್ತ ಸಂಸ್ಥೆಯಿಂದ ವೈದ್ಯರ ನೆರವು ಪಡೆಯಬಹುದಾಗಿದೆ. ಅವರಲ್ಲಿ ಖಾಸಗಿ ವೈದ್ಯರು ಶೇ 100 ರಷ್ಟು ಪ್ರೋತ್ಸಾಹಧನ ಹಾಗೂ ಸ್ವಾಯತ್ತ ಆರೋಗ್ಯ ಸಂಸ್ಥೆಗಳ ವೈದ್ಯರು ಶೇ 75 ರಷ್ಟು ಪ್ರೋತ್ಸಾಹ ಧನ ಪಡೆಯಲು ಅರ್ಹರಾಗಿರುತ್ತಾರೆ ಎಂದು ತಿಳಿಸಲಾಗಿದೆ.

ಖಾಸಗಿ ಅನುಭವಿ ಶಸ್ತ್ರಚಿಕಿತ್ಸಕನಿಗೆ ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆಗೆ ₹ 9,750 ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆಗೆ ₹ 15 ಸಾವಿರ ನಿಗದಿಪಡಿಸಲಾಗಿದೆ. ಸರ್ಕಾರಿ ಸ್ವಾಯತ್ತ ಸಂಸ್ಥೆಯ ವೈದ್ಯರಿಗೆ ಕ್ರಮವಾಗಿ ₹ 7,313 ಹಾಗೂ ₹ 11,250 ನಿಗದಿಪಡಿಸಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಅನುಕಂಪದ ಆಧಾರದ ನೇಮಕಾತಿ ಪ್ರಕ್ರಿಯೆ

ವಿಳಂಬ ತಡೆಗೆ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಕಂಪದ ಆಧಾರದ ನೇಮಕಾತಿ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬ ತಪ್ಪಿಸುವ ನಿಟ್ಟಿನಲ್ಲಿ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿರುವ ಹೈಕೋರ್ಟ್, ಇವುಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಕಲಬುರಗಿ ಜಿಲ್ಲೆಯ ಜೇವರ್ಗಿ ತಹಶೀಲ್ದಾರ್ ಕಚೇರಿಯಲ್ಲಿ ಜವಾನ ಹುದ್ದೆಯಲ್ಲಿದ್ದ ವ್ಯಕ್ತಿಯೊಬ್ಬರ ಕುಟುಂಬಕ್ಕೆ ಅನುಕಂಪದ ಆಧಾರದಡಿ ಕೆಲಸ ನೀಡಬೇಕಾದ ಪ್ರಕರಣವೊಂದಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಂ. ನವಾಜ್ ನೇತೃತ್ವದ ವಿಭಾಗೀಯ ನ್ಯಾಯಪೀಠ (ಕಲಬುರಗಿ), ‘ಈ ಪ್ರಕರಣದಲ್ಲಿ ಅರ್ಹ ಅವಲಂಬಿತರಿಗೆ ನಿಯಮಗಳನ್ನು ಪಾಲಿಸಲು ನ್ಯಾಯಯುತ ಅವಕಾಶ ನಿರಾಕರಿಸಲಾಗಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) 2017ರಲ್ಲಿ ನೀಡಿರುವ ಆದೇಶದ ಪ್ರಕಾರ ಎಂಟು ವಾರಗಳಲ್ಲಿ ಮೃತರ ಪುತ್ರ ಮಹಬೂಬ್ ಅವರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಿ’ ಎಂದು ಸರ್ಕಾರಕ್ಕೆ ನಿರ್ದೇಶಿಸಿದೆ.



ಮಾರ್ಗಸೂಚಿಗಳು
- ಅಧಿಕಾರಿಗಳು ಎಲ್ಲಾ ರೀತಿಯ ಅನುಕಂಪ ಆಧರಿತ ನೇಮಕಾತಿ ಅರ್ಜಿಗಳನ್ನು 30 ದಿನಗಳ ಒಳಗೆ ಲಿಖಿತವಾಗಿ ಸ್ವೀಕರಿಸಬೇಕು.
- ಅರ್ಜಿಗಳ ಸ್ಥಿತಿ, ಯಾವುದೇ ದಾಖಲೆಗಳ ಕೊರತೆ, ಅವಲಂಬಿತರ ಅರ್ಜಿ ಸಲ್ಲಿಸುವ ಹಕ್ಕುಗಳು ಮತ್ತು ಅನ್ವಯಿಸುವ ಮಿತಿಯ ಅವಧಿಯನ್ನು ನಿರ್ದಿಷ್ಟಪಡಿಸಬೇಕು.
- ಮೃತ ವ್ಯಕ್ತಿಯ ವಾರಸುದಾರರು ಮತ್ತು ಅನಕ್ಷರಸ್ಥ ಅರ್ಜಿದಾರರು ಸರಿಯಾದ ಅರ್ಜಿ ಸಲ್ಲಿಸುವಲ್ಲಿ ಇಲಾಖೆಗಳು ಅವರಿಗೆ ಸಹಾಯ ಮಾಡಬೇಕು ಮತ್ತು ಈ ಬಗ್ಗೆ ಅವಲಂಬಿತರಿಗೆ ಮಾರ್ಗದರ್ಶನ ನೀಡಬೇಕು.
- ಅರ್ಜಿಗಳ ಕುರಿತ ನಿರ್ಧಾರಗಳನ್ನು ಅರ್ಜಿ ಸ್ವೀಕರಿಸಿದ 90 ದಿನಗಳ ಒಳಗೆ ತೆಗೆದುಕೊಳ್ಳಬೇಕು.
- ತಿರಸ್ಕರಿಸಿದ ಅರ್ಜಿಗಳಿಗೆ ಸಮಂಜಸವಾದ ಕಾರಣಸಹಿತ ಆದೇಶಗಳನ್ನು ಒದಗಿಸಬೇಕು.
- ಈ ಸಂಬಂಧ ಸರ್ಕಾರ ಏಕರೂಪದ ಪ್ರಮಾಣಿತ ಕಾರ್ಯಾಚರಣಾ ವಿಧಾನ (ಎಸ್‌ಒಪಿ) ಜಾರಿಗೆ ತರಬೇಕು.
- ಅನುಕಂಪದ ಆಧಾರದಡಿ ನೇಮಕಾತಿಗಳನ್ನು ಮಾಡುವ ಅಧಿಕಾರಿಗಳಿಗೆ ಸೂಕ್ತ ತರಬೇತಿ ನೀಡಬೇಕು.

ಕೌನ್ಸೆಲಿಂಗ್: 1300 ನೌಕರರ ವರ್ಗಾವಣೆ– ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಯಲ್ಲಿ ಇದೇ ಮೊದಲ ಬಾರಿಗೆ ಕೌನ್ಸೆಲಿಂಗ್ ಮೂಲಕ 1,300 ನೌಕರರನ್ನು ವರ್ಗಾವಣೆ ಮಾಡಲಾಗಿದೆ ಎಂದು ಇಲಾಖಾ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

31 ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿಗಳ ಕಾರ್ಯದರ್ಶಿ ಗ್ರೇಡ್–1 ಮತ್ತು ಗ್ರೇಡ್–2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವರ್ಗಾವಣೆ ಪ್ರಕ್ರಿಯೆಯನ್ನು ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ಪೂರ್ಣಗೊಳಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ವರ್ಗಾವಣೆಗಾಗಿ ಒಟ್ಟು 2,697 ನೌಕರರಿಂದ ಅರ್ಜಿಗಳು ಸ್ವೀಕೃತವಾಗಿದ್ದವು. ಅರ್ಜಿಗಳ ಪರಿಶೀಲನೆ ಬಳಿಕ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅರ್ಹತೆ ಹೊಂದಿದ 1,300 ನೌಕರರ ಕೌನ್ಸೆಲಿಂಗ್ ನಡೆಸಿ, ಡಿಜಿಟಲ್ ಸಹಿ ಮಾಡಿದ ವರ್ಗಾವಣೆ ಆದೇಶಗಳನ್ನು ಸ್ಥಳದಲ್ಲೇ ವಿತರಿಸಿದರು ಎಂದು ಪ್ರಿಯಾಂಕ್ ಹೇಳಿದ್ದಾರೆ.

ಜುಲೈ 25 ರಂದು ಮೊದಲ ಮತ್ತು ಎರಡನೇ ಸುತ್ತಿನ ಕೌನ್ಸೆಲಿಂಗ್ ನಡೆಸಲಾಯಿತು. ಇದರಲ್ಲಿ ವಿಶೇಷ ಪ್ರಕರಣಗಳಾದ ಗಂಭೀರ ಅನಾರೋಗ್ಯ, ವಿಶೇಷ ಚೇತನರ ಪ್ರಕರಣಗಳನ್ನು ಕೈಗೆತ್ತಿಕೊಳ್ಳಲಾಯಿತು. ಮೊದಲ ಮತ್ತು ಎರಡನೇ ಸುತ್ತಿನಲ್ಲಿ 161 ನೌಕರರಿಗೆ, ಜುಲೈ 28 ರಂದು ಎರಡನೇ ಹಂತದಲ್ಲಿ ಸಾಮಾನ್ಯ ಕೋರಿಕೆ ಪ್ರಕರಣಗಳ 619 ನೌಕರರಿಗೆ, ಜು.29 ಮತ್ತು 30 ರಂದು ಕೊನೆಯ ಹಂತದಲ್ಲಿ ಕಡ್ಡಾಯ ವರ್ಗಾವಣೆಯ ಕೌನ್ಸೆಲಿಂಗ್ ಅನ್ನು ನಡೆಸಿ, 520 ನೌಕರರಿಗೆ ಡಿಜಿಟಲ್ ಸಹಿ ಮಾಡಿದ ವರ್ಗಾವಣೆ ಆದೇಶ ಪತ್ರಗಳನ್ನು ನೀಡಲಾಯಿತು ಎಂದು ತಿಳಿಸಿದಾರೆ.

ಕಡೂರು ತಾಲ್ಲೂಕು ಎಮ್ಮೆದೊಡ್ಡಿಯಲ್ಲಿ ಘಟನೆ • ಕೆಲಹೊತ್ತಿನ ಬಳಿಕ ಕಳೇಬರ ಪತ್ತೆ

ದಾಳಿ ಮಾಡಿದ ಚಿರತೆ ಅಟ್ಟಾಡಿಸಿದರು

ಪ್ರಜಾವಾಣಿ ವಾರ್ತೆ

ಕಡೂರು (ಚಿಕ್ಕಮಗಳೂರು): ತಾಲ್ಲೂಕಿನ ಎಮ್ಮೆದೊಡ್ಡಿ ಬಳಿ ಗುರುವಾರ ಬೈಕ್ ಸವಾರರ ಮೇಲೆ ಚಿರತೆ ದಾಳಿ ಮಾಡಿದ್ದು, ಸುದ್ದಿ ತಿಳಿದು ಗ್ರಾಮಸ್ಥರು ಚಿರತೆ ಅಟ್ಟಾಡಿಸಿ ಕಲ್ಲುಗಳನ್ನು ಎಸೆದಿದ್ದಾರೆ.

ಈ ಘಟನೆಯ ಕೆಲ ಹೊತ್ತಿನಲ್ಲೇ ಸಮೀಪದ ಮದಗದ ಕೆರೆಯಲ್ಲಿ ಚಿರತೆಯೊಂದರ ಕಳೇಬರವು ಪತ್ತೆಯಾಗಿದೆ.

‘ಕಳೇಬರದಲ್ಲಿ ಗಾಯದ ಗುರುತುಗಳಿವೆ. ಮರಣೋತ್ತರ ಪರೀಕ್ಷೆ ವರದಿ ಬಳಿಕ ಇದು, ಅದೇ ಚಿರತೆಯೊ, ಬೇರೆಯದೊ ಎಂದು ತಿಳಿಯಲಿದೆ’ ಎಂದು ಉಪಅರಣ್ಯ ಸಂರಕ್ಷಣಾಧಿಕಾರಿ ರಮೇಶ್‌ಬಾಬು ತಿಳಿಸಿದ್ದಾರೆ.



ಕಡೂರಿನ ಎಮ್ಮೆದೊಡ್ಡಿಯ ಮದಗದಕೆರೆಯಲ್ಲಿ ಗುರುವಾರ ಪತ್ತೆಯಾದ ಚಿರತೆಯ ಕಳೇಬರವನ್ನು ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲಿಸಿದರು

ಬೆಳಿಗ್ಗೆ ಸಖರಾಯಪಟ್ಟಣಕ್ಕೆ ಬೈಕ್‌ನಲ್ಲಿ ಹೋಗುತ್ತಿದ್ದ ಹೊಸ ಸಿದ್ಧರಹಳ್ಳಿಯ ಮಂಜಪ್ಪ (56), ಹಳೇ ಸಿದ್ಧರಹಳ್ಳಿಯ ಮೂರ್ತಪ್ಪ (55) ಚಿರತೆ ದಾಳಿಯಿಂದ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಿರತೆ ದಾಳಿ ವಿಷಯ ತಿಳಿಯುತ್ತಿದ್ದಂತೆ ಸ್ಥಳದಲ್ಲಿ ಜಮಾಯಿಸಿದ ನೂರಾರು ಜನರು ಚಿರತೆಯನ್ನು ಅಟ್ಟಾಡಿಸಿದ್ದರು. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಸ್ಥಳಕ್ಕೆ ಧಾವಿಸಿದ ಅರಣ್ಯ ಇಲಾಖೆ ಅಧಿಕಾರಿಗಳು, ಚಿರತೆ ಸೆರೆಗೆ ಬೋನು ಇರಿಸಿದರು. ಇದೇ ವೇಳೆ ಚಿರತೆ ಮೃತದೇಹ ಕಂಡುಬಂತು.

‘ಬೈಕ್ ಸವಾರರ ಮೇಲೆ ದಾಳಿ ಮಾಡಿರುವ ಚಿರತೆಯೇ ಬೇರೆ, ಇಲ್ಲಿ ಸತ್ತಿರುವ ಚಿರತೆಯೇ ಬೇರೆ. ದಾಳಿ ಮಾಡಿರುವ ಚಿರತೆ ಸೆರೆ ಹಿಡಿದು ಸ್ಥಳಾಂತರ ಮಾಡಬೇಕು’ ಎಂದು ಗ್ರಾಮಸ್ಥರು ಒತ್ತಾಯಿಸಿದರು.

‘ಚಿರತೆ ಕಳೇಬರದ ಮರಣೋತ್ತರ ಪರೀಕ್ಷೆ ವರದಿ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದೂ ಉಪ ಅರಣ್ಯ ಸಂರಕ್ಷಣಾಧಿಕಾರಿ ರಮೇಶ್‌ಬಾಬು ಅವರು ಪ್ರತಿಕ್ರಿಯಿಸಿದರು.

9 ಜಿಲ್ಲೆಗಳ ಸಚಿವರು, ಶಾಸಕರ ಜೊತೆ ಮುಖ್ಯಮಂತ್ರಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ, ಬಾಗಲಕೋಟೆ, ಗದಗ, ಹಾವೇರಿ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ಶಾಸಕರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಸಭೆ ನಡೆಸಿದರು.

ಶಾಸಕರ ಸಮಸ್ಯೆಗಳನ್ನು ಆಲಿಸಿದ ಮುಖ್ಯಮಂತ್ರಿ, ಅವುಗಳನ್ನು ಪರಿಹರಿಸುವ ಮತ್ತು ಬೇಡಿಕೆಗಳಿಗೆ ಸ್ಪಂದಿಸುವ ಭರವಸೆ ನೀಡಿದ್ದಾರೆ.

ರಾಜ್ಯದ ಆರ್ಥಿಕ ಪರಿಸ್ಥಿತಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ಸಭೆಯಲ್ಲಿ ವಿವರಿಸಿದ ಅವರು, ಸರ್ಕಾರದ ಯೋಜನೆಗಳನ್ನು ಫಲಾನುಭವಿಗಳ ಮನೆ ಬಾಗಿಲಿಗೆ ತಲುಪಿಸುವ ಕೆಲಸವನ್ನು ಶಾಸಕರು ಮಾಡಬೇಕು ಎಂದು ಕಿವಿಮಾತು ಹೇಳಿದ್ದಾರೆ.



ಸಿದ್ದರಾಮಯ್ಯ

ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಯ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು. ಕ್ಷೇತ್ರಗಳ ಅಭಿವೃದ್ಧಿಗೆ ಈಗಾಗಲೇ ವಿಶೇಷ ಅನುದಾನ ನೀಡಲಾಗಿದೆ. ಈ ಅನುದಾನ ಸದ್ಬಳಕೆಯಾಗುವಂತೆ ನೋಡಿಕೊಳ್ಳಬೇಕು. ರಸಗೊಬ್ಬರ ವಿಚಾರದಲ್ಲಿ ರೈತರಲ್ಲಿ ಯಾವುದೇ ಗೊಂದಲ ಆಗದಂತೆ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದ್ದಾರೆ.

ಶುಕ್ರವಾರ, ಆಗಸ್ಟ್ 1, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 212 | ಪುಟ 16
prajavani.net prajavani www.prajavani.net
ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರೀಲ್ಸ್‌ಗೆ ಟಿಟಿಡಿ ವಿರೋಧ
ತಿರುಪತಿಯ ವೆಂಕಟೇಶ್ವರ ದೇಗುಲದ ಆವರಣದಲ್ಲಿ ರೀಲ್ಸ್ ವಿಡಿಯೊ ಚಿತ್ರೀಕರಣಕ್ಕೆ ತಿರುಮಲ ತಿರುಪತಿ ದೇವಸ್ಥಾನ ಮಂಡಳಿಯು (ಟಿಟಿಡಿ) ವಿರೋಧ ವ್ಯಕ್ತಪಡಿಸಿದೆ. ರೀಲ್ಸ್ ಮಾಡಿದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದೆ





ಕೆನಡಾದ ಬೆಡಗಿಗೆ ಚಿನ್ನ
ಸಿಂಗಪುರದ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ 200 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಕೆನಡಾದ ಸಮ್ಮರ್ ಮೆಕಿಂಟೋಷ್. ಇದು ಈ ಕೂಟದಲ್ಲಿ ಅವರಿಗೆ ಮೂರನೇ ಚಿನ್ನ

ಸೆನ್ಸೆಕ್ಸ್ 81,185 | ನಿಫ್ಟಿ 24,768 | $/₹ 87.65 | ಚಿನ್ನ (Std. 10g) ₹1,03,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,18,600 (ಬೆಂಗಳೂರು)

ಏಳೂ ಆರೋಪಿಗಳ ಖುಲಾಸೆ

ಮಾಲೇಗಾಂವ್ ಪ್ರಕರಣ: 17 ವರ್ಷಗಳ ಬಳಿಕ ಆದೇಶ ಪ್ರಕಟ

ಪ್ರಮುಖ ಅಂಶಗಳು
- 2008ರ ಸೆ. 29ರಂದು ನಡೆದಿದ್ದ ಬಾಂಬ್ ಸ್ಫೋಟ
- 'ಗ್ರಹಿಕೆ ಆಧಾರದಲ್ಲಿ ತಪ್ಪಿತಸ್ಥರು ಎನ್ನಲಾಗದು'
- ಮೃತರ ಕುಟುಂಬಕ್ಕೆ ತಲಾ ₹ 2 ಲಕ್ಷ ಪರಿಹಾರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ/ಪಿಟಿಐ



ಮೇಜರ್ (ನಿವೃತ್ತ) ಸಮೀರ್ ಕುಲಕರ್ಣಿ, ರಮೇಶ್ ಉಪಾಧ್ಯಾಯ, ಲೆಫ್ಟಿನೆಂಟ್ ಕರ್ನಲ್ ಪ್ರಸಾದ ಪುರೋಹಿತ, ಪ್ರಜ್ಞಾ ಸಿಂಗ್ ಠಾಕೂರ್, ಅಜಯ್ ರಾಹಿರ್ಕರ್, ಸುಧಾಕರ್ ಚತುರ್ವೇದಿ

ಮುಂಬೈ: ಮಹಾರಾಷ್ಟ್ರದ ಮಾಲೇಗಾಂವ್ ಪಟ್ಟಣದಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಎಲ್ಲ ಏಳು ಆರೋಪಿಗಳನ್ನು ಖುಲಾಸೆಗೊಳಿಸಿ ಇಲ್ಲಿನ ಎನ್‌ಐಎ ವಿಶೇಷ ನ್ಯಾಯಾಲಯ ಗುರುವಾರ ಆದೇಶ ನೀಡಿದೆ.

'ಆರೋಪಿಗಳ ವಿರುದ್ಧ ನಂಬಲರ್ಹ ಹಾಗೂ ಬಲವಾದ ಸಾಕ್ಷ್ಯಗಳು ಇಲ್ಲ' ಎಂದು ನ್ಯಾಯಾಲಯ ಹೇಳಿದೆ.

'ಭಯೋತ್ಪಾದನೆಗೆ ಧರ್ಮ ಇಲ್ಲ. ಅಲ್ಲದೇ, ಕೇವಲ ಗ್ರಹಿಕೆ ಆಧಾರದ ಮೇಲೆ ಅಪರಾಧಿಗಳೆಂದು ಘೋಷಿಸಲು ಸಾಧ್ಯ ಇಲ್ಲ. ಸಂದೇಹವನ್ನು ಯಾವತ್ತಿಗೂ ನೈಜ ಸಾಕ್ಷ್ಯವೆಂದು ಪರಿಗಣಿಸಲಾಗದು' ಎಂದು ಆದೇಶ ಪ್ರಕಟಿಸಿದ ವಿಶೇಷ ನ್ಯಾಯಾಧೀಶ ಎ.ಕೆ.ಲಾಹೋಟಿ ಹೇಳಿದರು.

ಬಾಂಬ್ ಸ್ಫೋಟದಿಂದ ಪ್ರಾಣ ಕಳೆದುಕೊಂಡಿರುವ 6 ಜನರ ಕುಟುಂಬಗಳಿಗೆ ತಲಾ ₹2 ಲಕ್ಷ ಹಾಗೂ ಗಾಯಗೊಂಡಿದ್ದ 101 ಮಂದಿಗೆ ತಲಾ ₹50 ಸಾವಿರ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ನ್ಯಾಯಾಲಯ ನಿರ್ದೇಶನ ನೀಡಿದೆ.

ಬಿಜೆಪಿಯ ಮಾಜಿ ಸಂಸದೆ ಪ್ರಜ್ಞಾ ಠಾಕೂರ್, ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಪುರೋಹಿತ, ಮೇಜರ್ ರಮೇಶ್ ಉಪಾಧ್ಯಾಯ (ಸದ್ಯ ನಿವೃತ್ತ), ಅಜಯ್ ರಾಹಿರ್ಕರ್, ಸುಧಾಕರ್ ದ್ವಿವೇದಿ, ಸುಧಾಕರ್ ಚತುರ್ವೇದಿ ಹಾಗೂ ಸಮೀರ್ ಕುಲಕರ್ಣಿ ಖುಲಾಸೆಗೊಂಡವರು.

ಇವರ ವಿರುದ್ಧ ಯುಎಪಿಎ, ಭಾರತೀಯ ದಂಡ ಸಂಹಿತೆ ಹಾಗೂ ಶಸ್ತ್ರಾಸ್ತ್ರಗಳ ಕಾಯ್ದೆಯ ವಿವಿಧ ಅವಕಾಶಗಳಡಿ ಪ್ರಕರಣ ದಾಖಲಿಸಲಾಗಿತ್ತು. ಒಟ್ಟು 323 ಸಾಕ್ಷಿಗಳ ಹೇಳಿಕೆ ದಾಖಲಿಸಲಾಗಿತ್ತು. ಈ ಪೈಕಿ, 37 ಮಂದಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರು.

ಮುಂಬೈನಿಂದ 200 ಕಿ.ಮೀ. ದೂರದಲ್ಲಿರುವ ಮಾಲೇಗಾಂವ್ ಪಟ್ಟಣದಲ್ಲಿ, 2008ರ ಸೆಪ್ಟೆಂಬರ್ 29ರಂದು ದ್ವಿಚಕ್ರ ವಾಹನವೊಂದರಲ್ಲಿ ಇಡಲಾಗಿದ್ದ ಬಾಂಬ್ ಸ್ಫೋಟಗೊಂಡು ಆರು ಜನ ಮೃತಪಟ್ಟು, ಇತರ 101 ಮಂದಿ ಗಾಯಗೊಂಡಿದ್ದರು. 2018ರಲ್ಲಿ ಆರಂಭಗೊಂಡಿದ್ದ ತನಿಖೆ ಕಳೆದ ಏಪ್ರಿಲ್ 19ರಂದು ಮುಕ್ತಾಯಗೊಂಡಿತ್ತು. ಘಟನೆ ನಡೆದು 17 ವರ್ಷಗಳ ನಂತರ, ಪ್ರಕರಣದ ಎಲ್ಲ ಆರೋಪಿಗಳು ದೋಷಮುಕ್ತರಾಗಿದ್ದಾರೆ.

ತನಿಖೆಯ ಹಾದಿ: ಆರಂಭದಲ್ಲಿ, ರಾಜ್ಯದ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ತನಿಖೆ ಕೈಗೊಂಡಿತ್ತು. ಬಲಪಂಥೀಯ ಸಂಘಟನೆ 'ಅಭಿನವ ಭಾರತ'ದ ಸದಸ್ಯರ ವಿರುದ್ಧ ಬೊಟ್ಟು ಮಾಡಿತ್ತು. ನಂತರ, ತನಿಖೆಯನ್ನು ಎನ್‌ಐಎಗೆ ಹಸ್ತಾಂತರಿಸಲಾಯಿತು.

ಎನ್‌ಐಎ, ಪ್ರಜ್ಞಾ ಠಾಕೂರ್ ಅವರಿಗೆ ಕ್ಲೀನ್‌ಚಿಟ್ ನೀಡಿತ್ತು. ಇದನ್ನು ನ್ಯಾಯಾಲಯ ಒಪ್ಪಿರಲಿಲ್ಲ. ಮೇಲ್ನೋಟಕ್ಕೆ ಅವರ ವಿರುದ್ಧ ಸಾಕ್ಷ್ಯಗಳಿವೆ ಎಂದಿದ್ದ ಕೋರ್ಟ್, ಮರುತನಿಖೆಗೆ ಆದೇಶಿಸಿತ್ತು.

ಮುಸ್ಲಿಂ ಬಾಹುಳ್ಯವಿರುವ ಮಾಲೇಗಾಂವ್‌ನಲ್ಲಿ ಬಾಂಬ್ ಸ್ಫೋಟಿಸುವ ಮೂಲಕ, ಕೆಲ ಮುಸ್ಲಿಮರನ್ನು ಭಯೋತ್ಪಾದಕರಂತೆ ಬಿಂಬಿಸಿ ಕೋಮು ಸಂಘರ್ಷ ಉಂಟುಮಾಡುವ ಉದ್ದೇಶದಿಂದ ಕೆಲವು ಸಂಚುಕೋರರು ಈ ಕೃತ್ಯ ಎಸಗಿದ್ದರು ಎಂದು ಎನ್‌ಐಎ ಹೇಳಿದೆ.

ಬಿಗಿ ಬಂದೋಬಸ್ತ್: ಆದೇಶ ಪ್ರಕಟಿಸುವುದಕ್ಕೂ ಮುನ್ನ ಎಲ್ಲ ಏಳು ಜನ ಆರೋಪಿಗಳು, ದಕ್ಷಿಣ ಮುಂಬೈನಲ್ಲಿರುವ ನ್ಯಾಯಾಲಯದ ಆವರಣದಲ್ಲಿ ಹಾಜರಿದ್ದರು. ಎಲ್ಲರೂ ಜಾಮೀನಿನ ಮೇಲೆ ಹೊರಗಿದ್ದರು. ನ್ಯಾಯಾಲಯ ಆವರಣ ಹಾಗೂ ಹೊರಗೆ ತಡಗೋಡೆಗಳನ್ನು ಅಳವಡಿಸಿ, ವ್ಯಾಪಕ ಪೊಲೀಸ್ ಬಂದೋಬಸ್ತ್ ಹಾಕಲಾಗಿತ್ತು.

ಇನ್ನಷ್ಟು ಸುದ್ದಿಗಳು 9 11

ಕೋರ್ಟ್ ಹೇಳಿದ್ದೇನು?
- ಬಾಂಬ್ ಸ್ಫೋಟಕ್ಕೆ ಕಾರಣವಾಗಿದ್ದ ದ್ವಿಚಕ್ರ ವಾಹನ ಪ್ರಜ್ಞಾ ಅವರಿಗೆ ಸೇರಿದ್ದು ಅಥವಾ ಅವರ ಹೆಸರಿನಲ್ಲಿ ನೋಂದಣಿಯಾಗಿದ್ದು ಎಂಬುದನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ
- ಬಾಂಬ್ ಸ್ಫೋಟವಾಗಿತ್ತು ಎಂಬುದನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಿದೆ. ಬಾಂಬ್ ಅನ್ನು ದ್ವಿಚಕ್ರ ವಾಹನದಲ್ಲಿ ಇಡಲಾಗಿತ್ತು ಎಂಬುದನ್ನು ಸಾಬೀತುಪಡಿಸಿಲ್ಲ
- ತನಿಖೆಯು ಸಾಕಷ್ಟು ಲೋಪದೋಷಗಳಿಂದ ಕೂಡಿದೆ. ಸಾಕ್ಷ್ಯಗಳೇ ಇರದ ಕಾರಣ ಆರೋಪಿಗಳು ಸಂದೇಹದ ಲಾಭ ಪಡೆಯಲು ಅರ್ಹರು
- ಪ್ರಾಸಿಕ್ಯೂಷನ್ ಒದಗಿಸಿರುವ ಸಾಕ್ಷ್ಯಗಳು ಆರೋಪಿಗಳನ್ನು ತಪ್ಪಿತಸ್ಥರೆಂದು ತೀರ್ಮಾನಿಸುವುದಕ್ಕೆ ಪೂರಕವಾಗಿಲ್ಲ
- ಯುಎಪಿಎ ಕಾಯ್ದೆಯ ಅವಕಾಶಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ

> ಕೇಸರಿ ಭಯೋತ್ಪಾದನೆ ಎಂಬುದು ಇರಲಿಲ್ಲ. ಮುಂದೆಯೂ ಇರುವುದಿಲ್ಲ
> **ದೇವೇಂದ್ರ ಫಡಣವೀಸ್,** ಮಹಾರಾಷ್ಟ್ರ ಮುಖ್ಯಮಂತ್ರಿ

> ಏಳು ಜನ ಆರೋಪಿಗಳನ್ನು ಖುಲಾಸೆಗೊಳಿಸಿ ನ್ಯಾಯಾಲಯ ನೀಡಿರುವ ತೀರ್ಪು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ ಮೇಲ್ಮನವಿ ಸಲ್ಲಿಸಬೇಕು
> **ಇಮ್ತಿಯಾಜ್ ಜಲೀಲ್,** ಎಐಎಂಐಎಂ ಮುಖಂಡ

> ನ್ಯಾಯಾಲಯದ ಈ ತೀರ್ಪು ಕಾಂಗ್ರೆಸ್ ಪಕ್ಷಕ್ಕೆ ಮಾಡಿರುವ ಕಪಾಳಮೋಕ್ಷ. ಕೇಸರಿ ಭಯೋತ್ಪಾದನೆ ಸಂಕಥನ ಸೃಷ್ಟಿಸಿದ್ದಕ್ಕಾಗಿ ಕಾಂಗ್ರೆಸ್ ಪಕ್ಷ ಕ್ಷಮೆ ಕೇಳಬೇಕು
> **ಶ್ರೀಕಾಂತ ಶಿಂದೆ,** ಶಿವಸೇನಾ ಸಂಸದ

> ಭಯೋತ್ಪಾದನೆಯನ್ನು ಯಾವುದೇ ಧರ್ಮದೊಂದಿಗೆ ತಳುಕು ಹಾಕಬಾರದು. ಯಾವ ಮತವೂ ಹಿಂಸೆಗೆ ಪ್ರಚೋದಿಸುವುದಿಲ್ಲ
> **ದಿಗ್ವಿಜಯ ಸಿಂಗ್,** ಕಾಂಗ್ರೆಸ್ ನಾಯಕ

ಪಾಕಿಸ್ತಾನದ ಜತೆ ಹೊಸ ವ್ಯಾಪಾರ ಒಪ್ಪಂದ ಘೋಷಿಸಿದ ಅಮೆರಿಕ ಅಧ್ಯಕ್ಷ

ಭಾರತದ್ದು 'ಸತ್ತ' ಆರ್ಥಿಕತೆ: ಟ್ರಂಪ್

ಪ್ರಜಾವಾಣಿ ವಾರ್ತೆ/ ಪಿಟಿಐ



ನವದೆಹಲಿ/ ವಾಷಿಂಗ್ಟನ್: ಭಾರತ ಮತ್ತು ರಷ್ಯಾ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪಾಕಿಸ್ತಾನದ ಜತೆ ಗುರುವಾರ ಹೊಸ ವ್ಯಾಪಾರ ಒಪ್ಪಂದವನ್ನು ಘೋಷಿಸಿದ್ದಾರೆ.

ಭಾರತದಿಂದ ಅಮೆರಿಕ ಆಮದು ಮಾಡಿಕೊಳ್ಳಲಿರುವ ಸರಕುಗಳ ಮೇಲೆ ಶೇಕಡ 25ರಷ್ಟು ಸುಂಕ ವಿಧಿಸಲಾಗುತ್ತದೆ ಎಂದು ಟ್ರಂಪ್ ಬುಧವಾರ ಪ್ರಕಟಿಸಿದ್ದರು. ಸುಂಕ ಪ್ರಹಾರದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದ್ದು, ಭಾರತದ ಆರ್ಥಿಕತೆ ಸತ್ತಿದೆ ಎಂದು 'ಟ್ರುತ್ ಸೋಷಿಯಲ್' ಸಾಮಾಜಿಕ ಮಾಧ್ಯಮದಲ್ಲಿ ವ್ಯಂಗ್ಯವಾಡಿದ್ದಾರೆ. ಪಾಕಿಸ್ತಾನದಲ್ಲಿ 'ತೈಲ ನಿಕ್ಷೇಪ'ಗಳನ್ನು ಅಭಿವೃದ್ಧಿಪಡಿಸಲು ಅಮೆರಿಕ ನೆರವಾಗಲಿದೆ ಎಂದೂ ಹೇಳಿಕೊಂಡಿದ್ದಾರೆ.

'ಆಪರೇಷನ್ ಸಿಂಧೂರ' ಸಮಯದಲ್ಲಿ ಭಾರತ–ಪಾಕಿಸ್ತಾನ ಸಂಘರ್ಷವನ್ನು ನಿಲ್ಲಿಸಲು ವಿದೇಶದ ಯಾವುದೇ ನಾಯಕರು ಭಾರತವನ್ನು ಕೇಳಿಕೊಂಡಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಲೋಕಸಭೆಗೆ ತಿಳಿಸಿದ್ದರು. ಅದರ ಮರುದಿನವೇ ಟ್ರಂಪ್, ಭಾರತ ವಿರುದ್ಧ ವಾಗ್ದಾಳಿ ಆರಂಭಿಸಿದ್ದಾರೆ. ರಷ್ಯಾದಿಂದ ರಕ್ಷಣಾ ಸಾಮಗ್ರಿ ಮತ್ತು ತೈಲ ಖರೀದಿಸಿದ್ದಕ್ಕಾಗಿ ಟ್ರಂಪ್ ಅವರು ಇದಕ್ಕೂ ಮುನ್ನ ಭಾರತವನ್ನು ಟೀಕಿಸಿದ್ದರು.

'ನಾವು ಪಾಕಿಸ್ತಾನದ ಜತೆ ಒಪ್ಪಂದ ಮಾಡಿಕೊಂಡಿದ್ದೇವೆ. ಆ ಮೂಲಕ ಪಾಕಿಸ್ತಾನ ಮತ್ತು ಅಮೆರಿಕವು ಬೃಹತ್ ತೈಲ ನಿಕ್ಷೇಪಗಳನ್ನು ಅಭಿವೃದ್ಧಿಪಡಿಸಲು ಒಟ್ಟಾಗಿ ಕೆಲಸ ಮಾಡಲಿವೆ. ಈ ಪಾಲುದಾರಿಕೆಯನ್ನು ಮುನ್ನಡೆಸುವ ತೈಲ ಕಂಪನಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಯಾರಿಗೆ ಗೊತ್ತು, ಬಹುಶಃ ಮುಂದೊಂದು ದಿನ ಅವರು (ಪಾಕಿಸ್ತಾನ) ಭಾರತಕ್ಕೆ ತೈಲ ಮಾರಾಟ ಮಾಡಬಹುದು' ಎಂದು ಟ್ರಂಪ್ ಬುಧವಾರ ರಾತ್ರಿ ತಮ್ಮ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಮೆಡ್ವೆಡೆವ್‌ಗೆ ತಿರುಗೇಟು: ರಷ್ಯಾದ ಮಾಜಿ ಅಧ್ಯಕ್ಷ ದಿಮಿತ್ರಿ ಮೆಡ್ವೆಡೆವ್ ವಿರುದ್ಧವೂ ಟ್ರಂಪ್ ಆಕ್ರೋಶ ಹೊರಹಾಕಿದ್ದಾರೆ. 'ಉಕ್ರೇನ್ ಜತೆಗಿನ ಯುದ್ಧವನ್ನು ಕೊನೆಗೊಳಿಸಲು ಅಮೆರಿಕವು ವಿಧಿಸುತ್ತಿರುವ ಪ್ರತಿಯೊಂದು ಗಡುವು ಕೂಡಾ, ರಷ್ಯಾ– ಅಮೆರಿಕ ನಡುವಿನ ಯುದ್ಧದತ್ತ ಇಡುತ್ತಿರುವ ಹೆಜ್ಜೆ' ಎಂದು ಮೆಡ್ವೆಡೆವ್ ಬುಧವಾರ ಹೇಳಿದ್ದರು.

'ಅಧ್ಯಕ್ಷರಾಗಿದ್ದಾಗ ಸಂಪೂರ್ಣ ವಿಫಲರಾಗಿದ್ದ ಮೆಡ್ವೆಡೆವ್ ತಾವು ಈಗಲೂ ಅಧ್ಯಕ್ಷರೆಂದು ಭಾವಿಸಿದ್ದಾರೆ. ನಾಲಿಗೆಯ ಮೇಲೆ ಹಿಡಿತ ಇಟ್ಟುಕೊಳ್ಳುವಂತೆ ಅವರಿಗೆ ಹೇಳುತ್ತಿದ್ದೇನೆ. ಅವರು ಅಪಾಯವನ್ನು ಆಹ್ವಾನಿಸುತ್ತಿದ್ದಾರೆ' ಎಂದು ಟ್ರಂಪ್ ಹರಿಹಾಯ್ದಿದ್ದಾರೆ.

6 ಕಂಪನಿಗಳಿಗೆ ನಿರ್ಬಂಧ
ಇರಾನ್ ಮೂಲದ ಕಂಪನಿಗಳ ಪೆಟ್ರೋಕೆಮಿಕಲ್ ಉತ್ಪನ್ನಗಳನ್ನು ಭಾರಿ ಪ್ರಮಾಣದಲ್ಲಿ ಖರೀದಿ ಮತ್ತು ಮಾರಾಟ ಮಾಡಿದ್ದಕ್ಕೆ ಭಾರತದ ಆರು ಕಂಪನಿಗಳ ಮೇಲೆ ಅಮೆರಿಕ ನಿರ್ಬಂಧ ಹೇರಿದೆ.

'ಇರಾನ್ ಆಡಳಿತವು ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಉತ್ತೇಜಿಸುವ ಕೆಲಸ ಮುಂದುವರಿಸಿದೆ' ಎಂದು ಅಮೆರಿಕ ವಿದೇಶಾಂಗ ಇಲಾಖೆ ಹೇಳಿದೆ.

11

ಬಾಲಕನ ಕೊಂದು ಬೆಂಕಿ ಹಚ್ಚಿದ ಅಪಹರಣಕಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಕೆರೆಯ ಶಾಂತಿನಿಕೇತನ ಬಡಾವಣೆಯಲ್ಲಿ ಟ್ಯೂಷನ್ ಮುಗಿಸಿಕೊಂಡು ಬುಧವಾರ ರಾತ್ರಿ ಮನೆಗೆ ತೆರಳುತ್ತಿದ್ದ ಬಾಲಕನನ್ನು ಅಪಹರಿಸಿ ಕೊಲೆ ಮಾಡಲಾಗಿದ್ದು, ಆರೋಪಿಗಳಿಗಾಗಿ ಹುಳಿಮಾವು ಠಾಣೆಯ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ನಿಶ್ಚಿತ್ (13) ಕೊಲೆಯಾದ ಬಾಲಕ. ನಿಶ್ಚಿತ್ ತಂದೆ ಕಾಲೇಜೊಂದರಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ನಿಶ್ಚಿತ್ ಮನೆಪಾಠಕ್ಕೆ ಹೋಗಿ ಮನೆಗೆ ವಾಪಸ್ ಬರುತ್ತಿದ್ದ. ಆಗ ಕಾರಿನಲ್ಲಿ ಬಂದ ದುಷ್ಕರ್ಮಿಗಳು, ಬಾಲಕನನ್ನು ಅಪಹರಣ ಮಾಡಿದ್ದರು. ನಂತರ, ನಿಶ್ಚಿತ್ ತಂದೆಗೆ ಕರೆ ಮಾಡಿದ್ದ ಆರೋಪಿಗಳು, ₹5 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಮೂಲಗಳು ತಿಳಿಸಿವೆ.

ಅಪಹರಣದ ಸುದ್ದಿ ಕೇಳಿ ನಿಶ್ಚಿತ್ ಪೋಷಕರು ಹಾಗೂ ಕುಟುಂಬಸ್ಥರು ಆಘಾತಕ್ಕೆ ಒಳಗಾಗಿದ್ದರು. ತಕ್ಷಣವೇ ಹುಳಿಮಾವು ಠಾಣೆಗೆ ಮಾಹಿತಿ ನೀಡಿದ್ದರು. ಆರೋಪಿಗಳ ಪತ್ತೆ ಹಾಗೂ ಬಾಲಕನ ರಕ್ಷಣಾ ಕಾರ್ಯಾಚರಣೆಯನ್ನು ಪೊಲೀಸರು ಆರಂಭಿಸಿದ್ದರು. ಮತ್ತೊಂದೆಡೆ ಬಾಲಕನ ಪೋಷಕರು, ಅಪಹರಣಕಾರರಿಗೆ ನೀಡಲು ₹5 ಲಕ್ಷ ನೀಡಿ ಮಗನನ್ನು ರಕ್ಷಿಸಲು ಮುಂದಾಗಿದ್ದರು. ಅಷ್ಟರಲ್ಲಿ ಬಾಲಕನ ಮೃತದೇಹವು ಕಗ್ಗಲಿಪುರ ರಸ್ತೆಯ ನಿರ್ಜನ ಪ್ರದೇಶದಲ್ಲಿ ಗುರುವಾರ ಸಂಜೆ ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಸದ್ಯ ಹುಳಿಮಾವು ಪೊಲೀಸರು ಆರೋಪಿಗಳಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಪ್ರತ್ಯೇಕ ತಂಡ ರಚಿಸಲಾಗಿದೆ. ಬಾಲಕನನ್ನು ಅಪಹರಣ ಮಾಡಿದ ಸ್ಥಳದ ಆಸುಪಾಸಿನಲ್ಲಿದ್ದ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.



ನಿಶ್ಚಿತ್

'ಬಾಲಕನ ಕುತ್ತಿಗೆ ಕೊಯ್ದು ಕೊಲೆ ಮಾಡಲಾಗಿದೆ. ಕೊಲೆ ಮಾಡಿದ ಬಳಿಕ ಮೃತ ದೇಹದ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಬಂಡೆಯ ಮೇಲೆ ಎಸೆದು ಆರೋಪಿಗಳು ಪರಾರಿ ಆಗಿದ್ದಾರೆ. ಮೃತದೇಹವು ಬಹುತೇಕ ಸುಟ್ಟು ಹೋಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಪೋಷಕರಿಗೆ ಕರೆ ಮಾಡಿದ್ದ ದೂರವಾಣಿ ಸಂಖ್ಯೆಯನ್ನು ಪಡೆದುಕೊಳ್ಳಲಾಗಿದೆ. ಕೆಲವು ಸುಳಿವು ಸಿಕ್ಕಿದ್ದು ಶೀಘ್ರದಲೇ ಆರೋಪಿಗಳನ್ನು ಬಂಧಿಸಲಾಗುವುದು' ಎಂದು ಪೊಲೀಸರು ಹೇಳಿದರು.

ಸ್ಥಳಕ್ಕೆ ಎಲೆಕ್ಟ್ರಾನಿಕ್ ಸಿಟಿ ಡಿಸಿಪಿ ಎಂ. ನಾರಾಯಣ್ ಹಾಗೂ ಬೆಂಗಳೂರು ಗ್ರಾಮಾಂತರ ಎಸ್‌ಪಿ ಸಿ.ಕೆ.ಬಾಬಾ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಧರ್ಮಸ್ಥಳ: ನೇತ್ರಾವತಿ ನದಿ ಪಕ್ಕದ ಕಾಡಿನಲ್ಲಿ ಮುಂದುವರಿದ ಶೋಧ ಕಾರ್ಯ

ಪುರುಷನ ಮೃತದೇಹದ ಅವಶೇಷ ಪತ್ತೆ

- ಪ್ರವೀಣಕುಮಾರ ಪಿ.ವಿ

ಮಂಗಳೂರು: ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದ ಮೃತದೇಹದ ಅವಶೇಷಗಳು ನೇತ್ರಾವತಿ ನದಿ ಪಕ್ಕದ ಕಾಡಿನಲ್ಲಿ ಗುರುವಾರ ಪತ್ತೆಯಾಗಿವೆ.

ಈ ಪ್ರಕರಣದ ಸಾಕ್ಷಿ ದೂರುದಾರ ಕಾಡಿನಲ್ಲಿ ತೋರಿಸಿ ಗುರುತು ಮಾಡಲಾಗಿದ್ದ ಆರನೇ ಜಾಗವನ್ನು ವಿಶೇಷ ತನಿಖಾ ತಂಡದ (ಎಸ್ಐಟಿ) ಸಮ್ಮುಖದಲ್ಲಿ ಗುರುವಾರ ಅಗೆಯಲಾಯಿತು. ಎಸ್ಐಟಿ ತಂಡದ ಜೊತೆ ಸುಮಾರು 20 ಕಾರ್ಮಿಕರು ಕಾಡಿನ ಒಳಗೆ ಬೆಳಿಗ್ಗೆ 11.30ರ ಸುಮಾರಿಗೆ ತೆರಳಿದ್ದರು. ಸಾಕ್ಷಿ ದೂರುದಾರ ತೋರಿಸಿದ್ದ ಆರನೇ ಜಾಗ ಅಗೆಯಲು ಶುರು ಮಾಡಿದ ಸ್ವಲ್ಪ ಹೊತ್ತಿನಲ್ಲೇ ಮೃತದೇಹದ ಅವಶೇಷ ಕಂಡುಬಂತು. ಅಲ್ಲಿ 2.5 ಅಡಿಯಿಂದ 3 ಅಡಿಗಳಷ್ಟು ಆಳಕ್ಕೆ ಅಗೆಯುವಾಗಲೇ ಮೃತದೇಹದ ಅವಶೇಷ ಪತ್ತೆಯಾಗಿದೆ.

6

ಜೋಶಿ ವಿರುದ್ಧ ತನಿಖೆಗೆ ತಂಡ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹಣಕಾಸಿನ ಅವ್ಯವಹಾರ ಸೇರಿ ವಿವಿಧ ದೂರುಗಳಿಗೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ವಿರುದ್ಧ ಸಮಗ್ರ ತನಿಖೆ ನಡೆಸಲು ಆರು ಅಧಿಕಾರಿಗಳ ತಂಡವನ್ನು ರಚಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿದೆ.

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಶಾಖೆ ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇಬ್ಬರು ಜಂಟಿ ನಿರ್ದೇಶಕರು, ಲೆಕ್ಕಾಧಿಕಾರಿ ಹಾಗೂ ಪತ್ರಾಂಕಿತ ವ್ಯವಸ್ಥಾಪಕರನ್ನು ತನಿಖಾ ಸಮಿತಿ ಒಳಗೊಂಡಿದೆ. 30 ದಿನಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ಕಸಾಪ ಹಾಲಿ ಅಧ್ಯಕ್ಷ ಮಹೇಶ ಜೋಶಿ ಅವರ ವಿರುದ್ಧ ಅನೇಕ ದೂರುಗಳು ಸಲ್ಲಿಕೆಯಾಗಿವೆ.

7

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ ಇದೆ.

₹8 ಕೋಟಿ ತೆರಿಗೆ ಸಂಗ್ರಹ ಗುರಿ

ಬೆಟ್ಟಹಲಸೂರು ಗ್ರಾಮಪಂಚಾಯಿತಿ ಮೊದಲ ಸುತ್ತಿನ ಗ್ರಾಮಸಭೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಟ್ಟಹಲಸೂರು ಗ್ರಾಮ-ಪಂಚಾಯಿತಿಯ 2025-26ನೇ ಸಾಲಿನ ಮೊದಲ ಸುತ್ತಿನ ಗ್ರಾಮ ಸಭೆಯನ್ನು ಪಂಚಾಯಿತಿ ಅಧ್ಯಕ್ಷೆ ಹೇಮಲತಾ ಎಸ್. ನಾಗರಾಜು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಗ್ರಾಮ ಪಂಚಾಯಿತಿಯನ್ನು ತ್ಯಾಜ್ಯ ಮುಕ್ತವಾಗಿಸುವ ನಿಟ್ಟಿನಲ್ಲಿ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಏಕಬಳಕೆ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಸಾರ್ವಜನಿಕರು ಎಲ್ಲೆಂದರಲ್ಲಿ ಕಸ ಬಿಸಾಡುವುದನ್ನು ತಡೆಗಟ್ಟುವ ಸಲುವಾಗಿ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಕಳೆದವರ್ಷ ₹ 5.5 ಕೋಟಿ ತೆರಿಗೆ ಸಂಗ್ರಹಣೆ ಮಾಡಲಾಗಿದ್ದು, ಈ ವರ್ಷ ₹ 8 ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿದೆ' ಎಂದು ತಿಳಿಸಿದರು.

ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಈಗಾಗಲೆ ವಾರ್ಡ್ ಸಭೆಗಳನ್ನು ನಡೆಸಿ, ಸಾರ್ವಜನಿಕರ ಸಮಸ್ಯೆಗಳು ಹಾಗೂ ಬೇಡಿಕೆಗಳ ಕುರಿತ ಅಹವಾಲುಗಳನ್ನು ಸ್ವೀಕರಿಸಲಾಗಿದೆ. ಈ ಸಂಬಂಧ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಕ್ರಿಯಾಯೋಜನೆ ಸಿದ್ಧಪಡಿಸಿ, ಅನುದಾನದ ಲಭ್ಯತೆಯ ಆಧಾರದಲ್ಲಿ ಸಾರ್ವಜನಿಕರ ಬೇಡಿಕೆಗಳನ್ನು ಈಡೇರಿಸಲು ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಆರೋಗ್ಯ ಶಿಬಿರ: ಇದೇ ಸಂದರ್ಭದಲ್ಲಿ ಏರ್ಪಡಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ವೈದ್ಯರು ಮಧುಮೇಹ, ರಕ್ತದೊತ್ತಡ ಹಾಗೂ ಕಣ್ಣಿಗೆ ಸಂಬಂಧಿಸಿದಂತೆ ತಪಾಸಣೆ ನಡೆಸಿದರು. ಅಗತ್ಯವಿದ್ದವರಿಗೆ ಉಚಿತವಾಗಿ ಕನ್ನಡಕ-ಗಳನ್ನು ವಿತರಿಸಲಾಯಿತು.

ಪಂಚಾಯಿತಿ ಉಪಾಧ್ಯಕ್ಷ ಬಿ.ಆರ್. ಪ್ರವೀಣ್, ಮಾಜಿ ಅಧ್ಯಕ್ಷ ಬಿ.ಎಸ್. ಅನಿಲ್‌ಕುಮಾರ್, ಮಾಜಿ ಉಪಾಧ್ಯಕ್ಷೆ ವಿಮಲಾ ಗಣೇಶ್, ಸದಸ್ಯರಾದ ನವೀನ್‌ಕುಮಾರ್.ಟಿ.ಎಸ್, ಬಿ.ಕೆ. ರತ್ನಮ್ಮ ಆಂಜಿನಪ್ಪ, ರಾಮಾಂಜಿನಿ. ಬಿ.ಆರ್, ಪ್ರೇಮಾ ಮಂಜುನಾಥ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಲೋಕನಾಥ್.ಪಿ.ಎಸ್, ಕಾರ್ಯದರ್ಶಿ ಎಂ.ಸುಬ್ರಮಣ್ಯ ಮತ್ತಿತರರು ಉಪಸ್ಥಿತರಿದ್ದರು.

ಸವಲತ್ತುಗಳ ವಿತರಣೆ

ಅಂಗನವಾಡಿ ಕೇಂದ್ರಗಳಿಗೆ ಸ್ಮಾರ್ಟ್ ಟಿವಿ, ಅಂಗವಿಕಲರಿಗೆ ಯುಡಿ-ಐಡಿ ಕಾರ್ಡ್, ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನದ ಚೆಕ್ ವಿತರಿಸಲಾಯಿತು.



ಬೆಟ್ಟಹಲಸೂರು ಗ್ರಾಮ ಪಂಚಾಯಿತಿಯ ಮೊದಲ ಸುತ್ತಿನ ಗ್ರಾಮಸಭೆಯಲ್ಲಿ ಅಧ್ಯಕ್ಷೆ ಹೇಮಲತಾ ಎಸ್ ನಾಗರಾಜು ಅವರು ಅಂಗನವಾಡಿ ಕಾರ್ಯಕರ್ತೆಯರಿಗೆ ಸ್ಮಾರ್ಟ್ ಟಿವಿ ಹಸ್ತಾಂತರಿಸಿದರು. ಉಪಾಧ್ಯಕ್ಷ ಬಿ.ಆರ್.ಪ್ರವೀಣ್, ಮಾಜಿ ಅಧ್ಯಕ್ಷ ಬಿ.ಎಸ್. ಅನಿಲ್‌ಕುಮಾರ್, ಸದಸ್ಯರಾದ ಬಿ.ಕೆ.ರತ್ನಮ್ಮ ಆಂಜಿನಪ್ಪ, ರಾಮಾಂಜಿನಿ. ಬಿ.ಆರ್, ನವೀನ್‌ಕುಮಾರ್ ಟಿ.ಎಸ್, ಪಿಡಿಒ ಲೋಕನಾಥ್.ಪಿ.ಎಸ್ ಇದ್ದರು

ಪರಿಶಿಷ್ಟರ ಅನುದಾನ ಗ್ಯಾರಂಟಿಗೆ ಬಳಕೆ: ಭೀಮ್ ಆರ್ಮಿ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅನುದಾನವನ್ನು ಗ್ಯಾರಂಟಿ ಯೋಜನೆ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ರಾಜ್ಯ ಸರ್ಕಾರ ಬಳಕೆ ಮಾಡಿರುವುದು ಖಂಡನೀಯ ಎಂದು ಭೀಮ್ ಆರ್ಮಿ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಭೀಮ್ ಆರ್ಮಿಯ ರಾಜ್ಯ ಘಟಕದ ಅಧ್ಯಕ್ಷ ರಾಜಗೋಪಾಲ್, 'ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಮಾತ್ರ ಬಳಕೆ ಮಾಡಬೇಕು. ಆದರೆ ರಾಜ್ಯ ಸರ್ಕಾರ ಇತರೆ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಬಳಕೆ ಮಾಡುತ್ತಿರುವುದು ಸರಿಯಲ್ಲ. ಇದರಿಂದ ನಮ್ಮ ಸಮುದಾಯಕ್ಕೆ ಅನ್ಯಾಯವಾಗುತ್ತದೆ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರು ಈ ಬಗ್ಗೆ ಕೂಡಲೇ ಸ್ಪಷ್ಟನೆ ನೀಡಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಅರಬೆತ್ತಲೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು. ಸಂಘಟನೆಯ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಪ್ರದೀಪ್ ಕುಮಾರ್, ಉಪಾಧ್ಯಕ್ಷ ಅನಿಲ್ ಕುಮಾರ್ ಇದ್ದರು.

ಗುರುವಂದನಾ ಕಾರ್ಯಕ್ರಮ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರಂ ನಾಗರಿಕ ನಿರ್ವಹಣಾ ಸಮಿತಿಯಿಂದ ಆಗಸ್ಟ್ 2ರಂದು ಸದಾಶಿವನಗರದಲ್ಲಿ-ರುವ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಜೆ.ಎನ್. ಟಾಟಾ ಸಭಾಂಗಣದಲ್ಲಿ ಆಯೋಜಿಸಿರುವ ಗುರುವಂದನಾ ಕಾರ್ಯಕ್ರಮದಲ್ಲಿ 'ಆರೋಹಣ' ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಸಮಿತಿಯ ಅಧ್ಯಕ್ಷ ವಲ್ಲಭ್ ಕೆ. ಮಾಹಿತಿ ನೀಡಿದರು.

ಆಟೊ ಪ್ರಯಾಣ ಇಂದಿನಿಂದ ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಆಟೊ ಪ್ರಯಾಣದ ಪರಿಷ್ಕೃತ ದರ ಆಗಸ್ಟ್ 1ರಿಂದ ಜಾರಿಗೆ ಬರಲಿದೆ.

ಮೊದಲ ಎರಡು ಕಿ.ಮೀ.ಗೆ ₹36 (ಕನಿಷ್ಠ) ನಿಗದಿಪಡಿಸಲಾಗಿದೆ. ಬಳಿಕ ಪ್ರತಿ ಕಿ.ಮೀ.ಗೆ ₹18 ದರವಿರಲಿದೆ.

ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ಒಂದೂವರೆ ಪಟ್ಟು ಅಧಿಕ ದರ ವಿಧಿಸಬಹುದು. ಮೊದಲ ಐದು ನಿಮಿಷ ಕಾಯುವಿಕೆ ಉಚಿತವಾಗಿದ್ದು, ಬಳಿಕ ಪ್ರತಿ 15 ನಿಮಿಷಕ್ಕೆ ₹10 ನಿಗದಿಯಾಗಿದೆ.
20 ಕೆ.ಜಿ.ವರೆಗಿನ ಲಗೇಜಿಗೆ ಶುಲ್ಕವಿಲ್ಲ. ಅದಕ್ಕಿಂತ ಹೆಚ್ಚಿಗೆ ಇದ್ದರೆ ₹10 ದರ. ಪ್ರಯಾಣಿಕರು ಆಟೊದಲ್ಲಿ 50 ಕೆ.ಜಿ.ವರೆಗೆ ಮಾತ್ರ ಲಗೇಜು ಸಾಗಿಸಬಹುದು ಎಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಪರಿಷ್ಕತ ಪ್ರಯಾಣ ದರವನ್ನು ಆಟೊ ಮೀಟರ್‌ಗಳಲ್ಲಿ ಅಳವಡಿಸಿಕೊಳ್ಳಲು ಅಕ್ಟೋಬರ್ 31ರವರೆಗೆ ಅವಕಾಶ ನೀಡಲಾಗಿದೆ ಎಂದು ಹೇಳಿದ್ದಾರೆ.

ದೇವಾಲಯ, ಸರ್ಕಾರಿ ಜಮೀನು ಬಳಕೆ

ಕಿತ್ತಲೆ ಮಾರ್ಗ: ಮೆಟ್ರೊ 3ನೇ ಹಂತದ ಯೋಜನೆಗೆ ಭೂ ಸ್ವಾಧೀನ

• ಮುತೀಉರ್‌ರಹ್ಮಾನ್ ಸಿದ್ದೀಕೀ

ಬೆಂಗಳೂರು: ನಮ್ಮ ಮೆಟ್ರೊ 3ನೇ ಹಂತಕ್ಕೆ ಬನಶಂಕರಿ ದೇವಸ್ಥಾನ, ಭಾರತೀಯ ಭೂ ಸರ್ವೇಕ್ಷಣಾ ಇಲಾಖೆ (ಜಿಐಎಸ್), ಎನ್‌ಸಿಇಆರ್‌ಟಿ, ಪಿಇಎಸ್ ವಿಶ್ವವಿದ್ಯಾಲಯ, ಬಿಎಂಟಿಸಿ ಬಸ್ ಡಿಪೊ ಮತ್ತು ರುದ್ರಭೂಮಿಯ ಜಮೀನನ್ನು ಬಳಸಿಕೊಳ್ಳಲಾಗುತ್ತದೆ.

'ಪ್ರಜಾವಾಣಿ'ಗೆ ಲಭ್ಯವಾಗಿರುವ ಮಾಹಿತಿ ಪ್ರಕಾರ, ಮೂರನೇ ಹಂತದ 44.8 ಕಿ.ಮೀ. ಮಾರ್ಗವು ಹೊರ ವರ್ತುಲ ರಸ್ತೆ ಸಂಪರ್ಕಿಸಲಿದ್ದು, ಮಾಗಡಿ ರಸ್ತೆ ಮೂಲಕ ಸಂಪರ್ಕ ವಿಸ್ತರಿಸುತ್ತದೆ. 'ಕಿತ್ತಲೆ ಮಾರ್ಗ' ಎಂದು ಕರೆಯುವ ಈ ಯೋಜನೆಯು 2029ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದ್ದು, ಮೆಟ್ರೊ ಸಂಪರ್ಕ ಜಾಲವು 222.2 ಕಿ.ಮೀ.ಗೆ ವಿಸ್ತರಣೆಯಾಗಲಿದೆ.

ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯು (ಜೆಐಸಿಎ) ಈ ಯೋಜನೆಗೆ ₹6,770 ಕೋಟಿ ನೀಡಲು ಒಪ್ಪಿದ್ದು, 2026ರ ಮಾರ್ಚ್ 31ರ ಒಳಗೆ ಒಪ್ಪಂದ ಮಾಡಿಕೊಳ್ಳಲಿದೆ. ಸಿವಿಲ್ ಕಾಮಗಾರಿಗಳಿಗೆ ಜೆಐಸಿಎ ಅನುದಾನ ನೀಡಲಿದೆ.

ಡಬಲ್ ಡೆಕರ್ ಮೇಲ್ಸೇತುವೆ ಯೋಜನೆಯಿಂದಾಗಿ ಮೂರನೇ ಹಂತದ ಎರಡು ಕಾರಿಡಾರ್‌ಗಳಿಗೆ ಬೇಕಾಗಿರುವ ಜಮೀನಿನ ವಿಸ್ತೀರ್ಣ 70 ಸಾವಿರ ಚದರ ಮೀಟರ್‌ಗೆ ಏರಿಕೆಯಾಗಿದೆ. ವಿಸ್ತೃತ ಯೋಜನಾ ವರದಿ ಪ್ರಕಾರ ಬೇಕಾಗಿರುವ ಜಮೀನು 5,98,828 ಚದರ ಮೀಟರ್. ಆದರೆ, ಈಗ ಬಿಎಂಆರ್‌ಸಿಎಲ್‌ಗೆ 6,72,117 ಚದರ ಮೀಟರ್ ಅಗತ್ಯವಿದೆ.

'ಮೆಟ್ರೊ ಯೋಜನೆಗಳಿಗೆ ಜಮೀನು ಬೇಕಾಗುತ್ತದೆ. ಇದೇ ಮಾರ್ಗದಲ್ಲಿ ಡಬಲ್ ಡೆಕರ್ ಮೇಲ್ಸೇತುವೆ ನಿರ್ಮಾಣ ಮಾಡಬೇಕಾಗಿರುವ ಕಾರಣ ಹೆಚ್ಚುವರಿ ಜಮೀನಿನ ಅಗತ್ಯವಿದೆ. ಸಾಮಾನ್ಯಕ್ಕಿಂತ ಈ ಮಾರ್ಗದ ವಯಾಡಕ್ಟ್ ಅಗಲವಾಗಿರುತ್ತದೆ. ವಸತಿ ಕಟ್ಟಡಗಳು, ಕಲ್ಯಾಣಮಂಟಪಗಳು, ಸಣ್ಣ ಆಸ್ಪತ್ರೆಗಳ ಮುಂದಿನ ಭಾಗವನ್ನು ಬಿಎಂಆರ್‌ಸಿಎಲ್ ಸ್ವಾಧೀನ ಪಡಿಸಿಕೊಳ್ಳುತ್ತದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಬನಶಂಕರಿ ದೇವಾಲಯವು ಸುಮಾರು ಮೂರು ಎಕರೆ ಖಾಲಿ ಜಾಗ ನೀಡಲಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಗಿರಿನಗರ ಪೊಲೀಸ್ ಠಾಣೆಯಿಂದಲೂ ಜಮೀನು ಬೇಕಾಗುತ್ತದೆ. ಜರಗನಹಳ್ಳಿಯಲ್ಲಿರುವ ಭಾರತೀಯ ಭೂ ಸರ್ವೇಕ್ಷಣಾ ಇಲಾಖೆಯು 7,388.28 ಚದರ ಮೀಟರ್ ನೀಡಲಿದ್ದು, ಕಂದಾಯ ಇಲಾಖೆಯು ಹೊಸಕೆರೆಹಳ್ಳಿಯಲ್ಲಿ 4,594 ಚದರ ಮೀಟರ್ ಜಮೀನು ನೀಡಲಿದೆ. ಇದರಲ್ಲಿ ಸ್ಮಶಾನದ ಒಂದು ಭಾಗವೂ ಸೇರಿದೆ' ಎಂದು ಅಧಿಕಾರಿ ವಿವರಿಸಿದರು.

'ಬಿಎಂಆರ್‌ಸಿಎಲ್ 3–4 ತಿಂಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ನಿರೀಕ್ಷೆಯಿದೆ. ಅಂತಿಮ ಅಧಿಸೂಚನೆ ಪ್ರಕಟವಾದ ಬಳಿಕ, ಭೂಮಾಲೀಕರಿಗೆ ನೀಡುವ ಹಣವನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ)ಯಲ್ಲಿ ಠೇವಣಿ ಇರಿಸಲಾಗುವುದು. ಬಳಿಕ ಅದು ಮಾಲೀಕರಿಗೆ ಪಾವತಿಸಲಿದೆ' ಎಂದು ಅಧಿಕಾರಿ ತಿಳಿಸಿದರು.

ಭೂ ಸ್ವಾಧೀನ ಪ್ರಕ್ರಿಯೆ ಸುಗಮಗೊಳಿಸಲು ಬಿಎಂಆರ್‌ಸಿಎಲ್ ಕಾರಿಡಾರ್ 1 (ಜೆ.ಪಿ ನಗರ 4 ನೇ ಹಂತದಿಂದ ಕೆಂಪಾಪುರ, 32.65 ಕಿ.ಮೀ) ಅನ್ನು ಮೂರು ಪ್ಯಾಕೇಜ್‌ಗಳಾಗಿ ವಿಂಗಡಿಸಿದೆ.

'ಪ್ಯಾಕೇಜ್ 1 (ಜೆ.ಪಿ ನಗರ 4ನೇ ಹಂತದಿಂದ ಮೈಸೂರು ರಸ್ತೆ, 10.88 ಕಿ.ಮೀ) 67,601 ಚದರ ಮೀಟರ್‌ಗಳಷ್ಟು ವಿಸ್ತೀರ್ಣದಲ್ಲಿರುವ 415 ಆಸ್ತಿಗಳ ಅಗತ್ಯವಿದೆ. ಈ ಪೈಕಿ 198 ಆಸ್ತಿಗಳಿಗೆ ಅಂತಿಮ ಅಧಿಸೂಚನೆ ಪ್ರಕಟಿಸಲಾಗಿದೆ. ಪ್ಯಾಕೇಜ್ 2ಕ್ಕೆ (ಮೈಸೂರು ರಸ್ತೆಯಿಂದ ಕಂಠೀರವ ಸ್ಟುಡಿಯೊ, 10.6 ಕಿ.ಮೀ) ಅಗತ್ಯ ಆಸ್ತಿಗಳನ್ನು ಗುರುತಿಸಲು ಭೂ ಸಮೀಕ್ಷೆ ನಡೆಯುತ್ತಿದೆ. ಪ್ಯಾಕೇಜ್ 3ಕ್ಕೆ (ಕಂಠೀರವ ಸ್ಟುಡಿಯೊ-ಕೆಂಪಾಪುರ, 10.67 ಕಿ.ಮೀ.) 1,11,351 ಚದರ ಮೀಟರ್ ವಿಸ್ತೀರ್ಣದ 282 ಆಸ್ತಿಗಳು ಬೇಕಾಗುತ್ತವೆ. ಇದರಲ್ಲಿ 85 ಆಸ್ತಿಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ' ಎಂದು ಅಧಿಕಾರಿ ತಿಳಿಸಿದ್ದಾರೆ.

3ನೇ ಹಂತಕ್ಕೆ ಎಲ್ಲಾ ಅನುಮತಿಗಳಿದ್ದರೂ, ಮೆಟ್ರೊ-ಕಮ್ ಮೇಲ್ಸೇತುವೆ ನಿರ್ಮಾಣದ ಪರಿಷ್ಕೃತ ಯೋಜನೆಗಳಿಂದಾಗಿ ನಿರ್ಮಾಣ ವಿಳಂಬವಾಗಿದೆ.

'ಇನ್ನೂ ಟೆಂಡರ್ ಕರೆಯದ ಕಾರಣ ಭೂಸ್ವಾಧೀನವು ಸಿವಿಲ್ ಕೆಲಸದ ಮೇಲೆ ಪರಿಣಾಮ ಬೀರುವುದಿಲ್ಲ. ಆಗಸ್ಟ್ ಅಂತ್ಯದ ವೇಳೆಗೆ ಟೆಂಡರ್ ಕರೆದು, ಮೂರು ತಿಂಗಳಲ್ಲಿ ಅಂತಿಮಗೊಳಿಸಲಾಗುವುದು. ಅಷ್ಟರಲ್ಲಿ ಅಗತ್ಯವಿರುವ ಜಮೀನು ಲಭ್ಯವಾಗಲಿದೆ' ಎಂದು ಬಿಎಂಆರ್‌ಸಿಎಲ್‌ನ ಮತ್ತೊಬ್ಬ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ಯಾರು ಎಷ್ಟು ನೀಡುತ್ತಾರೆ?



ಬನಶಂಕರಿ ದೇವಸ್ಥಾನ	3 ಎಕರೆ
ಜಿಐಎಸ್	ಜರಗನಹಳ್ಳಿ, 7,388.28 ಚದರ ಮೀಟರ್
ಕಂದಾಯ ಇಲಾಖೆ	ಹೊಸಕೆರೆಹಳ್ಳಿ 4,594 ಚದರ ಮೀಟರ್
ಬಿಎಂಟಿಸಿ	ಕತ್ರಿಗುಪ್ಪೆ ಡಿಪೊ, 1,624 ಚದರ ಮೀಟರ್
ಬಿಡಿಎ	ಪಂತರಪಾಳ್ಯ, 1,513 ಚದರ ಮೀಟರ್
ಪಿಇಎಸ್ ವಿಶ್ವವಿದ್ಯಾಲಯ	ಹೊಸಕೆರೆಹಳ್ಳಿ, 509.92 ಚದರ ಮೀಟರ್
ಎನ್‌ಸಿಇಆರ್‌ಟಿ	ಉತ್ತರಹಳ್ಳಿ, 900 ಚದರ ಮೀಟರ್
ಗಿರಿನಗರ ಪೊಲೀಸ್ ಠಾಣೆ	467 ಚದರ ಮೀಟರ್
ಬಿಬಿಎಂಪಿ	ಕರಿಸಂದ್ರ, 188 ಚದರ ಮೀಟರ್

ನಿತ್ರಾಣಗೊಂಡಿದ್ದ ಕರಡಿ ರಕ್ಷಣೆ

ರಾಮನಗರ: ವಡೇರಹಳ್ಳಿ ಬಳಿಯ ಖಾಸಗಿ ಜಮೀನೊಂದರಲ್ಲಿ ಅನಾರೋಗ್ಯದಿಂದ ನಿತ್ರಾಣಗೊಂಡಿದ್ದ ಕರಡಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ರಕ್ಷಿಸಿದ್ದಾರೆ. ಪ್ರಾಥಮಿಕ ಆರೈಕೆ ಮಾಡಿ ಹೆಚ್ಚಿನ ಚಿಕಿತ್ಸೆಗೆ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಕಳಿಸಿದ್ದಾರೆ.

ಇಂದು ಕೆಲವೆಡೆ ನೀರು ಸರಬರಾಜಿನಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಶ್ಚಿಮ ಪ್ರದೇಶಗಳಿಗೆ ನೀರು ಸರಬರಾಜಾಗುವ ದೊಡ್ಡಗಾತ್ರದ ವಾಲ್ವ್ ಕೆಟ್ಟು ಹೋಗಿರುವುದರಿಂದ ತುರ್ತು ಕಾಮಗಾರಿ ಕೈಗೊಳ್ಳಲಾಗಿದೆ. ಆದ್ದರಿಂದ ಹಲವು ಪ್ರದೇಶಗಳಲ್ಲಿ ಆಗಸ್ಟ್ 1 ರಂದು ನೀರು ಸರಬರಾಜುವಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಶುಕ್ರವಾರ ಬೆಳಗ್ಗೆ 6ಗಂಟೆಯಿಂದ ಕಾಮಗಾರಿ ನಡೆಯಲಿದೆ ಎಂದು ಮಂಡಳಿ ಅಧ್ಯಕ್ಷ ವಿ. ರಾಮಪ್ರಸಾತ್ ಮನೋಹರ್ ಅವರು ತಿಳಿಸಿದ್ದಾರೆ.

ವ್ಯತ್ಯಯವಾಗಲಿರುವ ಪ್ರದೇಶಗಳು: ಚಂದ್ರ ಲೇಔಟ್ ಮೊದಲ ಮತ್ತು ಎರಡನೇ ಹಂತ, ಬಿಸಿಸಿ ಲೇಔಟ್, ಅತ್ತಿಗುಪ್ಪೆ, ಮಾರುತಿ ನಗರ, ಜ್ಯೋತಿನಗರ, ವಿದ್ಯಾ ಗಿರಿ ಲೇಔಟ್, ಗಂಗೊಂಡನಹಳ್ಳಿ, ನಾಯಂಡಹಳ್ಳಿ, ಮೆಟ್ರೋ ಲೇಔಟ್, ವಿಡಿಯೊ ಲೇಔಟ್, ಕೆಪಿಎ ಬ್ಲಾಕ್, ಬಸವೇಶ್ವರ ಲೇಔಟ್, ವಿನಾಯಕ ಲೇಔಟ್ ನಾಯಂಡಹಳ್ಳಿ, ಐಟಿಐ ಲೇಔಟ್ ನಾಯಂಡಹಳ್ಳಿ, ಪಂತರಪಾಳ್ಯ, ಮೈಸೂರು ರಸ್ತೆ ಲೇಔಟ್, ಎಫ್‌ಸಿಐ ಲೇಔಟ್, ರೋಷನ್ ನಗರ, ಅರುಂಧತಿ ನಗರ, ಮಾಗಡಿ ರಸ್ತೆಯ 16 ರಿಂದ 20ನೇ ಅಡ್ಡರಸ್ತೆ, ಎರಡನೇ ಅಡ್ಡರಸ್ತೆಯಿಂದ 12ನೇ ಅಡ್ಡರಸ್ತೆ, ಕೆಂಪಾಪುರ ಅಗ್ರಹಾರ, ಅವಲಮ್ಮ ಛತ್ರ, ಬಂಡೆ ಕೊಳಚೆ ಪ್ರದೇಶ, ವಿಎಸ್‌ಟಿ ಕಾಲೊನಿ,ಅಶ್ವತ್ಥನಗರ, ಭುವನೇಶ್ವರಿ ನಗರ, ಕೇಶವ ನಗರ, ಕಸ್ತೂರಿಬಾ ನಗರ, ಆರ್‌ಸಿ ಬಡಾವಣೆ, ಹಂಪಿ ನಗರ, ನ್ಯೂ ಕಾಲೊನಿ, ಕವಿಕಾ ಬಡಾವಣೆ, ದೀಪಾಂಜಲಿ ನಗರ, ಮತ್ತು ವೆಂಕಟೇಶ್ವರ ನಗರ ಕೊಳಚೆ ಪ್ರದೇಶ, ಪ್ರಕಾಶ ನಗರ, ಮಹಾಲಕ್ಷ್ಮಿ ಬಡಾವಣೆ, ರಾಜಾಜಿನಗರ ಒಂದನೇ ಬ್ಲಾಕ್, ಸುಬ್ರಮಣ್ಯ ನಗರ,- ಗಾಯತ್ರಿ ನಗರ, ನಂದಿನಿ ಬಡಾವಣೆ, ದಾಸರಹಳ್ಳಿ.

ನಿಧನ ವಾರ್ತೆ

ಬಿ.ಎಸ್. ತಲ್ವಾಡಿ



ಬೆಂಗಳೂರು: ಕನ್ನಡ ಜನಪದ ರಾಮಾಯಣ ಸಂಗ್ರಹದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದ ವಿದ್ವಾಂಸ ಬಿ.ಎಸ್.ತಲ್ವಾಡಿ (71) ಅವರು ಅನಾರೋಗ್ಯದಿಂದ ನಾಗರಬಾವಿಯಲ್ಲಿರುವ ಸ್ವಗೃಹದಲ್ಲಿ ಬುಧವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ. ಕಂಬಿಪುರ ಸಮೀಪದ ಕ್ರೈಸ್ತರ ಸ್ಮಶಾನದಲ್ಲಿ ಬುಧವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಲ್ವಾಡಿ ಅವರು ಜಾನಪದ ಅಕಾಡೆಮಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಇವರ 'ಜಾನಪದ ಕಲರವ' ಕೃತಿಗೆ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು. ಆರ್‌ಬಿಐ ನಿವೃತ್ತ ಅಧಿಕಾರಿಯಾಗಿದ್ದ ಅವರು ಮಲೆ ಮಹದೇಶ್ವರ ಕಾವ್ಯದ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ್ದರು.

ನಿಲ್ಲದ 'ಸುಲೋಚನಾ'ಳ ಓಟ!



ನಟ ರಾಜ್‌ ಬಿ.ಶೆಟ್ಟಿ ನಿರ್ಮಾಣದ, ಜೆ.ಪಿ.ತೂಮಿನಾಡು ನಿರ್ದೇಶನದ 'ಸು ಫ್ರಮ್‌ ಸೋ' ಸಿನಿಮಾದ ಓಟ ಮುಂದುವರಿದಿದೆ. ಜುಲೈ 25ರಿಂದ ಸಿನಿಮಾದ 9 ಲಕ್ಷ ಟಿಕೆಟ್‌ಗಳು ಮಾರಾಟವಾಗಿವೆ. ಪ್ರತಿನಿತ್ಯ ಸುಮಾರು ಒಂದು ಲಕ್ಷದಷ್ಟು ಟಿಕೆಟ್‌ಗಳು ಮಾರಾಟವಾಗುತ್ತಿವೆ. ಕೇರಳದಲ್ಲೂ ಸಿನಿಮಾ ಡಬ್‌ ಆಗಿ ತೆರೆಕಂಡಿದೆ.



'ಕೊತ್ತಲವಾಡಿ ಮೇಲೆ ಭರವಸೆ ಇದೆ'

• ವಿನಾಯಕ ಕೆ.ಎಸ್.

ಪೃಥ್ವಿ ಅಂಬಾರ್ ನಟನೆಯ 'ಕೊತ್ತಲವಾಡಿ' ಸಿನಿಮಾ ಇಂದು (ಆ.1ರಂದು) ತೆರೆ ಕಾಣುತ್ತಿದೆ. ಚಿತ್ರ ಹಾಗೂ ತಮ್ಮ ಸಿನಿ ಪಯಣ ಕುರಿತು ಅವರು ಮಾತನಾಡಿದ್ದಾರೆ.

• **ಪಾತ್ರದ ಬಗ್ಗೆ ಹೇಳಿ...**

ಹಳ್ಳಿಯಲ್ಲಿ ಸ್ವಯಂ ಸೇವಕನಂತೆ ಕೆಲಸ ಮಾಡುವ ಹುಡುಗನ ಪಾತ್ರ. ಮೋಹನ್‌ಕುಮಾರ್ ಪಾತ್ರದ ಹೆಸರು. ಹಳ್ಳಿಯಲ್ಲಿನ ರಾಜಕೀಯ ನಾಯಕರ ಹಿಂದೆ ಇರುವಾತ. ಅವನ ಮಾತು ಊರಲ್ಲಿ ಚೆನ್ನಾಗಿ ನಡೆಯುತ್ತಿರುತ್ತದೆ. ಹೀಗಾಗಿ ಎಲ್ಲರೂ ರಾಜಕೀಯವಾಗಿ ಅವನನ್ನು ಬಳಸಿಕೊಳ್ಳುತ್ತ ಇರುತ್ತಾರೆ.

• **ಮುಗ್ಧ ಪಾತ್ರಗಳಿಗೆ ಹೆಸರಾಗಿರುವ ನೀವು ರಗಡ್ ಆಗಿರುವ ಪಾತ್ರ ಆಯ್ದುಕೊಂಡಿರುವುದೇಕೆ?**

ಇಷ್ಟು ವರ್ಷ ನಾನು ಕೋಪ ಮಾಡಿಕೊಳ್ಳಲ್ಲ, ಪಾಪದ ಪಾತ್ರ ಮಾಡುತ್ತಾನೆ ಎಂಬ ಭಾವನೆ ಇತ್ತು. ನನ್ನೊಳಗೆ ಒಬ್ಬ ಪಾಪಿ ಇದ್ದಾನೆ ಎಂಬುದನ್ನು ನಿರ್ದೇಶಕರು ಈ ಪಾತ್ರದ ಮೂಲಕ ಪರಿಚಯಿಸುತ್ತಿದ್ದಾರೆ. ನಿರ್ದೇಶಕರು ಬಹಳ ವರ್ಷದ ಸ್ನೇಹಿತರು. ಹೀಗಾಗಿ ನಾನು ಈ ಪಾತ್ರ ಮಾಡಬಲ್ಲೆ ಎನ್ನಿಸಿ ಪಾತ್ರ ನೀಡಿದ್ದಾರೆ. ಆಕ್ಷನ್ ಮಾಡಿದ್ದು ಕಡಿಮೆ. ಆ ರೀತಿ ಪಾತ್ರವನ್ನು ಪ್ರಯತ್ನಿಸೋಣ ಎಂದು ಮಾಡಿದ್ದು.

• **'ಕೊತ್ತಲವಾಡಿ' ಹಳ್ಳಿಯಲ್ಲಿನ ಹೋರಾಟದ ಕಥೆಯಾ?**

ಹೌದು, ಹಳ್ಳಿಗಾಡಿನ ಕಥೆ. ಕೊತ್ತಲವಾಡಿ ಅಂದ ತಕ್ಷಣ ಎಲ್ಲ ಚಾಮರಾಜನಗರಕ್ಕೆ ಹೋಗುತ್ತಾರೆ. ಆದರೆ ಇದು ಮಂಡ್ಯ ಭಾಷೆಯಲ್ಲಿ ಚಿತ್ರೀಕರಣಗೊಂಡಿದೆ. ನಾವು ಚಿತ್ರೀಕರಣ ಮಾಡಿದ್ದು ಕೊತ್ತಲವಾಡಿಯಲ್ಲಿ. ಊರು, ಅಲ್ಲಿನ ಜನ, ಅವರ ಪ್ರೀತಿ ನೋಡಿ ಅದನ್ನೇ ಶೀರ್ಷಿಕೆಯಾಗಿಸಿಕೊಂಡೆವು. ಗ್ರಾಮೀಣ ಭಾಗದ ಕಥೆಯ ಜತೆಗೆ ಲವ್, ದ್ವೇಷ ಎಲ್ಲವೂ ಇದೆ. ಒಂದು ಪೂರ್ಣ ಮನರಂಜನೆ ಚಿತ್ರ. ಆಸೆ ದುರಾಸೆಯಾದಾಗ ಒಂದಷ್ಟು ಘಟನೆಗಳು ನಡೆಯುತ್ತವೆ. ಅದರಿಂದ ಹೊರಬಂದ ಕೆಲ ಪಾತ್ರಗಳು ಹೇಗೆ ಬದಲಾಗುತ್ತವೆ ಎಂಬುದೇ ಕಥೆಯ ಹೂರಣ. ನೈಜಕಥೆಯಲ್ಲ, ಆದರೆ ಕೆಲ ಘಟನೆಗಳಿಂದ ಸ್ಫೂರ್ತಿ ಪಡೆದ ಕಥೆ.

• **ಹೊಸ ನಾಯಕರ ಆ್ಯಕ್ಷನ್ ಸಿನಿಮಾಗಳನ್ನು ಜನ ಒಪ್ಪಿಕೊಳ್ಳುತ್ತಾರೆಯೇ?**

ಸ್ವಲ್ಪ ಕಷ್ಟ. ಆದರೆ ನನ್ನ ಯಾವ ಸಿನಿಮಾವೂ ಇಷ್ಟು ತಲುಪಿರಲಿಲ್ಲ. ಈ ಸಿನಿಮಾ ಎಲ್ಲರಿಗೂ ಗೊತ್ತಿದೆ. ಹೀಗಾಗಿ ಒಂದು ಭರವಸೆ ಇದೆ. ಇಲ್ಲಿ ಗೋಪಾಲಕೃಷ್ಣ ದೇಶಪಾಂಡೆ ಅವರ ಪಾತ್ರ ಹೆಚ್ಚಿದೆ. ಅವರು ಪಾತ್ರದಲ್ಲಿ ಜೀವಿಸಿದ್ದಾರೆ. ನಾಯಕನ ಆ್ಯಕ್ಷನ್ ಎನ್ನುವುದಕ್ಕಿಂತ ಗಟ್ಟಿಯಾದ ಕಥೆ ಹೊಂದಿರುವ ಚಿತ್ರ. ಚಿತ್ರೀಕರಣ ತುಂಬ ಅಚ್ಚುಕಟ್ಟಾಗಿ ನಡೆಯಿತು. ನಿರ್ಮಾಪಕರು ಯಾರು ಎಂಬುದೇ ಗೊತ್ತಿರಲಿಲ್ಲ. ಪ್ರಚಾರ ಶುರುವಾಗುವಾಗ ಯಶ್ ತಾಯಿ ನಿರ್ಮಾಪಕರು ಅಂತ ಗೊತ್ತಾಗಿದ್ದು. ಇದು ಕೂಡ ಸಿನಿಮಾಕ್ಕೆ ಹೊಸ ಶಕ್ತಿ. ಹೀಗಾಗಿ ಜನ ಬರುತ್ತಾರೆಂಬ ನಿರೀಕ್ಷೆಯಲ್ಲಿದ್ದೇವೆ.

• **'ದಿಯಾ'ದಿಂದ ಇಲ್ಲಿ ತನಕದ ಪಯಣ ಹೇಗಿತ್ತು?**

ಚೆನ್ನಾಗಿದೆ. ಸಾಕಷ್ಟು ಹೊಸ ನಿರ್ದೇಶಕರು ನನ್ನನ್ನು ಆಯ್ಕೆ ಮಾಡಿ ಅವಕಾಶ ನೀಡುತ್ತಿದ್ದಾರೆ. ಅದೇ ಖುಷಿ. ನಟನೆ ದೃಷ್ಟಿಕೋನದಿಂದ ಬೇರೆ ಬೇರೆ ರೀತಿಯ ಪಾತ್ರಗಳು ಸಿಗುತ್ತಿವೆ. ಆದರೆ ಈ ತನಕ ಥಿಯೇಟರಿಕಲ್ ಹಿಟ್ ಸಿಕ್ಕಿಲ್ಲ. ಅದಕ್ಕೆ ಕಾಯುತ್ತಿರುವೆ.

• **ನಿಮ್ಮ ಮುಂದಿನ ಸಿನಿಮಾಗಳು...**

ಚೌಕಿದಾರ್ ಸಿನಿಮಾ ಬಿಡುಗಡೆಗೆ ಸಿದ್ಧವಿದೆ. ನಾಗತಿಹಳ್ಳಿ ಚಂದ್ರಶೇಖರ ನಿರ್ದೇಶನದ ಅಮೆರಿಕಾ ಅಮೆರಿಕಾ-2 ಚಿತ್ರ ಕೂಡ ರೆಡಿಯಾಗಿದೆ. 'ದಿಯಾ ನಿರ್ದೇಶಕರ ಜತೆ ಒಂದು ಸಿನಿಮಾ ಮಾಡುತ್ತಿರುವೆ.

• **ತುಳು ಸಿನಿಮಾ ನಿರ್ದೇಶನ ಮಾಡುತ್ತಿದ್ದೀರಂತೆ?**

ಹೌದು, ಈಗಾಗಲೇ ಸಿನಿಮಾ ಘೋಷಿಸಿದ್ದೇವೆ. ಆದರೆ ಶೀರ್ಷಿಕೆ ಅನಾವರಣವಾಗಿಲ್ಲ. ಬರವಣಿಗೆ ನಡೆಯುತ್ತಿದೆ. ಕನ್ನಡದಲ್ಲಿಯೂ ಈ ಸಿನಿಮಾ ಬಿಡುಗಡೆ ಮಾಡುವ ಪ್ಲಾನ್ ಇದೆ. ಇದರಲ್ಲಿ ನಟನೆ ಕೂಡ ಮಾಡುತ್ತಿರುವೆ. ಈ ಸಿನಿಮಾದಿಂದ ಒಂದು ತಂಡ ರಚಿಸಿಕೊಂಡು ಮುಂದಿನ ದಿನಗಳಲ್ಲಿ ಕನ್ನಡದಲ್ಲಿಯೂ ನಿರ್ದೇಶನ ಮಾಡುವ ಇರಾದೆ ಇದೆ.

ನ.21ಕ್ಕೆ ಫುಲ್ ಮೀಲ್ಸ್

ಲಿಖಿತ್ ಶೆಟ್ಟಿ ನಟಿಸಿ, ನಿರ್ಮಿಸಿರುವ 'ಫುಲ್ ಮೀಲ್ಸ್' ಚಿತ್ರ ನವೆಂಬರ್ 21ರಂದು ತೆರೆಗೆ ಬರಲಿದೆ. ಎನ್. ವಿನಾಯಕ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಲಿಖಿತ್ ಈ ಹಿಂದೆ 'ಸಂಕಷ್ಟಕರ ಗಣಪತಿ', 'ಫ್ಯಾಮಿಲಿ ಪ್ಯಾಕ್', 'ಅಬ್ಬಬ್ಬ!' ಸಿನಿಮಾಗಳಲ್ಲಿ ನಟಿಸಿದ್ದರು. 'ವೆಡ್ಡಿಂಗ್ ಫೋಟೋಗ್ರಾಫರ್ ಸುತ್ತ ಸುತ್ತುವ ಕಥಾ ಹಂದರವನ್ನು ಹೊಂದಿರುವ ರೊಮ್ಯಾಂಟಿಕ್ ಕಾಮಿಡಿ ಸಿನಿಮಾ. ಮನೋರಂಜನೆಯ ಜೊತೆಗೆ ಸಾಕಷ್ಟು ಹೊಸ ವಿಷಯಗಳನ್ನು ಒಳಗೊಂಡಿದ್ದು, ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಸಂಪೂರ್ಣವಾಗಿ ಮುಗಿದಿವೆ. ಶೀಘ್ರದಲ್ಲಿ ಪ್ರಚಾರ ಕಾರ್ಯಕ್ಕೆ ಚಾಲನೆ ನೀಡುತ್ತೇವೆ' ಎಂದು ಲಿಖಿತ್ ಶೆಟ್ಟಿ ತಿಳಿಸಿದ್ದಾರೆ.


ನಾಯಕಿಯರಾಗಿ 'ದಿಯಾ' ಖ್ಯಾತಿಯ ಖುಷಿ ರವಿ ಮತ್ತು ತೇಜಸ್ವಿನಿ ಶರ್ಮ ಅಭಿನಯಿಸಿದ್ದಾರೆ. ಗುರು ಕಿರಣ್ ಸಂಗೀತ ನಿರ್ದೇಶನ, ಮನೋಹರ್ ಜೋಷಿ ಛಾಯಾಚಿತ್ರಗ್ರಹಣ, ದೀಪು ಎಸ್ ಕುಮಾರ್ ಸಂಕಲನವಿದೆ.

ರಂಗಾಯಣ ರಘು, ಸೂರಜ್ ಲೋಕ್ರೆ, ವಿಜಯ್ ಚೆಂಡೂರ್, ರವಿಶಂಕರ್ ಗೌಡ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ ಮುಂತಾದವರು ಚಿತ್ರದಲ್ಲಿದ್ದಾರೆ.



ತೇಜಸ್ವಿನಿ ಶರ್ಮ, ಲಿಖಿತ್ ಶೆಟ್ಟಿ, ಖುಷಿ ರವಿ

ಏಳುಮಲೆ ಮೊದಲ ಹಾಡು ಬಿಡುಗಡೆ



ರಾಣಾ, ಪ್ರಿಯಾಂಕ ಆಚಾರ್

'ಕಾಟೇರ' ಚಿತ್ರದ ನಿರ್ದೇಶಕ ತರುಣ್ ಕಿಶೋರ್ ಸುಧೀರ್ ನಿರ್ಮಾಣದ, ಪುನೀತ್ ರಂಗಸ್ವಾಮಿ ನಿರ್ದೇಶನದ 'ಏಳುಮಲೆ' ಸಿನಿಮಾದ ಮೊದಲ ಹಾಡು ಬಿಡುಗಡೆಯಾಗಿದೆ.

'ಏಕ್ ಲವ್ ಯಾ' ಸಿನಿಮಾ ಮೂಲಕ ಚಂದನವನ ಪ್ರವೇಶಿಸಿದ್ದ ನಟ ರಾಣಾ, 'ಮಹಾನಟಿ' ರಿಯಾಲಿಟಿ ಶೋ ವಿಜೇತೆ ಪ್ರಿಯಾಂಕಾ ಆಚಾರ್ ಈ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ. 'ಯಾವಾಗ..' ಎಂಬ ಮೆಲೋಡಿ ಹಾಡು ಆನಂದ್ ಆಡಿಯೊ ಯೂಟ್ಯೂಬ್‌ನಲ್ಲಿ ಬಿಡುಗಡೆಯಾಗಿದ್ದು, ಕನ್ನಡದ ಜೊತೆಗೆ ತೆಲುಗು, ತಮಿಳಿನಲ್ಲಿಯೂ ಗೀತೆ ಅನಾವರಣಗೊಂಡಿದೆ. ಹಾಡಿಗೆ ನಾಗಾರ್ಜುನ್ ಶರ್ಮಾ ಸಾಹಿತ್ಯ ಬರೆದಿದ್ದು, ಸಿದ್ ಶ್ರೀರಾಮ್ ದನಿಯಾಗಿದ್ದಾರೆ. ಡಿ.ಇಮ್ಮನ್ ಸಂಗೀತ ಹಾಡಿಗಿದೆ.

ಕರ್ನಾಟಕ-ತಮಿಳುನಾಡು ಗಡಿಭಾಗದ ಪ್ರೇಮಕಥೆಯಾಗಿರುವ 'ಏಳುಮಲೆ' ಸಿನಿಮಾದಲ್ಲಿ ರಾಣಾ ಕನ್ನಡದ ಹುಡುಗ 'ಹರೀಶ'ನಾಗಿ ಹಾಗೂ ಪ್ರಿಯಾಂಕಾ ಆಚಾರ್ ತಮಿಳು ಹುಡುಗಿಯ ಪಾತ್ರದಲ್ಲಿ ನಟಿಸಿದ್ದಾರೆ. ಜಗಪತಿ ಬಾಬು, ಟಿ.ಎಸ್.ನಾಗಾಭರಣ, ಕಿಶೋರ್ ಕುಮಾರ್, ಸರ್ದಾರ್ ಸತ್ಯ, ಜಗಪ್ಪ ತಾರಾಬಳಗದಲ್ಲಿದ್ದಾರೆ.

ನೈಜ ಘಟನೆಯನ್ನು ಆಧರಿಸಿದ ಈ ಸಿನಿಮಾ ಭಾವನಾತ್ಮಕ ಕಥೆಯನ್ನು ಒಳಗೊಂಡಿದೆ ಎಂದಿದೆ ಚಿತ್ರತಂಡ. ಚಾಮರಾಜನಗರ, ಸೇಲಂ, ಈರೋಡ್ ಸೇರಿದಂತೆ ಕರ್ನಾಟಕ-ತಮಿಳುನಾಡು ಗಡಿ ಭಾಗದ ಸ್ಥಳಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಅದ್ವೈತ್ ಗುರುಮೂರ್ತಿ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ, ನಾಗಾರ್ಜುನ್ ಶರ್ಮಾ ಹಾಗೂ ಪುನೀತ್ ರಂಗಸ್ವಾಮಿ ಸಂಭಾಷಣೆ ಚಿತ್ರಕ್ಕಿದೆ. ಈ ಸಿನಿಮಾ ಕನ್ನಡದ ಜೊತೆಗೆ ತಮಿಳು, ತೆಲುಗಿನಲ್ಲಿ ಬಿಡುಗಡೆ ಆಗಲಿದೆ.

3 ಸಿನಿಮಾಗಳು ತೆರೆಗೆ



'ಎಲ್ಟು ಮುತ್ತ' ಚಿತ್ರದ ದೃಶ್ಯ

ಸದ್ಯ ತೆರೆಯಲ್ಲಿರುವ ಸೂಪರ್ ಹಿಟ್ ಚಿತ್ರಗಳಿಂದಾಗಿ ಬೇರೆ ಸಿನಿಮಾಗಳ ಪ್ರದರ್ಶನಕ್ಕೆ ಚಿತ್ರಮಂದಿರಗಳು ಸಿಗುವುದು ಕಷ್ಟ ಎಂಬ ಪರಿಸ್ಥಿತಿ ನಿರ್ಮಾಣಗೊಂಡಿದೆ. ಜೊತೆಗೆ ವಿಜಯ್ ದೇವರಕೊಂಡ ನಟನೆಯ 'ಕಿಂಗ್ಡಂ' ಚಿತ್ರದ ಮುಂಗಡ ಬುಕ್ಕಿಂಗ್ ಜೋರಾಗಿದೆ. ಅದರ ನಡುವೆಯೂ ಈ ವಾರ 'ಕೊತ್ತಲವಾಡಿ' ಸೇರಿದಂತೆ ಮೂರು ಸಿನಿಮಾಗಳು ತೆರೆಕಾಣುತ್ತಿವೆ.

ಎಲ್ಟು ಮುತ್ತಾ: ರಾ.ಸೂರ್ಯ ನಿರ್ದೇಶಿಸಿ, ನಟಿಸಿರುವ ಚಿತ್ರವಿದು. ಹೈ ಫೈವ್ ಸ್ಟುಡಿಯೋಸ್ ಲಾಂಛನದಲ್ಲಿ ಸತ್ಯ ಎಸ್.ಶ್ರೀನಿವಾಸನ್ ನಿರ್ಮಿಸಿದ್ದಾರೆ.

'ಎಲ್ಟು ಮುತ್ತಾ' ಎರಡು ಪಾತ್ರಗಳ ಹೆಸರು. ಸಾವಿನಲ್ಲಿ ಡೋಲು ಬಡಿಯುವವರ ಸುತ್ತ ಹೆಣೆದಿರುವ ಕಥೆ. ಕೊಡಗು ಪ್ರಾಂತ್ಯದಲ್ಲಿ ನಡೆಯುವ ಕಥೆಯೂ ಹೌದು. ಚಿಕ್ಕವಯಸ್ಸಿನಿಂದ ನಾನು ಕಂಡ ಕೆಲವು ಸನ್ನಿವೇಶಗಳನ್ನು ಚಿತ್ರದ ಮೂಲಕ ತರುತ್ತಿದ್ದೇನೆ. ಎಲ್ಲರಿಗೂ ಚಿತ್ರ ಇಷ್ಟವಾಗಲಿದೆ ಎಂಬ ಭರವಸೆ ಇದೆ. ನಾನು ನಿರ್ದೇಶನದ ಜೊತೆಗೆ ಎಲ್ಟು ಪಾತ್ರದಲ್ಲೂ ಅಭಿನಯಿಸಿದ್ದೇನೆ. ಮುತ್ತಾ ಪಾತ್ರದಲ್ಲಿ ಶೌರ್ಯ ಪ್ರತಾಪ್ ನಟಿಸಿದ್ದಾರೆ ಎನ್ನುತ್ತಾರೆ ನಿರ್ದೇಶಕರು.

ಪ್ರಿಯಾಂಕ ಮಳಲಿ ನಾಯಕಿ. ಕಾಕ್ರೋಜ್ ಸುಧೀ, ನವೀನ್ ಡಿ ಪಡೀಲ್, ಯಮುನಾ ಶ್ರೀನಿಧಿ ಮುಂತಾದವರು ನಟಿಸಿದ್ದಾರೆ. ಪ್ರಸನ್ನ ಕೇಶವ ಸಂಗೀತ ನಿರ್ದೇಶನವಿದೆ.

ವೃತ್ತ: ಮಿಸ್ಟರಿ, ಥ್ರಿಲ್ಲರ್ ಕಥೆ ಹೊಂದಿರುವ ಚಿತ್ರಕ್ಕೆ ಲಿಖಿತ್ ಕುಮಾರ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಸಿದ್ದಾರ್ಥ್ ಎಂಬ ಪಾತ್ರದ ಸುತ್ತ ನಡೆಯುವ ಕಥೆ ಇದರಲ್ಲಿದ್ದು, ಸಿದ್ದಾರ್ಥ್‌ಗೆ ಆತನ ಮಸ್ಥಿತಿಯೇ ಶತ್ರು. ಒಂದು ರಾತ್ರಿ, ಒಂದು ಕರೆಯಿಂದ ನಾಯಕ ದಾರಿಯಲ್ಲಿ ತೆಗೆದುಕೊಳ್ಳಬಹುದಾದ ತಪ್ಪು ನಿರ್ಧಾರದಿಂದ ಏನೆಲ್ಲಾ ಸಂಭವಿಸಲಿದೆ ಎಂಬುವುದು ಚಿತ್ರದ ಕಥೆ. ಯುವನಟ ಮೊಹಿಯುದ್ದೀನ್ ಅವರು ನಾಯಕ ಸಿದ್ದಾರ್ಥ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಜಯಣ್ಣ ಫಿಲ್ಮ್ಸ್ ಚಿತ್ರದ ವಿತರಣೆ ಜವಾಬ್ದಾರಿ ಹೊತ್ತುಕೊಂಡಿದೆ' ಎಂದಿದ್ದಾರೆ ಲಿಖಿತ್.

ಟಿ.ಶಿವಕುಮಾರ್ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ, ಯೋಗೇಶ್‌ಗೌಡ ಕಥೆ, ಶಂಕರ ರಾಮನ್ ಅವರ ಸಂಭಾಷಣೆ ಚಿತ್ರಕ್ಕಿದೆ. ಮಹಿರ್ ಜತೆ ಹರಿಣಿ ಸುಂದರ ರಾಜನ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಆಂಟನಿ ಎಂ.ಜಿ, ಹರಿ ಕೃಷಾಂತ್ ಸಂಗೀತ ಸಂಯೋಜನೆ, ಗೌತಮ್ ಕೃಷ್ಣ ಛಾಯಾಚಿತ್ರಗ್ರಹಣ, ಸುರೇಶ್ ಆರ್ಮುಗಂ ಸಂಕಲನ ಈ ಚಿತ್ರಕ್ಕಿದೆ.

'ಫ್ಲರ್ಟ್' ಹಾಡಿಗೆ ಧ್ವನಿಯಾದ ಸುದೀಪ್

ಕಿರುತೆರೆ ನಟ ಚಂದನ್ ಕುಮಾರ್ ನಿರ್ದೇಶಿಸಿ, ನಾಯಕನಾಗಿ ನಟಿಸಿರುವ 'ಫ್ಲರ್ಟ್' ಚಿತ್ರದ 'ನೀ ನನ್ನ ಜೀವ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸ್ನೇಹದ ಕುರಿತಾದ ಈ ಗೀತೆಗೆ ನಟ ಸುದೀಪ್ ಧ್ವನಿಯಾಗಿದ್ದಾರೆ.

ಹುಡುಗಿಯರನ್ನು ಚುಡಾಯಿಸಿಕೊಂಡು ಓಡಾಡುವ ಹುಡುಗನ ಕಥೆ ಹೊಂದಿರುವ ಚಿತ್ರವಿದು. ಎವರೆಸ್ಟ್ ಪಿಕ್ಚರ್ಸ್ ಬ್ಯಾನರ್ ಅಡಿ ಚಂದನ್ ಅವರ ಪತ್ನಿ ಕವಿತಾಗೌಡ ಈ ಚಿತ್ರವನ್ನು ನಿರ್ಮಿಸಿದ್ದಾರೆ.

'ಇದೊಂದು ರಾಂಕಾಮ್ ಸಿನಿಮಾ. ಸ್ನೇಹ, ಪ್ರೀತಿ ಸೇರಿದಂತೆ ಎಲ್ಲಾ ರೀತಿಯ ಮನರಂಜನೀಯ ಅಂಶಗಳನ್ನು ಒಳಗೊಂಡಿದೆ. ಫ್ಲರ್ಟ್ ಎಂದರೆ ಕೇವಲ ಚುಡಾಯಿಸುವುದು ಎಂದರ್ಥವಲ್ಲ. ಗಾಢವಾದ ಪ್ರೀತಿಯನ್ನೂ ಸಹ ಫ್ಲರ್ಟ್ ಎಂದೇ ಕರೆಯುತ್ತಾರೆ. ಈ ಚಿತ್ರದಲ್ಲಿ ರಾಂಕಾಮ್ ಜತೆಗೆ ಸೈಕೋ ಕ್ಯಾರೆಕ್ಟರ್ ಕೂಡ ಇದೆ. ಇಡೀ ಚಿತ್ರ ಎಲ್ಲೂ ಬೋರಾಗದಂತೆ ವೇಗವಾಗಿ ಸಾಗುತ್ತದೆ' ಎಂದರು ಚಂದನ್.

ಅಕ್ಷತಾ ಬೋಪಣ್ಣ ಹಾಗೂ ನಿಮಿಕಾ ರತ್ನಾಕರ್ ನಾಯಕಿಯರು. ಶ್ರುತಿ, ಸಾಧು ಕೋಕಿಲ, ಗಿರಿ, ಮೂಗು ಸುರೇಶ್ ಮುಂತಾದವರು ಚಿತ್ರದಲ್ಲಿದ್ದಾರೆ. ಈ ಗೀತೆಗೆ ನಕುಲ್ ಅಭಯಂಕರ್ ಸಂಗೀತ ಸಂಯೋಜನೆ ಮಾಡಿದ್ದಾರೆ. ಜೆಸ್ಸಿ ಗಿಫ್ಟ್ ಸಂಗೀತ, ವೇಣುಗೋಪಾಲ್ ಎಚ್.ಸಿ ಛಾಯಾಚಿತ್ರಗ್ರಹಣವಿದೆ.



ಅಕ್ಷತಾ ಬೋಪಣ್ಣ, ಚಂದನ್, ನಿಮಿಕಾ ರತ್ನಾಕರ್



ಪ್ರಿಯಾಂಕಾ ಉಪೇಂದ್ರ, ಅನಂತಸ್ವಾಮಿ, ರಜನಿ ಭಾರದ್ವಾಜ್

ಆ.22ರಂದು ತೆರೆಗೆ 'ಕಮರೊ2'

'ಕಮರೊಟ್ಟು ಚೆಕ್‌ಪೋಸ್ಟ್' ನಿರ್ದೇಶಿಸಿದ್ದ ಪರಮೇಶ್ ನಿರ್ದೇಶನದ 'ಕಮರೊ2' ಚಿತ್ರ ಬಿಡುಗಡೆಗೆ ಸಜ್ಜಾಗುತ್ತಿದೆ. ಚಿತ್ರಮಂದಿರಗಳ ಕೊರತೆಯಿಂದ ಆ.1ರಂದು ತೆರೆಕಾಣಬೇಕಿದ್ದ ಈ ಸಿನಿಮಾ ಇದೀಗ ಆ.22ರಂದು ರಿಲೀಸ್ ಆಗುತ್ತಿದೆ. ಇತ್ತೀಚೆಗೆ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ.

ಕನ್ನಡದಲ್ಲಿ ತೀರ ಅಪರೂಪ ಎನ್ನಬಹುದಾದ ಪ್ಯಾರಾ ನಾರ್ಮಲ್ ಜಾನರ್‌ನ 'ಕಮರೊ2' ಹಾರಾರ್ ಕಥಾಹಂದರ ಹೊಂದಿದೆ. ಪವನ್ ಗೌಡ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

'ನಾನು ಈ ಹಿಂದೆ ನಿರ್ದೇಶಿಸಿದ್ದ 'ಕಮರೊಟ್ಟು ಚೆಕ್‌ಪೋಸ್ಟ್' ಕೂಡಾ ಇದೇ ಜಾನರ್‌ನಲ್ಲಿತ್ತು. ಅದು ನನ್ನ ತಂತ್ರಜ್ಞಾನದ ಅನುಭವಕ್ಕಾಗಿ ಮಾಡಿದ ಚಿತ್ರ. ಅದರಲ್ಲಿ ಯಾವುದೇ ಪರಿಚಿತ ಕಲಾವಿದರು ಅಭಿನಯಿಸಿರಲಿಲ್ಲ. ಆದರೂ ಚಿತ್ರ ಅಪಾರ ಮೆಚ್ಚುಗೆ ಪಡೆಯಿತು. ಈಗ ಸೀಕ್ವೆಲ್ ಆಗಿ 'ಕಮರೊ2' ಬರುತ್ತಿದೆ. ಉಡುಪಿ, ಚಿಕ್ಕಮಗಳೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ಆಗಿದೆ. ಮೊದಲ ಬಾರಿಗೆ ವಿಭಿನ್ನ ಪಾತ್ರದಲ್ಲಿ ಪ್ರಿಯಾಂಕ ಉಪೇಂದ್ರ ನಟಿಸಿದ್ದಾರೆ. ಹಿಂದೆಂದೂ ಅವರು ಈ ಮಾದರಿಯ ಪಾತ್ರ ಮಾಡಿಲ್ಲ. ಕನ್ನಡದ 'ಮಿಥುನ ರಾಶಿ' ಸೇರಿದಂತೆ ತಮಿಳಿನ ಧಾರಾವಾಹಿಗಳಲ್ಲೂ ನಟಿಸಿರುವ ಅನಂತಸ್ವಾಮಿ, ರಜನಿ ಭಾರದ್ವಾಜ್ ಮುಖ್ಯಭೂಮಿಕೆಯಲ್ಲಿದ್ದಾರೆ. ನೀನಾಸಂ ಅಶ್ವಥ್, ನಾಗೇಂದ್ರ ಅರಸ್, ಮಹೇಶ್ ರಾಜ್, ಬೇಬಿ ಖುಷಿ ತಾರಾಬಳಗದಲ್ಲಿದ್ದಾರೆ. ವಿಶೇಷ ಪಾತ್ರದಲ್ಲಿ ರಾಘವೇಂದ್ರ ರಾಜಕುಮಾರ್ ಬಣ್ಣಹಚ್ಚಿದ್ದಾರೆ' ಎಂದರು ಪರಮೇಶ್. ಎ.ಟಿ.ರವೀಶ ಸಂಗೀತ ನಿರ್ದೇಶನ, ಸಂಗಮೇಶ್ ವಿಎಫ್‌ಎಕ್ಸ್ ಚಿತ್ರಕ್ಕಿದೆ.

ಒಂದೇ ದಿನ, ಒಂದೇ ಸಂಸ್ಥೆಯ ಎರಡು ಚಿತ್ರಗಳು



ಪ್ರಿಯಾ

ಒಂದೇ ನಿರ್ಮಾಣ ಸಂಸ್ಥೆಯಿಂದ ಎರಡು ಸಿನಿಮಾಗಳು ಒಂದೇ ದಿನ ತೆರೆಗೆ ಬರುವುದು ಬಹಳ ವಿರಳ. ನಾಗೇಶ್ ಕುಮಾರ್ ಯು.ಎಸ್ ಮತ್ತು ಜೆ.ಜೆ. ಶ್ರೀನಿವಾಸ್ ನಿರ್ಮಿಸಿ, ಜೆ.ಜೆ.ಶ್ರೀನಿವಾಸ್ ನಿರ್ದೇಶಿಸಿರುವ 'ಕಸ್ಟಡಿ', 'ಪಾಲ್ಗುಣಿ' ಚಿತ್ರಗಳು ಆ.8ರಂದು ತೆರೆಗೆ ಬರಲಿವೆ. ಉಭಯ ಚಿತ್ರಗಳ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ.

'ಕಸ್ಟಡಿ' ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಾದರೆ, 'ಪಾಲ್ಗುಣಿ' ಮಂಡ್ಯದಲ್ಲಿ ನಡೆದ ನೈಜ ಘಟನೆಯೊಂದನ್ನು ಆಧರಿಸಿದ ಕಥಾಹಂದರ ಹೊಂದಿರುವ ಚಿತ್ರ. 'ಭೀಮ' ಖ್ಯಾತಿಯ ಪ್ರಿಯಾ ಶಠಮರ್ಷಣ 'ಕಸ್ಟಡಿ' ಚಿತ್ರದ ಪ್ರಮುಖಪಾತ್ರದಲ್ಲಿ, ರೇಖಾಶ್ರೀ 'ಪಾಲ್ಗುಣಿ' ಪಾತ್ರದಲ್ಲಿ ನಟಿಸಿದ್ದಾರೆ.



ನಾಗೇಶ್ ಕುಮಾರ್ ಯು.ಎಸ್, ಜೆ.ಜೆ. ಶ್ರೀನಿವಾಸ್

'ನನ್ನ ನಿರ್ದೇಶನದ ಎರಡು ಚಿತ್ರಗಳನ್ನು ನಾಗೇಶ್ ಕುಮಾರ್ ಯು.ಎಸ್ ಅವರೇ ನಿರ್ಮಾಣ ಮಾಡಿದ್ದಾರೆ. ನನಗೆ ತಿಳಿದ ಹಾಗೆ ಒಬ್ಬರೆ ನಿರ್ಮಿಸಿರುವ ಹಾಗೂ ಒಬ್ಬರೆ ನಿರ್ದೇಶಿಸಿರುವ ಎರಡು ಚಿತ್ರಗಳು ಒಂದೇ ದಿನ ಬಿಡುಗಡೆಯಾಗುತ್ತಿರುವುದು ಇದೇ ಮೊದಲು. ಈ ಎರಡು ಚಿತ್ರಗಳು ವರಮಹಾಲಕ್ಷ್ಮೀ ಹಬ್ಬದ ದಿನ ಬಿಡುಗಡೆಯಾಗುತ್ತಿದೆ. ಎರಡೂ ಭಿನ್ನ ಕಥೆಗಳನ್ನು ಹೊಂದಿರುವ ಚಿತ್ರಗಳು. ಎರಡಕ್ಕೂ ಬೇರೆ ಬೇರೆ ವರ್ಗದ ಪ್ರೇಕ್ಷಕರು ಇರುವುದರಿಂದ ಒಂದೇ ದಿನ ಚಿತ್ರ ಬಿಡುಗಡೆ ಧೈರ್ಯ ಮಾಡಿದ್ದೇವೆ' ಎಂದರು ನಿರ್ದೇಶಕರು. 'ನಾನು ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿ. ದುರ್ಗಾ ಪರಮೇಶ್ವರಿ ನನ್ನ ಪಾತ್ರದ ಹೆಸರು. ಪೊಲೀಸ್ ಠಾಣೆಯಲ್ಲಿ ನಡೆಯುವ ಕಥೆಯಿದು' ಎಂದರು ಪ್ರಿಯಾ.

ಕೊಡಗು: ತಡಿಯಂಡಮೋಳ್ ಬೆಟ್ಟದಲ್ಲಿ ಚಾರಣಕ್ಕೆ ನಿರ್ಬಂಧ

ಹೆದ್ದಾರಿ ತಡೆಗೋಡೆ ಬಿರುಕು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಗುರುವಾರ ಮಳೆ, ಗಾಳಿ ಕಡಿಮೆಯಾಗಿದೆ. ಆದರೆ, ಮಡಿಕೇರಿ– ಮಂಗಳೂರನ್ನು ಸಂಪರ್ಕಿಸುವ ಮಾಣಿ– ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 275ರಲ್ಲಿ ನಿರ್ಮಿಸಿದ್ದ ತಡೆಗೋಡೆಯೊಂದರಲ್ಲಿ ಬಿರುಕು ಕಂಡು ಬಂದಿದೆ.

ಮಡಿಕೇರಿಯಿಂದ ಒಂದೂವರೆ ಕಿ.ಮೀ ದೂರದಲ್ಲಿರುವ ತಡೆಗೋಡೆಯ ಕೆಳಭಾಗದಲ್ಲಿ ವಾಸವಿದ್ದ 5 ಕುಟುಂಬಗಳ ಪೈಕಿ 4 ಕುಟುಂಬದ 10 ಮಂದಿಯನ್ನು ಕಾಳಜಿ ಕೇಂದ್ರಕ್ಕೆ ಕಳುಹಿಸಲಾಗಿದೆ. ಒಂದು ಕುಟುಂಬದವರು ಕಾಳಜಿ ಕೇಂದ್ರಕ್ಕೆ ಬರಲು ಒಪ್ಪದೇ ಅಲ್ಲಿಯೇ ವಾಸವಿದ್ದಾರೆ.

‘ದೊಡ್ಡ ತಡೆಗೋಡೆಗೆ ಏನೂ ಆಗಿಲ್ಲ. ಅದಕ್ಕೆ ಬೆಂಬಲವಾಗಿ 2022ರಲ್ಲಿ ನಿರ್ಮಿಸಿದ್ದ ತಡೆಗೋಡೆಯಲ್ಲಿ ಬಿರುಕು ಕಾಣಿಸಿದೆ. ಸರಿಪಡಿಸುವ ಕಾರ್ಯ ಶುಕ್ರವಾರದಿಂದಲೇ ಆರಂಭವಾಗಲಿದೆ. ಸದ್ಯ, ಹೆಚ್ಚಿನ ಆತಂಕ ಇಲ್ಲ’ ಎಂದು ರಾಷ್ಟ್ರೀಯ ಹೆದ್ದಾರಿಯ ಕಾರ್ಯನಿರ್ವಾಹಕ ಎಂಜಿನಿಯರ್ ಜಿ.ಎಚ್.ಗಿರೀಶ ‘ಪ್ರಜಾವಾಣಿ’ಗೆ ತಿಳಿಸಿದರು.

2018–19ರಲ್ಲಿ ಸುರಿದ ಭಾರಿ ಮಳೆಯಿಂದ ಇಲ್ಲಿ ಮಣ್ಣು ಕುಸಿದಿತ್ತು. ಸಂಪಾಜೆಯಲ್ಲಿ 6 ಸೆಂ.ಮೀ, ಶಾಂತಳ್ಳಿಯಲ್ಲಿ 4, ಮಡಿಕೇರಿಯಲ್ಲಿ 3, ಭಾಗಮಂಡಲದಲ್ಲಿ 2.4 ಸೆಂ.ಮೀನಷ್ಟು ಮಳೆಯಾಗಿದೆ.

ಕೊಡಗು ಜಿಲ್ಲೆಯ ಅತ್ಯಂತ ಎತ್ತರದ ಬೆಟ್ಟ ತಡಿಯಂಡಮೋಳ್ ಬೆಟ್ಟದ ಮಾರ್ಗವು ಮಳೆಯಿಂದ ಅಪಾಯಕಾರಿಯಾಗಿ ಪರಿಣಮಿಸಿದ್ದು, ಪ್ರವಾಸಿಗರ ಚಾರಣ ನಿರ್ಬಂಧಿಸಿ ಅರಣ್ಯ ಇಲಾಖೆ ಆದೇಶ ಹೊರಡಿಸಿದೆ.



ಬಿರುಕು ಬಿಟ್ಟಿರುವ ತಡೆಗೋಡೆಯನ್ನು ಕೊಡಗು ಜಿಲ್ಲಾಧಿಕಾರಿ ವೆಂಕಟ್ ರಾಜಾ ಗುರುವಾರ ಪರಿಶೀಲಿಸಿದರು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	121.65	21,635	13,881
ಹಾರಂಗಿ	2,859	2,855.13	6,462	3,931
ಕಬಿನಿ	2,284.00	2,281.46	12,113	12,000
ಹೇಮಾವತಿ	2,922	2,921	9,303	8,125
ಲಿಂಗನಮಕ್ಕಿ	1,819	1,811.20	14,461	7,308
ಸೂಪಾ (ಮೀ)	564	551.17	12,008	5238
ಮಾಣಿ	595	590.45	2,868	715
ತುಂಗಭದ್ರಾ	1,633	1,624.83	52,878	51,317
ಮಲಪ್ರಭಾ	2,079.5	2,075	6,844	4,394
ಘಟಪ್ರಭಾ	2175	2,170.16	9,441	11,902
ಭದ್ರಾ *	186	180.3	16,694	16,694
ಆಲಮಟ್ಟಿ (ಮೀ)	519.6	518.05	1,57,150	1,40,550
ನಾರಾಯಣಪುರ (ಮೀ)	492.25	491.51	1,35,000	1,14,060

* ನೆಲಮಟ್ಟದಿಂದ

2ನೇ ಅಧಿಕೃತ ಭಾಷೆಯಾಗಿ ತುಳು: ಸಮಿತಿ ರಚನೆ

ಬೆಂಗಳೂರು: ತುಳುವನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸುವುದಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸಲು, ಐದು ಮಂದಿಯನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.

ಎರಡನೇ ಭಾಷೆಯಾಗಿ ಘೋಷಿಸಲು ಅನುಸರಿಸಲಾಗುವ ಮಾನದಂಡಗಳ ಬಗ್ಗೆ ಅಧ್ಯಯನ ನಡೆಸಲು ಈ ಸಮಿತಿಯು ಆಂಧ್ರಪ್ರದೇಶಕ್ಕೆ ತೆರಳಲಿದೆ. ತುಳು ಭಾಷೆಯನ್ನು ಕರ್ನಾಟಕ ರಾಜ್ಯದ ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸಬೇಕೆಂಬ ಬೇಡಿಕೆ ಇದೆ. ಈ ಬಗ್ಗೆ ಅನುಸರಿಸಲಾಗುವ ಮಾನದಂಡಗಳ ಬಗ್ಗೆ ಅಧ್ಯಯನ ನಡೆಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಆದೇಶ ಹೊರಡಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಗಾಯಿತ್ರಿ ಕೆ.ಎಂ. ಅವರು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಕಾನೂನು ಇಲಾಖೆ ಉಪ ಕಾರ್ಯದರ್ಶಿ ವನಿತಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಉಪ ಕಾರ್ಯದರ್ಶಿ ಮೂರ್ತಿ ಕೆ.ಎನ್., ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್ ಹಾಗೂ ಕರ್ನಾಟಕ ಯಕ್ಷಗಾನ ಅಕಾಡೆಮಿ ಸದಸ್ಯ ಸುಧಾಕರ್ ಶೆಟ್ಟಿ ಅವರು ಸಮಿತಿಯ ಸದಸ್ಯರಾಗಿದ್ದಾರೆ.

ಮೂರು ತಿಂಗಳೊಳಗೆ ಅಧ್ಯಯನದ ವರದಿ ನೀಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

‘ಮತ ಕಳ್ಳತನ’: 5ಕ್ಕೆ ಪ್ರತಿಭಟನೆ

ಸ್ವಾತಂತ್ರ್ಯ ಉದ್ಯಾನದಲ್ಲಿ ಆಯೋಜನೆ: ಡಿಸಿಎಂ ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ನಡೆದಿರುವ ‘ಮತ ಕಳ್ಳತನ’ದ ವಿರುದ್ಧ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಆಗಸ್ಟ್ 5ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಬಳಿಕ ಮುಖ್ಯ ಚುನಾವಣಾಧಿಕಾರಿಗೆ ಮನವಿ ಸಲ್ಲಿಸಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸ್ವಾತಂತ್ರ್ಯ ಉದ್ಯಾನದ ಬಳಿ ಪೂರ್ವಸಿದ್ಧತೆಗೆ ಸಂಬಂಧಿಸಿದಂತೆ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಜೊತೆ ಸ್ಥಳ ಪರಿಶೀಲಿಸಿದ ಬಳಿಕ ಸುದ್ದಿಗಾರರ ಜೊತೆ ಡಿ.ಕೆ. ಶಿವಕುಮಾರ್ ಮಾತನಾಡಿದರು.

‘ನಾವು ಪಾದಯಾತ್ರೆ ಹಮ್ಮಿಕೊಂಡಿಲ್ಲ. ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನಾ ಸಭೆ ನಡೆಸಿದ ಬಳಿಕ ಐದಾರು ನಾಯಕರು ಚುನಾವಣಾ ಆಯೋಗ ಕಚೇರಿಗೆ ತೆರಳುತ್ತೇವೆ. ಆಯೋಗದವರೆಗೆ ನಡೆದುಕೊಂಡು ಹೋಗುವ ಬಗ್ಗೆ ಪೊಲೀಸರು ನೀಡುವ ಸಲಹೆಯಂತೆ ತೀರ್ಮಾನ ತೆಗೆದುಕೊಳ್ಳುತ್ತೇವೆ’ ಎಂದರು.

‘ಯಾವ ಕ್ಷೇತ್ರಗಳ ಮತದಾರ ಪಟ್ಟಿಯಲ್ಲಿನ ಅಕ್ರಮದ ದಾಖಲೆಗಳನ್ನು ಪ್ರತಿಭಟನೆಯ ಸಂದರ್ಭದಲ್ಲಿ ಬಿಡುಗಡೆ ಮಾಡಬೇಕೆಂದು ರಾಹುಲ್ ಗಾಂಧಿಯವರು ತೀರ್ಮಾನಿಸಿ, ಬಹಿರಂಗಪಡಿಸಲಿದ್ದಾರೆ’ ಎಂದೂ ಹೇಳಿದರು.

‘ಮತ ಕಳ್ಳತನ’ದ ವಿರುದ್ಧ ಕರ್ನಾಟಕದ ನೆಲದಿಂದಲೇ ಹೋರಾಟ ಆರಂಭಿಸಿದರೆ ಹೆಚ್ಚಿನ ಶಕ್ತಿ ಸಿಗಲಿದೆ ಎಂದು ರಾಹುಲ್ ಗಾಂಧಿ ನಿರ್ಧರಿಸಿದ್ದಾರೆ. ಚುನಾವಣೆ ವೇಳೆ ಆಗಿರುವ ಲೋಪದೋಷಗಳನ್ನು ಪಕ್ಷದ ನಾಯಕರು ಎತ್ತಿ ತೋರಿಸಲಿದ್ದಾರೆ’ ಎಂದರು. ‘ನಮ್ಮ ಸರ್ಕಾರವೇ ಮಾಡಿರುವ ನಿಯಮಗಳು ಹಾಗೂ ನ್ಯಾಯಾಲಯ ನೀಡಿರುವ ನಿರ್ದೇಶನ ಪಾಲಿಸಿ ಪ್ರತಿಭಟನೆ ನಡೆಸುತ್ತೇವೆ. ಈ ಪ್ರತಿಭಟನೆಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಭಾಗವಹಿಸುವಂತೆ ಮನವಿ ಮಾಡಲಾಗಿದೆ. ಎಲ್ಲ ಬ್ಲಾಕ್ ಘಟಕಗಳಿಂದ ಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು’ ಎಂದರು.

‘ಕರಡು ಮತದಾರರ ಪಟ್ಟಿಗೆ ಹಿಂದೆ ಆಕ್ಷೇಪಣೆ ಏಕೆ ಸಲ್ಲಿಸಿಲ್ಲ’ ಎಂಬ ಪ್ರಶ್ನೆಗೆ, ‘ನಮ್ಮ ಆಕ್ಷೇಪಣೆಯನ್ನು ಚುನಾವಣಾ ಆಯೋಗ ಸ್ವೀಕರಿಸಿಲ್ಲ. ಮತದಾರ ಪಟ್ಟಿಯಲ್ಲಿನ ಅಕ್ರಮದ ಬಗ್ಗೆ ಮಹದೇವಪುರ ಕ್ಷೇತ್ರದ ಅಭ್ಯರ್ಥಿ ನಾಗೇಶ್ ಮತ್ತು ಅವರ ಪುತ್ರ ದಾಖಲೆಗಳನ್ನು ತೋರಿಸಿದ್ದಾರೆ. ದಿನೇಶ್ ಗುಂಡೂರಾವ್ ಪ್ರತಿನಿಧಿಸುವ ಗಾಂಧಿನಗರ ಕ್ಷೇತ್ರದಲ್ಲೂ ಇದೇ ರೀತಿ ಅಕ್ರಮ ನಡೆದಿದೆ. ಅಲ್ಲಿ ಒಂದು ವಾರ್ಡ್‌ನಲ್ಲಿ ಏಳು ಸಾವಿರ ಮತದಾರರನ್ನು ಸೇರ್ಪಡೆ ಮಾಡಲಾಗಿದೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ರಾಹುಲ್ ಗಾಂಧಿ ಬಳಿ ಸಾಕ್ಷ್ಯ ಇದೆ’

‘ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮಹದೇವಪುರ ಮತ್ತು ರಾಜಾಜಿನಗರ ಮತಕ್ಷೇತ್ರದಲ್ಲಿ ಮತ ಕಳ್ಳತನ ನಡೆದಿರುವ ಬಗ್ಗೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಬಳಿ ಸಾಕ್ಷ್ಯ ಇದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮತ ಕಳ್ಳತನ ಬಗ್ಗೆ ಸಾಕ್ಷ್ಯ ಇರುವುದರಿಂದಲೇ ನಾವು ಆಗಸ್ಟ್ 5ರಂದು ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ರಾಷ್ಟ್ರೀಯ ಮತ್ತು ರಾಜ್ಯದ ನಾಯಕರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದರು.

‘ಚುನಾವಣೆ ಅಕ್ರಮ ಪರಿಚಯಿಸಿದ್ದೇ ಕಾಂಗ್ರೆಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆಗಳಲ್ಲಿ ಅಕ್ರಮಗಳನ್ನು ಪರಿಚಯಿಸಿದ್ದೇ ಕಾಂಗ್ರೆಸ್ ಪಕ್ಷ. ಅಂತಹ ಪಕ್ಷ ಈಗ ಚುನಾವಣಾ ಅಕ್ರಮದ ಬಗ್ಗೆ ಆರೋಪ ಮಾಡುತ್ತಿದೆ ಎಂದು ವಿರೋಧಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

ಇಂದಿರಾಗಾಂಧಿ ಚುನಾವಣಾ ಅಕ್ರಮ ನಡೆಸಿದ್ದರು ಎಂಬುದು ನ್ಯಾಯಾಲಯದಲ್ಲಿ ಸಾಬೀತಾಗಿತ್ತು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು. ರಾಹುಲ್‌ಗಾಂಧಿ ಆಗಸ್ಟ್ 5 ರಂದು ರಾಜ್ಯಕ್ಕೆ ಬರುವುದೇ ದೊಡ್ಡ ನಾಟಕ. ಇಲ್ಲಿ ಸರ್ಕಾರ ನಡೆಯುತ್ತಿಲ್ಲ. ಬದಲಿಗೆ ಮುಖ್ಯಮಂತ್ರಿ ಕುರ್ಚಿಗಾಗಿ ಕಲಹ ನಡೆಯುತ್ತಿದೆ. ಅದನ್ನು ಮರೆಮಾಚಲೆಂದೇ ಚುನಾವಣಾ ಅಕ್ರಮದ ವಿಷಯ ಪ್ರಸ್ತಾಪ ಮಾಡಲಾಗಿದೆ ಎಂದು ಹೇಳಿದರು.

ಚುನಾವಣೆ ನಡೆದಾಗ ನ್ಯಾಯಾಲಯದ ಮೊರೆ ಹೋಗದೆ, ಇಷ್ಟು ವರ್ಷವಾದ ಬಳಿಕ ಆರೋಪ ಮಾಡಲಾಗುತ್ತಿದೆ. ಲೋಕಸಭಾ ಚುನಾವಣೆ ನಡೆದಾಗ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವೇ ಆಡಳಿತ ನಡೆಸುತ್ತಿತ್ತು. ಇಂತಹ ಅಧಿಕಾರಿಯೇ ಅಕ್ರಮ ಮಾಡಿದ್ದಾರೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಲಿ ಎಂದು ಆಗ್ರಹಿಸಿದರು.

‘ಸಚಿವ ರಾಜಣ್ಣ ಅವರ ಹನಿಟ್ರ್ಯಾಪ್ ಪ್ರಕರಣವು ಸದನದಲ್ಲಿ ಗದ್ದಲ ಸೃಷ್ಟಿಸಿತು. ಈಗ ಆ ಘಟನೆ ನಡೆದೇ ಇಲ್ಲ ಎಂದು ಸರ್ಕಾರ ವರದಿ ನೀಡಿದೆ. ಸಚಿವರ ಮಾತಿಗೆ ಬೆಲೆ ಇಲ್ಲವಾಗಿದೆ. ಸಚಿವರು ಏನೇ ಮಾತನಾಡಿದರೂ ಅದು ಸರ್ಕಾರದ ಮಾತಾಗುತ್ತದೆ. ಅಂತಹವರ ಹೇಳಿಕೆಯನ್ನು ವಾಷಿಂಗ್ ಮೆಷಿನ್‌ಗೆ ಹಾಕಿ ಸ್ವಚ್ಛ ಮಾಡಲಾಗಿದೆ. ಪೊಲೀಸರ ಮೇಲೆ ಯಾರ ಒತ್ತಡವಿದೆ ಎಂದು ಗೊತ್ತಾಗಿಲ್ಲ’ ಎಂದು ಅವರು ಪ್ರಶ್ನಿಸಿದರು.

ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ಸ್ವಾಗತ ಸಮಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ಹೊಸ ಬ್ಯಾಚ್‌ನ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ನಡೆಯಿತು.


ಕಾರ್ಯಕ್ರಮ ಉದ್ಘಾಟಿಸಿದ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ‘ತಮಿಳುನಾಡಿನ ಒಂದು ಸಣ್ಣ ಹಳ್ಳಿಯಲ್ಲಿ ಶೈಕ್ಷಣಿಕ ಪ್ರಯಾಣ ಆರಂಭಗೊಂಡಿತು. ಅನೇಕ ಸವಾಲುಗಳನ್ನು ಎದುರಿಸಿ, ಐಎಎಸ್ ಅಧಿಕಾರಿಯಾಗಿದ್ದೇನೆ. ರಾಜ್ಯದ ಪ್ರಗತಿಗೆ ಕೆಲಸ ಮಾಡುತ್ತಿದ್ದೇನೆ’ ಎಂದರು.

ಕನಸುಗಳು, ದೃಢನಿಶ್ಚಯ ಮತ್ತು ಶಿಸ್ತಿನ ಪ್ರಾಮುಖ್ಯತೆ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.



ನಗರದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್, ರಾಜಲಕ್ಷ್ಮೀ ಮೆನನ್, ಪ್ರಭಾರ ಕುಲಪತಿ ಎಸ್. ಜೆ. ತಿರುವೆಂಗಡಂ, ಸಹ ಕುಲಾಧಿಪತಿಗಳಾದ ಶಿವ ಪೆರುಮಾಳ್, ವಿದ್ಯಾ ಶಂಕರ್ ಶೆಟ್ಟಿ ಮತ್ತು ರಿಜಿಸ್ಟ್ರಾರ್ ಸಮೀನಾ ನೂರ್ ಅಹ್ಮದ್ ಪನಾಲಿ ಪಾಲ್ಗೊಂಡಿದ್ದರು

ಡಿಆರ್‌ಡಿಒ ಮಹಾ ನಿರ್ದೇಶಕಿ (ಏರೋನಾಟಿಕಲ್ ಸಿಸ್ಟಮ್ಸ್) ರಾಜಲಕ್ಷ್ಮೀ ಮೆನನ್ ಮಾತನಾಡಿ, ‘ಜೀವನದಲ್ಲಿ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿ ಸಾಧನೆ ಮಾಡಬೇಕು’ ಎಂದರು.



ರಾಜಕಾಲುವೆ ಬಫರ್ ವಲಯ ಕಡಿತ

'ಸಂರಕ್ಷಿತ ಪ್ರದೇಶ'ದ ಅರ್ಧದಷ್ಟು ಕಡಿಮೆ ಮಾಡಲು ನಿರ್ಧಾರ

• ಆರ್. ಮಂಜುನಾಥ್

ಬೆಂಗಳೂರು: ರಾಜ್ಯದಲ್ಲಿ ಮಳೆನೀರು ಹರಿಸುವ ರಾಜಕಾಲುವೆಗಳ ಬಫರ್ ವಲಯವನ್ನು ಈಗಿರುವ ವ್ಯಾಪ್ತಿಗಿಂತ ಅರ್ಧದಷ್ಟು ಕಡಿಮೆ ಮಾಡಲು ಸರ್ಕಾರ ಮುಂದಾಗಿದೆ.

ಮುಖ್ಯ ಕಾರ್ಯದರ್ಶಿ ನೇತೃತ್ವದ ಅಧಿಕಾರಿಗಳ ಸಭೆಯ ತೀರ್ಮಾನದಂತೆ ನೀಡಲಾಗಿರುವ ವರದಿಗೆ ಸರ್ಕಾರ ಅನುಮೋದನೆ ನೀಡಿದೆ. ಬಫರ್ ವಲಯ ಕಡಿಮೆಗೊಳಿಸುವ ಕುರಿತು, ನಗರಾಭಿವೃದ್ಧಿ ಇಲಾಖೆ ಶೀಘ್ರವೇ ಅಧಿಸೂಚನೆ ಹೊರಡಿಸಲಿದೆ ಎಂದು ಮೂಲಗಳು ತಿಳಿಸಿವೆ.

ಕೆರೆಗಳ 'ಸಂರಕ್ಷಿತ ಪ್ರದೇಶ'ವನ್ನು ಕಡಿಮೆ ಮಾಡಲು ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಕೆಟಿಸಿಡಿಎ) ಕಾಯ್ದೆಗೆ ತಿದ್ದುಪಡಿ ತರಲು ಜುಲೈ 17ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ರಾಜಕಾಲುವೆ ಬಫರ್ ವಲಯ ಕೆಟಿಸಿಡಿಎ ವ್ಯಾಪ್ತಿಗೆ ಬರದಿರುವುದರಿಂದ, ಸಮಿತಿಯ ತೀರ್ಮಾನದಂತೆ ಅಧಿಸೂಚನೆ ಹೊರಡಿಸಲು ನಿರ್ಧರಿಸಲಾಗಿದೆ.

ಕೆರೆಗಳು ಮತ್ತು ರಾಜಕಾಲುವೆಗಳ ವಿಸ್ತೀರ್ಣಕ್ಕೆ ಅನುಗುಣವಾಗಿ 'ಸಂರಕ್ಷಿತ ಪ್ರದೇಶ'ವನ್ನು ನಿಗದಿಪಡಿಸಲು ಹಾಗೂ ಬಫರ್ ವಲಯದಲ್ಲಿ ಸಾರ್ವಜನಿಕ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಕೆಟಿಸಿಡಿಎ ಕಾಯ್ದೆ ತಿದ್ದುಪಡಿ ತರಲು, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರ ಸೂಚನೆಯಂತೆ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಜುಲೈ 10ರಂದು ನಡೆದ ಸಮಿತಿ ಸಭೆಯಲ್ಲಿ, ಕೆರೆಗಳು ಹಾಗೂ ರಾಜಕಾಲುವೆಗಳ ಬಫರ್ ವಲಯ ವ್ಯಾಪ್ತಿಯನ್ನು ಮರು ನಿಗದಿಪಡಿಸಲು ತೀರ್ಮಾನಿಸಲಾಗಿದೆ. ಅದರ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ.


ಪ್ರಥಮ, ದ್ವಿತೀಯ ಮತ್ತು ತೃತೀಯ ರಾಜಕಾಲುವೆಗಳನ್ನು ಈ ಹಿಂದೆ ಸೂಕ್ತವಾಗಿ ವ್ಯಾಖ್ಯಾನಿಸಿಲ್ಲ ಎಂದು ಅಭಿಪ್ರಾಯಪಟ್ಟಿರುವ ಸಮಿತಿ, ರಾಜಕಾಲುವೆಗಳ ಬಫರ್ ವಲಯ ನಿಗದಿಪಡಿಸುವ ಮುನ್ನ, ರಾಜಕಾಲುವೆಗಳನ್ನು ಹೊಸದಾಗಿ ವ್ಯಾಖ್ಯಾನಿಸಿದೆ.

ರಾಜಕಾಲುವೆಗಳ ಬಫರ್ ವಲಯ ನಿಗದಿಪಡಿಸುವುದು ಕೆಟಿಸಿಡಿಎ ಕಾಯ್ದೆ ವ್ಯಾಪ್ತಿಯಲ್ಲಿ ಇಲ್ಲದಿರುವುದರಿಂದ ನಗರಾಭಿವೃದ್ಧಿ ಇಲಾಖೆಯಿಂದ ಪ್ರತ್ಯೇಕ ಅಧಿಸೂಚನೆ ಹೊರಡಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಸಲಹೆಯನ್ನು ಸಭೆ ಒಪ್ಪಿದೆ.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ), ಸುಪ್ರೀಂ ಕೋರ್ಟ್ ಆದೇಶಗಳ ಬಗ್ಗೆ ಕಾನೂನು ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿಯವರು ಅಡ್ವೊಕೇಟ್ ಜನರಲ್ ಅಭಿಪ್ರಾಯದಂತೆ ನೀಡಿದ ಸಲಹೆಗಳಂತೆ ಕೆರೆ ಹಾಗೂ ರಾಜಕಾಲುವೆಗಳ ಬಫರ್ ವಲಯದ ಸಭೆಯಲ್ಲಿ ನಿಗದಿಪಡಿಸಲಾಗಿದೆ.

'ಸಂರಕ್ಷಿತ ಪ್ರದೇಶ' ನಿಗದಿ ವಿವರ

(ಮೀಟರ್‌ಗಳಲ್ಲಿ)



	ಕೆರೆಗಳಿಗೆ	ಪ್ರಾಥಮಿಕ ರಾಜಕಾಲುವೆಗೆ	ದ್ವಿತೀಯ ರಾಜಕಾಲುವೆಗೆ	ತೃತೀಯ ರಾಜಕಾಲುವೆಗೆ
ಎನ್‌ಜಿಟಿ ಆದೇಶದಂತೆ (2016)	75	50	35	25
ಸರ್ಕಾರದ ಆದೇಶದಂತೆ (2019)	30	30	15	10
ಮುಖ್ಯ ಕಾರ್ಯದರ್ಶಿ ಸಮಿತಿ ತೀರ್ಮಾನದಂತೆ (2025)		15	10	5

ಕೆರೆ 'ಸಂರಕ್ಷಿತ ಪ್ರದೇಶ' ಮತ್ತಷ್ಟು ಕಡಿತ!

ಕೆರೆಗಳ ಏಕರೂಪದ 30 ಮೀಟರ್ 'ಸಂರಕ್ಷಿತ ಪ್ರದೇಶ'ವನ್ನು, ಕೆರೆಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಬದಲಿಸಲು, ಕೆಟಿಸಿಡಿಎ ಕಾಯ್ದೆಗೆ ತಿದ್ದುಪಡಿ ತರಲು ಸಚಿವ ಸಂಪುಟ ಅನುಮೋದನೆ ನೀಡಿತ್ತು. ಬಫರ್ ವಲಯ ಅನ್ನು ಮತ್ತಷ್ಟು ಕಡಿಮೆ ಮಾಡಬೇಕೆಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿರುವುದರಿಂದ, ಪ್ರಸ್ತಾವವನ್ನು ಮತ್ತೆ ಸಿದ್ಧಪಡಿಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'10 ಗುಂಟೆ ವಿಸ್ತೀರ್ಣದವರೆಗಿನ ಕೆರೆಗಳಿಗೆ ಬಫರ್ ವಲಯ ಇರುವುದಿಲ್ಲ' ಎಂಬುದು ಹೊಸ ತಿದ್ದುಪಡಿಯಾಗಿದೆ.

ರಾಜಕಾಲುವೆಗಳಿಗೆ ಹೊಸ ವ್ಯಾಖ್ಯಾನ

ಪ್ರಾಥಮಿಕ ರಾಜಕಾಲುವೆ: ಕಂದಾಯ ಇಲಾಖೆಗಳಲ್ಲಿ ನೈಸರ್ಗಿಕ ಕಾಲುವೆ/ನಾಲಾಗಳಾಗಿದ್ದು, ಕೆರೆಯಿಂದ ಕೆರೆಗೆ ಅಥವಾ ಕೆರೆಯಿಂದ ನದಿಗೆ ಮಳೆನೀರು ಹರಿಸುವ ಕಾಲುವೆಗಳು.

ದ್ವಿತೀಯ ರಾಜಕಾಲುವೆ: ಕಂದಾಯ ಇಲಾಖೆಗಳಲ್ಲಿ ನೈಸರ್ಗಿಕ ಕಾಲುವೆ/ನಾಲಾಗಳಾಗಿದ್ದು, ಕೆರೆಗಳಿಗೆ ಅಥವಾ ಪ್ರಾಥಮಿಕ ರಾಜಕಾಲುವೆಗೆ ಮಳೆ ನೀರನ್ನು ಹರಿಸುವ ಕಾಲುವೆಗಳು.

ತೃತೀಯ ರಾಜಕಾಲುವೆ: ಕಂದಾಯ ಇಲಾಖೆಗಳಲ್ಲಿ ನೈಸರ್ಗಿಕ ಕಾಲುವೆ/ನಾಲಾಗಳಾಗಿದ್ದು, ದ್ವಿತೀಯ ಹಂತದ ರಾಜಕಾಲುವೆಗೆ ಮಳೆ ನೀರು ಹರಿಸುವ ಕಾಲುವೆಗಳು.

ಚಿಟಿಕೆ ಸುದ್ದಿ

ನದಿಗೆ ಹಾರಿದ್ದ ಮಹಿಳೆ ರಕ್ಷಣೆ

ಹಾವೇರಿ: ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ನೀಟಪಳ್ಳಿ ಬಳಿ ಗುರುವಾರ ತುಂಗಭದ್ರಾ ನದಿ ಮಧ್ಯೆ ನೀರಿನಲ್ಲಿ ಸಿಲುಕಿ ರಕ್ಷಣೆಗೆ ಕೂಗಾಡುತ್ತಿದ್ದ ಮಹಿಳೆಯನ್ನು ಪೊಲೀಸರು–ಅಗ್ನಿಶಾಮದ ದಳದ ಸಿಬ್ಬಂದಿ ರಕ್ಷಿಸಿದ್ದಾರೆ.

'ಹಿರೇಕೆರೂರು ಠಾಣೆ ವ್ಯಾಪ್ತಿಯ ನಿವಾಸಿ ರೂಪಾ, ನದಿಯ ಮಧ್ಯೆ ಸಿಲುಕಿದ್ದರು' ಎಂದು ಪೊಲೀಸರು ತಿಳಿಸಿದರು.

'ರೂಪಾ ಕೆಲವರ ಬಳಿ ಸಾಲ ಮಾಡಿದ್ದು, ಮರಳಿಸುವಂತೆ ಸಾಲಗಾರರು ಬೆನ್ನುಬಿದ್ದಿದ್ದರು. ಬುಧವಾರ ರಾತ್ರಿ 12ರ ಸುಮಾರಿಗೆ ನಂದಿಗುಡಿ ಬಳಿ ಮೇಲ್ಸೇತುವೆಯಿಂದ ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅಲ್ಲಿಂದ 2 ಕಿ.ಮೀ.ವರೆಗೂ ನೀರಿನಲ್ಲಿ ಸಾಗಿ, ಗಿಡಗಂಟಿಗಳಲ್ಲಿ ಸಿಲುಕಿದ್ದರು' ಎಂದು ಹೇಳಿದರು.

ಕೊಕಾಟೆ ಖಾತೆ ಬದಲು

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಗುರುವಾರ ತಡರಾತ್ರಿ ನಡೆದ ಸಂಪುಟ ಪುನಾರಚನೆಯಲ್ಲಿ ಮಾಣಿಕರಾವ್ ಕೊಕಾಟೆ ಅವರಿಂದ ಕೃಷಿ ಖಾತೆಯನ್ನು ಹಿಂಪಡೆದು ಕ್ರೀಡಾ ಮತ್ತು ಯುವ ಕಲ್ಯಾಣ ಖಾತೆ ನೀಡಲಾಗಿದೆ.

ಪ್ರಸ್ತುತ ಕ್ರೀಡಾ ಸಚಿವರಾಗಿದ್ದ ದತ್ತಾತ್ರೇಯ ಭಾರ್ನೆ ಅವರಿಗೆ ಕೃಷಿ ಖಾತೆ ನೀಡಲಾಗಿದೆ ಎಂದು ಸಾಮಾನ್ಯ ಆಡಳಿತ ಇಲಾಖೆ (ಜಿಎಡಿ) ಹೊರಡಿಸಿದ ಅಧಿಸೂಚನೆ ತಿಳಿಸಿದೆ. ಕೊಕಾಟೆ ಅವರು ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ವಕ್ಫ್ ಖಾತೆಗಳ ಉಸ್ತುವಾರಿಯನ್ನೂ ನೋಡಿಕೊಳ್ಳುವರು ಎಂದು ಅಧಿಸೂಚನೆ ಹೇಳಿದೆ.

ವಿಧಾನಸಭಾ ಅಧಿವೇಶನ ನಡೆಯುವಾಗ ಮೊಬೈಲ್‌ನಲ್ಲಿ ರಮ್ಮಿ ಆಡುತ್ತಿದ್ದರು ಎಂಬ ಆರೋಪವನ್ನು ಕೊಕಾಟೆ ಎದುರಿಸುತ್ತಿದ್ದರು. ವಿಪಕ್ಷಗಳು ಅವರ ರಾಜೀನಾಮೆಗೆ ಆಗ್ರಹಿಸಿದ್ದವು.

'ಕಾಂಗ್ರೆಸ್‌ನಿಂದ ಮಾದಿಗರಿಗೆ ಅನ್ಯಾಯ'

ಬೆಂಗಳೂರು: 'ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗದ ವರದಿ ಮೂಲಕ ಒಳ ಮೀಸಲಾತಿ ವಿಚಾರದಲ್ಲಿ ಗೊಂದಲ ಸೃಷ್ಟಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಮಾದಿಗರಿಗೆ ಅನ್ಯಾಯ ಮಾಡುತ್ತಿದೆ' ಎಂದು ಬಿಜೆಪಿಯ ಎ.ನಾರಾಯಣಸ್ವಾಮಿ ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಬಾರಿಯ ಅಧಿವೇಶನ ಮುಗಿಯುವ ಒಳಗೆ ಒಳ ಮೀಸಲಾತಿ ಜಾರಿ ಮಾಡದೇ ಇದ್ದಲ್ಲಿ, ಕಾಂಗ್ರೆಸ್ ಸರ್ಕಾರದ ಮೇಲಿನ ಈ ಅಪನಂಬಿಕೆ ಮತ್ತಷ್ಟು ಗಟ್ಟಿಯಾಗಲಿದೆ' ಎಂದರು. 'ಮಾದಿಗ ಸಮುದಾಯದ ಸಂಘಟನೆಗಳು, ಜನರು, ಉದ್ಯಮಿಗಳು, ವಿದ್ಯಾರ್ಥಿಗಳನ್ನು ಒಳಗೊಂಡು ಸಭೆ ನಡೆಸಲಾಗಿದೆ.

ಆಗುತ್ತಿರುವ ಅನ್ಯಾಯದ ಬಗ್ಗೆ ಚರ್ಚಿಸಲಾಗಿದೆ. ಎಲ್ಲರೂ ಒಳಗೊಂಡು ರಾಜ್ಯ ಸರ್ಕಾರದ ವಿರುದ್ಧ ಹೋರಾಟ ನಡೆಸಲಿದ್ದೇವೆ. ಆಗಸ್ಟ್ 1ರಂದು ಎಲ್ಲ ಜಿಲ್ಲಾಧಿಕಾರಿ ಕಚೇರಿಗಳ ಎದುರು ಪ್ರತಿಭಟನೆ ನಡೆಸುತ್ತೇವೆ' ಎಂದರು.

ಆಸ್ತಿ ದಾಖಲೆ ಕಂಡು ನಿಬ್ಬೆರಗಾದ ಲೋಕಾಯುಕ್ತ ಅಧಿಕಾರಿಗಳು

ಮಾಜಿ ನೌಕರನ ಬಳಿ 24 ಮನೆ!

ಪ್ರಜಾವಾಣಿ ವಾರ್ತೆ

ಕೊಪ್ಪಳ: ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತದಲ್ಲಿ (ಕೆಆರ್‌ಐಡಿಎಲ್) ಹೊರಗುತ್ತಿಗೆ ಆಧಾರದ ಮೇಲೆ ಕಚೇರಿ ಸಹಾಯಕರಾಗಿ ಕೆಲಸ ಮಾಡಿ ಆರು ತಿಂಗಳ ಹಿಂದೆ ವಜಾಗೊಂಡಿದ್ದ ಕಳಕಪ್ಪ ನಿಡಗುಂದಿ ಎಂಬುವರ ಮನೆ, ಕಚೇರಿ ಮೇಲೆ ಗುರುವಾರ ಇಲ್ಲಿನ ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ್ದು 24 ಮನೆ ಮತ್ತು ನಾಲ್ಕು ನಿವೇಶನಗಳ ದಾಖಲೆಗಳು ಸೇರಿದಂತೆ ಅಪಾರ ಪ್ರಮಾಣದ ಆಸ್ತಿ ಪತ್ತೆಯಾಗಿದೆ.

ಕೊಪ್ಪಳ ಲೋಕಾಯುಕ್ತ ಡಿವೈಎಸ್‌ಪಿ ವಸಂತಕುಮಾರ್ ನೇತೃತ್ವದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಸುನೀಲ್ ಮ್ಯಾಗಿನಮನಿ, ಚಂದ್ರಪ್ಪ, ವಿಜಯಕುಮಾರ, ನಾಗರತ್ನ, ಶೈಲಾ ಪಾಟೇಕರ್ ಮತ್ತು ಸಿಬ್ಬಂದಿ ಬೆಳಗಿನ ಜಾವದಿಂದಲೇ ದಾಖಲೆಗಳ ಪರಿಶೀಲಿಸಿದಾಗ ಮನೆ, ನಿವೇಶನಗಳ ಜೊತೆ 40 ಎಕರೆ ಕೃಷಿ ಜಮೀನು, 350 ಗ್ರಾಂ ಚಿನ್ನಾಭರಣ, ಒಂದೂವರೆ ಕೆ.ಜಿ. ಬೆಳ್ಳಿಯ ಆಭರಣಗಳು, ಎರಡು ಬೈಕ್ ಮತ್ತು ಎರಡು ಕಾರುಗಳ ದಾಖಲೆಗಳು ಲಭಿಸಿವೆ.

ಚಿಂಚೋಳಿಕರ್ ಆಪ್ತ: ಇಲ್ಲಿನ ಕೆಆರ್‌ಐಡಿಎಲ್ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿದ್ದ ಝರಣಪ್ಪ ಎಂ. ಚಿಂಚೋಳಿಕರ ಅವರ ಆಪ್ತ ಕಳಕಪ್ಪ 2023-24 ಹಾಗೂ 2024–25ರಲ್ಲಿ ಜಿಲ್ಲೆಯಲ್ಲಿ ಮೂಲಸೌಕರ್ಯ ಕಲ್ಪಿಸುವ 108 ಕಾಮಗಾರಿಗಳಲ್ಲಿ ಕ್ರಿಯಾಯೋಜನೆ ರೂಪಿಸದೇ ಅನುಷ್ಠಾನ ಮಾಡಿದ್ದರು. ಇನ್ನೂ ಕೆಲ ಕೆಲಸಗಳನ್ನು ಮಾಡದೆ ನಕಲಿ ಬಿಲ್ ಸೃಷ್ಟಿಸಿ ಜಿಲ್ಲಾ ಪಂಚಾಯಿತಿ ಸಿಇಒ ಅವರ ಸಹಿಯನ್ನೇ ನಕಲಿ ಮಾಡಿ ₹72 ಕೋಟಿಯಷ್ಟು ಮೊತ್ತವನ್ನು ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದರು.

ಇಲಾಖೆಯ ಅನುಮತಿ ಪಡೆಯದೆ ಕೋಟ್ಯಂತರ ರೂಪಾಯಿ ಮೊತ್ತವನ್ನು ಹಣ ಪಡೆದುಕೊಂಡಿದ್ದ ಬಗ್ಗೆ ಕೊಪ್ಪಳ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕಳೆದ ವರ್ಷ ಚಿಂಚೋಳಕರ್ ಅವರನ್ನು ಸೇವೆಯಿಂದ ವಜಾ ಮಾಡಲಾಗಿತ್ತು.

ಈ ಪ್ರಕರಣದ ಎರಡನೆ ಆರೋಪಿ ಕಳಕಪ್ಪ ಮನೆ ಶೋಧಿಸಿದಾಗ ಅವರ ಪತ್ನಿ ಹೆಸರಿನಲ್ಲಿ ಆರು ಮನೆ, ಎರಡು ನಿವೇಶನ ಲಭಿಸಿವೆ. ಬೇನಾಮಿಯಾಗಿ ಹೆಂಡತಿಯ ತಮ್ಮ ಹಾಗೂ ಇತರರ ಹೆಸರಿನಲ್ಲಿ ಆಸ್ತಿ ನೋಂದಾಯಿಸಿದ್ದಾರೆ. ಚಿಂಚೋಳಿಕರ್ ಅವಧಿಯಲ್ಲಿ ಹಿಂದೆ ನಡೆದ ಆರೋಪವಿರುವ 108 ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲೆಗಳನ್ನೂ ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ.

ವಜಾ ಗೊಂಡಾಗ ₹15 ಸಾವಿರ ವೇತನ

ಭ್ರಷ್ಟಾಚಾರದ ಆರೋಪದ ಕಾರಣಕ್ಕೆ ಹೊರಗುತ್ತಿಗೆ ಕೆಲಸದಿಂದ ಕಳಕಪ್ಪ ವಜಾಗೊಂಡಾಗ ವೇತನ ₹15 ಸಾವಿರ ಮಾತ್ರ ಇತ್ತು.

ಯಲಬುರ್ಗಾ ತಾಲ್ಲೂಕಿನ ಬಂಡಿಹಾಳದ ಕಳಕಪ್ಪ 20 ವರ್ಷಗಳಿಂದ ಹೊರಗುತ್ತಿಗೆ ನೌಕರನಾಗಿ ಕೆಲಸ ಮಾಡಿದ್ದರು. ಈಗ ಅವರ ಬಳಿ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಪತ್ತೆಯಾಗಿದ್ದು ಲೋಕಾಯುಕ್ತ ಅಧಿಕಾರಿಗಳಲ್ಲಿಯೇ ಅಚ್ಚರಿ ಮೂಡಿಸಿದ್ದು, ಶುಕ್ರವಾರವೂ ಶೋಧ ಕಾರ್ಯ ಮುಂದುವರಿಯಲಿದೆ.



ಕಳಕಪ್ಪ ನಿಡಗುಂದಿ

ರಸಗೊಬ್ಬರ ಪೂರೈಕೆ: ನಡ್ಡಾಗೆ ಮನವಿ

ನವದೆಹಲಿ: ಕೇಂದ್ರ ಸರ್ಕಾರವು ಸಕಾಲದಲ್ಲಿ ರಸಗೊಬ್ಬರ ಪೂರೈಸದ ಕಾರಣ ರಾಜ್ಯದಲ್ಲಿ ಭಾರಿ ಸಮಸ್ಯೆಯಾಗಿದ್ದು, ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಸಂಸದರು ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವ ಜೆ.ಪಿ.ನಡ್ಡಾ ಅವರಿಗೆ ಮನವಿ ಸಲ್ಲಿಸಿದರು.

ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ, ಜಿ.ಕುಮಾರ ನಾಯಕ, ಇ. ತುಕಾರಾಮ್ ಹಾಗೂ ಸಾಗರ್ ಖಂಡ್ರೆ ಅವರು ಸಚಿವರನ್ನು ಭೇಟಿ ಮಾಡಿ, 'ಈ ವರ್ಷ ರಾಜ್ಯಕ್ಕೆ ಯೂರಿಯಾ ಪೂರೈಕೆ ಪ್ರಮಾಣ ಶೇ 50ರಷ್ಟು ಕಡಿಮೆ ಆಗಿದೆ' ಎಂದು ಗಮನ ಸೆಳೆದರು. ಕೇಂದ್ರ ಸರ್ಕಾರವು 1.35 ಲಕ್ಷ ಟನ್‌ಗಳಷ್ಟು ರಸಗೊಬ್ಬರ ಪೂರೈಕೆ ಮಾಡಿದರೆ ಈ ಸಮಸ್ಯೆ ಅಲ್ಪ ಮಟ್ಟಿಗೆ ಪರಿಹಾರ ಆಗಬಲ್ಲದು ಎಂದರು.

ನಡ್ಡಾ ಪ್ರತಿಕ್ರಿಯಿಸಿ, 'ಈ ಸಲ ಚೀನಾದಿಂದ ರಸಗೊಬ್ಬರ ಪೂರೈಕೆ ಆಗುತ್ತಿಲ್ಲ. ಬೇರೆ ದೇಶಗಳಿಂದ ತರಿಸಿಕೊಂಡು ಪೂರೈಕೆ ಮಾಡಲಾಗುವುದು. ಕೆಲವೇ ದಿನಗಳಲ್ಲಿ ರಾಜ್ಯಕ್ಕೆ ಅಗತ್ಯ ಇರುವಷ್ಟು ರಸಗೊಬ್ಬರ ಒದಗಿಸಲಾಗುವುದು' ಎಂದು ಭರವಸೆ ನೀಡಿದರು.

ರಸಗೊಬ್ಬರ: ಕ್ರಮಕ್ಕೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸಗೊಬ್ಬರ ಕಾಳಸಂತೆಕೋರರು ತಲೆ ಎತ್ತದಂತೆ ತೀವ್ರ ನಿಗಾ ವಹಿಸಿ, ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸಚಿವರು ಮತ್ತು ಶಾಸಕರ ಜೊತೆ ನಡೆಸುತ್ತಿದ್ದ ಸಭೆಯ ಮಧ್ಯೆ ದೂರವಾಣಿ ಕರೆ ಮಾಡಿ ಮುಖ್ಯಮಂತ್ರಿ ಈ ಸೂಚನೆ ನೀಡಿದ್ದಾರೆ.

'ಕೇಂದ್ರ ಸರ್ಕಾರ ರಾಜ್ಯಕ್ಕೆ ಅಗತ್ಯವಾದ ರಸಗೊಬ್ಬರ ಸರಬರಾಜು ಮಾಡದೆ ಅನ್ಯಾಯ ಎಸಗಿದೆ. ಕೇಂದ್ರದ ಅಸಹಕಾರದ ನಡುವೆಯೂ ರೈತರಿಗೆ ಅನಾನುಕೂಲ ಆಗದಂತೆ ರಾಜ್ಯ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಮಧ್ಯೆ, ರಸಗೊಬ್ಬರಕ್ಕೆ ಕೃತಕ ಅಭಾವ ಸೃಷ್ಟಿಸಿ, ದುರ್ಲಾಭ ಮಾಡಿಕೊಳ್ಳಲು ಕಾಳಸಂತೆಕೋರರು ಯತ್ನಿಸುವ ಸಾಧ್ಯತೆಯಿದೆ. ಈ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು' ಎಂದು ನಿರ್ದೇಶನ ನೀಡಿದ್ದಾರೆ.

'ಜಿಲ್ಲೆ ಮತ್ತು ತಾಲ್ಲೂಕು, ಹೋಬಳಿ ಎಲ್ಲೂ ರಸಗೊಬ್ಬರಕ್ಕೆ ಕೃತಕ ಅಭಾವ ಸೃಷ್ಟಿ ಆಗಬಾರದು. ಈ ರೀತಿ ಅಭಾವ ಸೃಷ್ಟಿಸುತ್ತಿರುವವರ ಮೇಲೆ ಕಣ್ಣಿಡಬೇಕು' ಎಂದೂ ಸೂಚನೆ ನೀಡಿದ್ದಾರೆ.

ಸುದ್ದಿ 2 ನಿ...


ದಲಿತರ ₹39,000 ... ಉದ್ದೇಶಕ್ಕೆ ಬಳಕೆ...

ಬೆಂಗಳೂರು: 'ಪರಿಶಿಷ್ಟ ಜಾತಿಗಳ ಉ... ಬುಡಕಟ್ಟು ಉಪಯೋಜನೆ (ಟಿಎಸ್‌ಪಿ... ಕೋಟಿಗೂ ಹೆಚ್ಚು ಮೊತ್ತವನ್ನು, ಅನ್ಯ ... ತೀರ್ಮಾನವನ್ನು ಸರ್ಕಾರ ಕೈಬಿಡಬೇಕ... ವಿರೋಧ ಪಕ್ಷದ ನಾಯಕ ಛಲವಾದಿ ... ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ... ಜನರ ಆರ್ಥಿಕ, ಶೈಕ್ಷಣಿಕ ಮತ್ತು ಸಾಮ... ಒದಗಿಸುವುದು ಈ ಉಪಯೋಜನೆಗಳ... ಸರ್ಕಾರವು ಕೌಶಲಾಭಿವೃದ್ಧಿ, ಉದ್ಯೋ... ಉದ್ಯಮಶೀಲತೆ ವೃದ್ಧಿ, ಕೃಷಿಗೆ ತಂತ್ರಜ್ಞಾ... ಕಾರ್ಯಕ್ರಮಗಳನ್ನು ಆರಂಭಿಸಬೇಕಿತ್ತು... ವುದರಿಂದ ಈ ಎಲ್ಲ ಕಾರ್ಯಕ್ರಮಗಳು... ವ್ಯಕ್ತಪಡಿಸಿದರು.

'ಪರಿಶಿಷ್ಟ ಸಮುದಾಯಗಳ ಜನರ... ಹಣವನ್ನು ಅನ್ಯ ಉದ್ದೇಶಕ್ಕೆ ಬಳಸುತ್ತಾ... ಅಭಿವೃದ್ಧಿಯಾಗುವುದಾದರೂ ಹೇಗೆ. ... ಮೂಲಕ ಸರ್ಕಾರವು ಅವರ ಅಭಿವೃದ್ಧಿ... ದೂರಿದರು.

'ಎಸ್... ಹಣವ... ವಿರುದ್ಧ... ದ್ದೇನೆ. ... ತೀವ್ರ ... 'ತ... ...



ಪರಶುರಾಮ ಮ... ಪ್ರತಿಷ್ಠಾಪನೆ ಕೊ...

ಕಾರ್ಕಳ (ಉಡುಪಿ): ತಾಲ್ಲೂ... ಥೀಮ್ ಪಾರ್ಕ್‌ನಲ್ಲಿ ಪರಶು... ಪ್ರತಿಷ್ಠಾಪಿಸಬೇಕು ಎಂದು ಕೋರಿ ಕಾ... ಉದಯಕುಮಾರ್ ಶೆಟ್ಟಿ ಅವರ... ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿ...

ಮೂರ್ತಿಯನ್ನು ಹೊಸದಾಗಿ... ಇದಕ್ಕಾಗಿ ಹೊಸ ಟೆಂಡರ್ ಕರೆದು ಶ... ಅರ್ಜಿಯಲ್ಲಿ ಕೋರಿದ್ದಾರೆ.

'ಥೀಮ್ ಪಾರ್ಕ್‌ನಲ್ಲಿ ಕಂಚಿ... ಮತ್ತು ಇತರ ವಸ್ತುಗಳಿಂದ ರೂ... ಎಂದು ಕಾಂಗ್ರೆಸ್ ನಾಯಕರು ದೂ... ಪೊಲೀಸರು ಈಚೆಗೆ ಕೋರ್ಟ್‌ಗೆ... 'ಪ್ರತಿಮೆ ಹಿತ್ತಾಳೆಯದ್ದು' ಎಂದು ಉ...

ಅತ್ಯಾಚಾರ ಯತ್ನ: ವೃದ...

ಪ್ರಜಾವಾಣಿ ವಾರ್ತೆ

ಕವಿತಾಳ (ರಾಯಚೂರು ಜಿಲ್ಲೆ): ಆರು ವರ್ಷದ ಬಾಲಕಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಆರೋಪದಡಿ ಅದೇ ಗ್ರಾಮದ ನಿವಾಸಿ, 65 ವರ್ಷದ ವೃದ್ಧನ ವಿರುದ್ಧ ಕವಿತಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೃದ್ಧನ ಮೊಮ್ಮಗ ಮತ್ತು ಬಾಲಕಿ



'ಮತ ಕಳವು' ವಿರುದ್ಧ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇ... ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯಲಿರುವ ಪ್ರತಿಭಟನೆಯ ಪೂರ್ವಸಿದ್ಧತೆಗಾಗಿ ಕೆಪಿಸಿಸಿ ಕ... ಭವನದಲ್ಲಿ ಗುರುವಾರ ರಾತ್ರಿ ನಡೆದ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾ... ಕೆ.ಸಿ. ವೇಣುಗೋಪಾಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾ... ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು ಭಾಗವಹಿಸಿದ್ದರು

ಪುರುಷನ ಮೃತದೇಹದ ಅವಶೇಷ ಪತ್ತೆ

ಒಂದನೇ ಪುಟದಿಂದ...

ತಲೆಬುರುಡೆಯ ಚೂರುಗಳು, ಮೂಳೆಗಳು ಸ್ಥಳದಲ್ಲಿದ್ದವು. ವಿಧಿವಿಜ್ಞಾನ ತಜ್ಞರ ತಂಡವು ಮೃತದೇಹದ ಅವಶೇಷಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಗ್ರಹಿಸಿದೆ. 'ಅದು ಗಂಡಸಿನ ಮೃತ ದೇಹದ ಅವಶೇಷದಂತಿದೆ' ಎಂದು ಸ್ಥಳದಲ್ಲಿದ್ದ ವಿಧಿ ವಿಜ್ಞಾನ ತಜ್ಞರು ತಿಳಿಸಿದ್ದಾರೆ.

'ಇನ್ನಷ್ಟು ವಿಸ್ತೃತವಾಗಿ ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಲು ಅವುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಿದ್ದೇವೆ' ಎಂದು ಎಸ್‌ಐಟಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಈ ಪ್ರಕರಣದ ಸಾಕ್ಷಿ ದೂರುದಾರ ತೋರಿಸಿದ್ದ 13 ಜಾಗಗಳಲ್ಲಿ ನೇತ್ರಾವತಿ ನದಿ ಪಕ್ಕದ ದಟ್ಟ ಕಾಡಿನ ಒಳಗೆ ತೋರಿಸಿದ್ದ ಐದು ಕಡೆ ಮಂಗಳವಾರ ಮತ್ತು ಬುಧವಾರ ಭೂಮಿ ಅಗೆಯಲಾಗಿತ್ತು. ಅಲ್ಲಿ ಮೃತದೇಹಗಳನ್ನು ಹೂತು ಹಾಕಿದ್ದ ಯಾವುದೇ ಕುರುಹು ಪತ್ತೆಯಾಗಿರಲಿಲ್ಲ.

ಕಾಡಿನೊಳಗೆ ಊಟ: ಮೃತದೇಹಗಳ ಶೋಧಕಾರ್ಯಕ್ಕಾಗಿ ಕಾಡಿನೊಳಗೆ ಹೋದ ಅಧಿಕಾರಿಗಳು ಹಾಗೂ ಕಾರ್ಮಿಕರ ತಂಡಕ್ಕೆ ಮಧ್ಯಾಹ್ನದ ಊಟವನ್ನೂ ಕಾಡಿಗೆ ಒಳಗೆ ತಲುಪಿಸಲಾಯಿತು. ಅಗೆಯಲು ಯಂತ್ರವನ್ನು ಕಾಡಿನೊಳಗೆ ಒಯ್ಯಲಾಯಿತು. ಮೃತದೇಹದ ಅವಶೇಷ ಪತ್ತೆಯಾದ ಜಾಗದಲ್ಲಿ ತಾತ್ಕಾಲಿಕ ಶೆಡ್ ನಿರ್ಮಿಸಲಾಗಿದೆ.

ಮೃತದೇಹ ಕುರುಹು ಸಿಕ್ಕಿದ ಜಾಗದ ಮಹಜರು ಮುಗಿಸಿ ಎಸ್‌ಐಟಿ ತಂಡವು ಕಾಡಿನಿಂದ ಹೊರಗೆ ಬರುವಾಗ ಸಂಜೆ 7.30 ಆಗಿತ್ತು. ಸಾಕ್ಷಿ ದೂರುದಾರ ಈಗಾಗಲೇ ತೋರಿಸಿರುವ ಏಳು ಜಾಗಗಳಲ್ಲಿ ಅಗೆಯುವ ಕಾರ್ಯ ಇನ್ನಷ್ಟೇ ನಡೆಯಬೇಕಿದೆ. ಶುಕ್ರವಾರವೂ ಶೋಧ ಕಾರ್ಯ ಮುಂದುವರಿಯಲಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಮುಂದಿನ ಹಂತದ ತನಿಖೆ- ಸಭೆ: ಕಾಡಿನಲ್ಲಿ ಪತ್ತೆಯಾದ ಮೃತದೇಹ ಯಾರದ್ದು ಎಂಬ ಗುರುತು ಪತ್ತೆಗೆ ವಹಿಸಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಾಂತಿ ಹಾಗೂ ಡಿಐಜಿ ಎಂ.ಎನ್. ಅನುಚೇತ್ ಅವರು ಬೆಳ್ತಂಗಡಿಯ ಎಸ್‌ಐಟಿ ಕಚೇರಿಯಲ್ಲಿ ಅಧಿಕಾರಿಗಳ ಜೊತೆ ಸುದೀರ್ಘ ಸಮಾಲೋಚನೆ ನಡೆಸಿದರು.

ಮುಚ್ಚಿದ ಬಕೆಟ್ ನಲ್ಲಿ ಅವಶೇಷ ರವಾನೆ: ಪತ್ತೆಯಾದ ಮೃತದೇಹದ ಅವಶೇಷಗಳನ್ನು ಬಿಳಿ ಹಾಗೂ ಕೆಂಬಣ್ಣದ ಬಕೆಟ್ ನಲ್ಲಿ ತುಂಬಿ ಸೀಲ್ ಮಾಡಲಾಗಿದೆ. ವಿಧಿ ವಿಜ್ಞಾನ ತಜ್ಞರು ಅದನ್ನು ಒಯ್ದರು.



ಗುರುವಾರ ಪತ್ತೆಯಾದ ಮೃತದೇಹದ ಅವಶೇಷಗಳನ್ನು ವಿಧಿ ವಿಜ್ಞಾನ ತಜ್ಞರು ಬಕೆಟ್‌ನಲ್ಲಿ ಸೀಲ್ ಮಾಡಿ ರವಾನಿಸಿದರು ಚಿತ್ರ: ಫಕ್ರುದ್ದೀನ್ ಎಚ್

'ಪಾನ್ ಕಾರ್ಡ್ ಮೃತ ವ್ಯಕ್ತಿಯದು'

ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಬಳಿ ನೆಲ ಅಗೆಯುವಾಗ ಮಂಗಳವಾರ ಸಿಕ್ಕಿದ್ದ ಪಾನ್ ಕಾರ್ಡ್ 2025ರ ಮಾರ್ಚ್‌ನಲ್ಲಿ ಮೃತಪಟ್ಟಿರುವ ಗಂಡಸಿನದು. ಆ ವ್ಯಕ್ತಿ ಜಾಂಡಿಸ್‌ನಿಂದ ಸ್ವಗ್ರಾಮದಲ್ಲಿ ಮೃತಪಟ್ಟಿದ್ದರು ಎಂದು ಎಸ್‌ಐಟಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಆ ಸ್ಥಳದಲ್ಲಿ ಮಹಿಳೆಯ ಹೆಸರಿನಲ್ಲಿದ್ದ ರೂಪೇ ಡೆಬಿಟ್ ಕಾರ್ಡ್ ಸಿಕ್ಕಿತ್ತು. ಅದು ಆ ವ್ಯಕ್ತಿಯ ತಾಯಿಯದು. ಅವರು ಆರೋಗ್ಯವಾಗಿದ್ದಾರೆ. ಪೊಲೀಸ್ ಅಧಿಕಾರಿಗಳು ಮೃತ ವ್ಯಕ್ತಿಯ ತಂದೆ ತಾಯಿಯನ್ನು ಖುದ್ದಾಗಿ ಸಂಪರ್ಕಿಸಿ ಈ ಮಾಹಿತಿಯನ್ನು ಖಚಿತಪಡಿಸಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

'50 ವರ್ಷಗಳ ಬಳಿಕವೂ ಡಿಎನ್‌ಎ ಪರೀಕ್ಷೆ ಸಾಧ್ಯ'

ಬೆಂಗಳೂರು: 'ಡಿಎನ್‌ಎ ಪರೀಕ್ಷೆಯ ಫಲಿತಾಂಶ ಅತ್ಯಂತ ನಿಖರವಾಗಿರುತ್ತದೆ. 10 ಲಕ್ಷ ಜನರಲ್ಲಿ ಕೇವಲ ಒಬ್ಬ ವ್ಯಕ್ತಿಯ ಫಲಿತಾಂಶ ಮಾತ್ರವೇ ತಪ್ಪು ಬರಬಹುದು' ಎಂದು ಹೈಕೋರ್ಟ್‌ನ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು ಅಭಿಪ್ರಾಯಪಡುತ್ತಾರೆ. ಧರ್ಮಸ್ಥಳ ಗ್ರಾಮದ ನೇತ್ರಾವತಿ ನದಿ ದಡದ ಕಾಡಿನಲ್ಲಿ ಗುರುವಾರ ಪತ್ತೆಯಾಗಿರುವ ಮೂಳೆಗಳ ಮರಣೋತ್ತರ ಪರೀಕ್ಷೆಯ ನಂತರದಲ್ಲಿ ನಡೆಯುವ ಕಾನೂನು ಪ್ರಕ್ರಿಯೆಯ ಕುರಿತ ವಿವರ ನೀಡಿರುವ ಅವರು, 'ಡಿಎನ್‌ಎ ಬಹುಮುಖ್ಯ ಪಾತ್ರ ವಹಿಸಲಿದೆ' ಎಂದಿದ್ದಾರೆ.

'ಸಾವಿನ ನಿಖರ ಕಾರಣ ಪತ್ತೆಹಚ್ಚುವ ವಿವಿಧ ಪರೀಕ್ಷೆಗಳು ನಡೆಯುತ್ತವೆ. ಅವುಗಳಲ್ಲಿ ಬಹುಮುಖ್ಯವಾಗಿ ಮೂಳೆಗಳಲ್ಲಿನ ಮೃದುವಾದ ಅಸ್ಥಿ ಮಜ್ಜೆಯನ್ನು (ಬೋನ್ ಮ್ಯಾರೊ) ತೆಗೆದುಕೊಂಡು ಡಿಎನ್‌ಎ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಮೃತರ ಪೋಷಕರು, ಸಂಬಂಧಿಗಳ ಜೊತೆ ಹೋಲಿಕೆ ಮಾಡಲಾಗುತ್ತದೆ. ವಿಶೇಷ ಎಂದರೆ ಸಾವಿನ 50 ವರ್ಷಗಳ ನಂತರವೂ ಮೂಳೆಗಳಲ್ಲಿನ ಮೃದು ಕೋಶವನ್ನು ಪಡೆಯಲು ಸಾಧ್ಯ' ಎಂದು ಅವರು ಹೇಳುತ್ತಾರೆ.

ಶಾಸಕ ಚವಾಣ್ ಪುತ್ರನ ಜಾಮೀನು ಅರ್ಜಿ ತಿರಸ್ಕರಿಸಿದ ನ್ಯಾಯಾಲಯ

ಪ್ರಜಾವಾಣಿ ವಾರ್ತೆ

ಬೀದರ್: ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದಲ್ಲಿ, ಔರಾದ್ ಕ್ಷೇತ್ರದ ಶಾಸಕ ಪ್ರಭು ಚವಾಣ್ ಅವರ ಮಗ ಪ್ರತೀಕ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸ್ಥಳೀಯ ಕೋರ್ಟ್ ತಿರಸ್ಕರಿಸಿದೆ.

'ಬೀದರ್‌ನ ಹೆಚ್ಚುವರಿ ಜಿಲ್ಲಾ ಸೆಷನ್ಸ್ ಕೋರ್ಟ್‌ನ ನ್ಯಾಯಾಧೀಶರಾದ ಬಿ.ಕೆ. ಕೋಮಲಾ ಅವರು ಜು. 29ರಂದು ವಾದ–ಪ್ರತಿವಾದ ಆಲಿಸಿ ಆದೇಶ ಕಾಯ್ದಿರಿಸಿದ್ದರು. ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸಿ ಗುರುವಾರ ಆದೇಶಿಸಿದರು' ಎಂದು ಸಂತ್ರಸ್ತೆ ಪರ ವಕೀಲ, ಸರ್ಕಾರಿ ಅಭಿಯೋಜಕ ಕೇಶವ ಶ್ರೀಮಾಳೆ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಮದುವೆ ಆಗುವುದಾಗಿ ನಂಬಿಸಿ ಪ್ರತೀಕ್ ಲೈಂಗಿಕ ದೌರ್ಜನ್ಯ ಎಸಗಿ ವಂಚಿಸಿದ್ದಾರೆ' ಎಂದು ಸಂತ್ರಸ್ತೆ ಮಹಿಳಾ ಆಯೋಗ ಹಾಗೂ ಬೀದರ್ ಮಹಿಳಾ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು.

ಪ್ರತೀಕ್ ಚವಾಣ್ ಸದ್ಯ ತಲೆಮರೆಸಿಕೊಂಡಿದ್ದು, ಪೊಲೀಸರು ಅವರ ಪತ್ತೆಗೆ ಎರಡು ತಂಡ ರಚಿಸಿದ್ದಾರೆ.

ಗಂಧದ ಮರ ಕಳವು ಪ್ರಕರಣ: ವಿಶೇಷ ಕಾನೂನು ಅನ್ವಯ ಕ್ರಮ ಕೈಗೊಳ್ಳಲು ಸು...

ದೂರು ದಾಖಲಿಸಿಕೊಳ್ಳಲು ಡಿಜಿಪಿ ಸು...

• ಗಾಣಧಾಳು ಶ್ರೀಕಂಠ

ಬೆಂಗಳೂರು: ಗಂಧದ ಮರ ಕಳವು ಪ್ರಕರಣಗಳಿಗೆ ಸಂಬಂಧಿಸಿದ ದೂರುಗಳನ್ನು ಪೊಲೀಸ್ ಠಾಣಾಧಿಕಾರಿಗಳು ಕಡ್ಡಾಯವಾಗಿ ದಾಖಲಿಸಿಕೊಳ್ಳಬೇಕು ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕರು (ಡಿಜಿಪಿ) ಸುತ್ತೋಲೆ ಹೊರಡಿಸಿದ್ದಾರೆ.

'ಖಾಸಗಿ ಜಮೀನು ಅಥವಾ ಅರಣ್ಯ ಪ್ರದೇಶದಲ್ಲಿ ಬೆಳೆದ ಗಂಧದ ಮರಗಳನ್ನು ಅಕ್ರಮವಾಗಿ ಕತ್ತರಿಸುವುದು, ಕಳವು ಮಾಡಿ, ಸಾಗಿಸುವುದು ಅಥವಾ ಸಂಗ್ರಹಿಸಿಟ್ಟುಕೊಂಡ ಬಗ್ಗೆ ಗಂಧ ಮರದ ಬೆಳೆಗಾರರಾಗಲಿ ಅಥವಾ ಅರಣ್ಯ ಅಧಿಕಾರಿಗಳಾಗಲಿ ನೀಡಿದ ದೂರನ್ನು ಠಾಣಾಧಿಕಾರಿಗಳು ಕಡ್ಡಾಯವಾಗಿ ಸ್ವೀಕರಿಸಬೇಕು' ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

'ಭಾರತೀಯ ನ್ಯಾಯ ಸಂಹಿತೆಯ ಕಲಂ 303(2) ಹಾಗೂ ಕರ್ನಾಟಕ ಅರಣ್ಯ ಕಾಯ್ದೆ ಕಲಂ 86ರ ಅಡಿಯಲ್ಲಿ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 173ರ ಅನುಸಾರ ದೂರು ದಾಖಲಿಸಿಕೊಳ್ಳುವುದು ಕಡ್ಡಾಯ' ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ. ದೂರು ಸ್ವೀಕರಿಸಿ, ತನಿಖೆ ನಡೆಸಿ, ಆರೋಪಿಗಳನ್ನು ಪತ್ತೆ ಹಚ್ಚಿ, ಕದ್ದ ಗಂಧವನ್ನು ವಶಪಡಿಸಿಕೊಳ್ಳಬೇಕು. ಅದಕ್ಕೆ ಅನುಗುಣವಾಗಿ ಕರ್ನಾಟಕ ಅರಣ್ಯ ಅಧಿನಿಯಮ ಕಲಂ 87ರ ಅನ್ವಯ ತನಿಖೆ ಮುಂದುವರಿಸಿ ನ್ಯಾಯಾಲಯಕ್ಕೆ ತನಿಖಾ ವರದಿ ಸಲ್ಲಿಸುವಂತೆ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

'ಗಂಧದ ಮರ ಕಳವು ಪ್ರಕರಣಗಳಲ್ಲಿ ಸಂಘಟಿತ ಗುಂಪು ಕಾರ್ಯನಿರ್ವಹಿಸುತ್ತಿದ್ದರೆ, ತನಿಖಾಧಿಕಾರಿಗಳು ಆ ಗುಂಪಿನ ಮತ್ತು ಸದಸ್ಯರ ಅಪರಾಧಿಕ ಹಿನ್ನೆಲೆ ಮತ್ತು ಪ್ರಕರಣಗಳ ಮಾಹಿತಿ ಸಂಗ್ರಹಿಸಿ ಅವರ ವಿರುದ್ಧ ವಿಶೇಷ ಕಾನೂನುಗಳನ್ನು ಅನ್ವಯಿಸುವ ಕ್ರಮ ಕೈಗೊಳ್ಳಬೇಕು' ಎಂದೂ ತಿಳಿಸಲಾಗಿದೆ.

ಸುತ್ತೋಲೆಗೂ ಮುನ್ನ: ರಾಜ್ಯದಲ್ಲಿ ಒಂದಲ್ಲ ಒಂದು ಕಡೆ ಗಂಧದ ಮರಗಳು ಕಳವಾಗುತ್ತಿರುವ ಘಟನೆಗಳು ನಡೆಯುತ್ತಿವೆ. ಅದರಲ್ಲೂ ಕೃಷಿ ಜಮೀನಿನಲ್ಲಿ ಬೆಳೆಸಿದ ಮರಗಳೇ ಹೆಚ್ಚು ಕಳವಾಗುತ್ತಿವೆ. ಗಂಧದ ಮರ ಕಳುವಾದಾಗ ಬೆಳೆಗಾರರು ದೂರು ನೀಡಲು ಪೊಲೀಸ್ ಠಾಣೆಗೆ ಹೋದರೆ ಪೊಲೀಸರು 'ಇದು ಅರಣ್ಯ ಇಲಾಖೆಗೆ ಸೇರುತ್ತದೆ, ಅಲ್ಲಿಗೆ ಹೋಗಿ' ಎನ್ನುತ್ತಿದ್ದರು. ಅರಣ್ಯ ಇಲಾಖೆಗೆ ಹೋದರೆ, 'ನಮಗೆ ದೂರು ದಾಖಲಿಸಿಕೊಳ್ಳುವ ಅಧಿಕಾರವಿಲ್ಲ, ಸಮೀಪದ ಪೊಲೀಸ್ ಠಾಣೆಗೆ ದೂರು ನೀಡಿ' ಎಂದು ಕಳುಹಿಸುತ್ತಿದ್ದರು.

ಕೆಲವು ಪ್ರಕರಣಗಳಲ್ಲಂತೂ, ರೈತರು ದೂರು ಕೊಟ್ಟು ಮೂರು ತಿಂಗಳಾದರೂ ಪೊಲೀಸರು ದೂರು ದಾಖಲಿಸಿಕೊಂಡಿರಲಿಲ್ಲ. ಕೊನೆಗೆ ರೈತರು, ಸಂಘಟನೆಗಳ ನೆರವಿನಿಂದ ಉನ್ನತ ಪೊಲೀಸ್ ಅಧಿಕಾರಿಗಳು ಅಥವಾ ಸಚಿವರ ಮೂಲಕ ಹೇಳಿಸಿದ ಮೇಲೆ ದೂರು ಸ್ವೀಕರಿಸಿದ್ದಾರೆ.

ಸರ್ಕಾರದ ಗಮನಕ್ಕೆ: ಶ್ರೀಗಂಧ ಬೆಳೆಗಾರರಿಗೆ ದೂರು ನೀಡಲು ಉಂಟಾಗುತ್ತಿರುವ ಸಮಸ್ಯೆಯನ್ನು ಗಮನಿಸಿದ ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘದ (ಕೆಎಸ್‌ಎಸ್‌ಎಫ್‌ಜಿಎ) ಪದಾಧಿಕಾರಿಗಳು ಈ ವಿಷಯವನ್ನು

ಮುಖ್ಯಾಂಶಗಳು

- ಗಂಧದ ಬೆಳೆಗಾರರ ಅಲೆದಾಟಕ್ಕೆ ಪರಿಹಾರ
- ಕೆಎಸ್‌ಎಸ್‌ಎಫ್‌ಜಿಎ ಸಂಘದ ಸತತ ಪ್ರಯತ್ನ
- ಡಿಜಿಪಿ ಸುತ್ತೋಲೆ ನಂತರ ದೂರು ದಾಖಲು

'ಸುತ್ತೋಲೆ ನೋಡಿ ದೂರು ಸ್ವೀಕಾರ'

'ನಮ್ಮ ಜಮೀನಿನಲ್ಲಿ ಇತ್ತೀಚೆಗೆ ನಾಲ್ಕು ಗಂಧದ ಮರಗಳ ಕಳ್ಳತನವಾಗಿತ್ತು. ಘಟನೆ ನಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು. ಎರಡು ದಿನಗಳ ನಂತರ ಠಾಣೆಗೆ ದೂರು ನೀಡಿದೆ. ಪೊಲೀಸರು, ಇದು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುತ್ತದೆ ಎಂದರು. ಡಿಜಿಪಿಯವರ ಸುತ್ತೋಲೆ ತೋರಿಸಿದ ನಂತರ ದೂರು ದಾಖಲಿಸಿಕೊಂಡರು' ಎಂದು ಬಾಗಲಕೋಟೆ ಜಿಲ್ಲೆಯ ತುಳಸಿಗೇರಿಯ ಶ್ರೀಗಂಧ ಬೆಳೆಗಾರ ಬಾಲಚಂದ್ರ ರೂಗಿ ಅವರು ಸುತ್ತೋಲೆ ಆಧರಿಸಿ ದೂರು ದಾಖಲಿಸಿದ ಪ್ರಕ್ರಿಯೆಯನ್ನು 'ಪ್ರಜಾವಾಣಿ'ಗೆ ತಿಳಿಸಿದರು.

ನೀಟ್: ತಾಯಿ–ಮಗಳು ಉತ್ತೀರ್ಣ

ವಿರುಧುನಗರ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಪಡೆದ ತಾಯಿ



ಚೆನ್ನೈ (ಪಿಟಿಐ): ತಮಿಳುನಾಡಿನ ಮಹಿಳೆಯೊಬ್ಬರು ತಮ್ಮ 49ನೇ ವಯಸ್ಸಿನಲ್ಲಿ ಮಗಳ ಜೊತೆಗೆ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಬರೆದು ಉತ್ತೀರ್ಣರಾಗಿದ್ದಾರೆ.

ಅಮುದವಲ್ಲಿ ಮಣಿವಣ್ಣನ್, 147 ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವುದಲ್ಲದೇ ವಿರುಧುನಗರ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ (ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳ ವಿಭಾಗದಲ್ಲಿ) ಎಂಬಿಬಿಎಸ್ ಸೀಟು ಪಡೆದು ಕೊಂಡಿದ್ದಾರೆ. ಅವರ ಪುತ್ರಿ ಎಂ. ಸಂಯುಕ್ತಾ (ಸಿಬಿಎಸ್ಇ ವಿದ್ಯಾರ್ಥಿನಿ) 450 ಅಂಕಗಳನ್ನು ಗಳಿಸಿದ್ದಾರೆ.

'ಮಗಳ ಪುಸ್ತಕವನ್ನು ಎರವಲು ಪಡೆದು ನೀಟ್ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೆ. ನನ್ನ ಶಾಲಾ ದಿನಗಳಲ್ಲಿ ಇದ್ದ ಪಠ್ಯ-ಕ್ರಮಕ್ಕೂ ಈಗಿನ ಪಠ್ಯಕ್ರಮಕ್ಕೂ ಬಹಳ ವ್ಯತ್ಯಾಸವಿದೆ. ಈಗಿನ ಪಠ್ಯ ಕಠಿಣವಾಗಿದೆ. ಆದರೂ ಓದಲೇಬೇಕೆಂಬ ಹಟ ತೊಟ್ಟೆ. ಇದರಿಂದಾಗಿ ಪರೀಕ್ಷೆಯಲ್ಲಿ ಉತ್ತೀರ್ಣಳಾಗಲು ಸಾಧ್ಯವಾಯಿತು' ಎಂದು ಎಂದು ಅಮುದವಲ್ಲಿ ತಿಳಿಸಿದ್ದಾರೆ.

'ನನ್ನ ಪತಿ ನನಗೆ ಬೆಂಬಲ ನೀಡಿ, ನೀಟ್ ಪರೀಕ್ಷೆ ಬರೆಯಲು ಪ್ರೋತ್ಸಾಹ ನೀಡಿದ್ದರು. ಮಗಳು ಎಸ್‌ಸಿ ಕೋಟಾದಲ್ಲಿ ಪ್ರಯತ್ನಿಸಿದ್ದಿದ್ದ-ರೆ, ವಿರುಧುನಗರ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿಯೇ ಅವಳಿಗೂ ಪ್ರವೇಶ ದೊರೆಯುತ್ತಿತ್ತು' ಎಂದು ಹೇಳಿದ್ದಾರೆ.

'ನಾನು ಓದಿರುವುದನ್ನು ಬೇರೆಯವರಿಗೆ ಹೇಳಿದಾಗ ನನಗೆ ನೆನಪಿಟ್ಟುಕೊಳ್ಳುವುದು ಸುಲಭವಾಗುತ್ತಿತ್ತು. ವಕೀಲರಾದ ತಂದೆಗೆ ವೈದ್ಯಕೀಯ ಕ್ಷೇತ್ರದಲ್ಲಿ ಆಸಕ್ತಿ ಇರಲಿಲ್ಲ. ವೈದ್ಯಕೀಯ ವೃತ್ತಿಯ ಹಿನ್ನೆಲೆ ಹೊಂದಿದ್ದ ತಾಯಿಗೆ ಹೇಳುತ್ತಿದ್ದೆ. ತಾಯಿಯೊಂದಿಗೆ ಒಂದೇ ಕಾಲೇಜಿನಲ್ಲಿ ಓದಲು ನನಗೆ ಇಷ್ಟವಿಲ್ಲ. ಹೀಗಾಗಿ ಸಾಮಾನ್ಯ ಕೋಟಾದಲ್ಲಿ ಸೀಟು ಪಡೆಯುವ ಯತ್ನ ನಡೆಸಿರುವೆ. ರಾಜ್ಯದ ಹೊರಗೆ ಅಧ್ಯಯನ ಮಾಡುವ ಆಸೆಯಿದೆ' ಎಂದು ಸಂಯುಕ್ತಾ ತಿಳಿಸಿದ್ದಾರೆ.

30 ವರ್ಷಗಳ ಹಿಂದಿನ ಕನಸು

30 ವರ್ಷಗಳ ಹಿಂದೆ ಎಂಬಿಬಿಎಸ್ ಮಾಡುವ ಆಸೆ ಹೊಂದಿದ್ದೆ. ಆದರೆ ಅನಿವಾರ್ಯ ಕಾರಣಗಳಿಂದ ಅದು ಸಾಧ್ಯವಾಗಿರಲಿಲ್ಲ. ಬದಲಿಗೆ ಫಿಸಿಯೊಥೆರಪಿ ಅಧ್ಯಯನ ಮಾಡಿದ್ದೆ ಎಂದು ಅಮುದವಲ್ಲಿ ಹೇಳಿದ್ದಾರೆ. ಇದೀಗ ಮಗಳೊಂದಿಗೆ ನೀಟ್ ಪರೀಕ್ಷೆ ಬರೆಯುವ ಮೂಲಕ ಕನಸು ನನಸಾಗುತ್ತಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದ್ದಾರೆ.

ಮಗಳು ನೀಟ್ ಪರೀಕ್ಷೆಗೆ ತಯಾರಿ ನಡೆಸುವುದನ್ನು ನೋಡಿ ಸ್ಫೂರ್ತಿ ಪಡೆದು, ನಾನೂ ಪರೀಕ್ಷೆ ಬರೆಯಬೇಕೆಂಬ ಆಸೆ ಮರುಕಳಿಸಿತು

ಅಮುದವಲ್ಲಿ ಮಣಿವಣ್ಣನ್, 'ನೀಟ್'ನಲ್ಲಿ ಉತ್ತೀರ್ಣರಾದ ಮಹಿಳೆ

'ರೋಹಿಂಗ್ಯಾಗಳು ಅಕ್ರಮ ನುಸುಳುಕೋರರೇ?'

ನವದೆಹಲಿ (ಪಿಟಿಐ): ರೋಹಿಂಗ್ಯಾ ಪ್ರಕರಣಗಳಲ್ಲಿ ಅವರು ನಿರಾಶ್ರಿತರೇ ಅಥವಾ ಅಕ್ರಮವಾಗಿ ದೇಶದೊಳಗೆ ಪ್ರವೇಶಿಸಿದವರೇ ಎಂದು ಮೊದಲು ನಿರ್ಧರಿಸಬೇಕಿದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿತು.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ದೀಪಂಕರ್ ದತ್ತಾ ಮತ್ತು ಎನ್.ಕೋಟೀಶ್ವರ ಸಿಂಗ್ ಅವರ ನೇತೃತ್ವದ ನ್ಯಾಯಪೀಠವು, ಈ ವಿಚಾರವು ನಿರ್ಧಾರವಾದರೆ, ಉಳಿದ ವಿಚಾರಗಳನ್ನು ಸುಲಭವಾಗಿ ಪರಿಹರಿಸಬಹುದು ಎಂದು ಹೇಳಿತು.

ದೇಶದಲ್ಲಿನ ರೋಹಿಂಗ್ಯಾಗಳ ಬಗ್ಗೆ ಕಳವಳ ವ್ಯಕ್ತಪಡಿಸಿ ಸಲ್ಲಿಕೆಯಾದ ಅರ್ಜಿಗಳನ್ನು ನ್ಯಾಯಾಲಯವು ವಿಚಾರಣೆ ನಡೆಸಿತು.

'ರೋಹಿಂಗ್ಯಾಗಳನ್ನು ನಿರಾಶ್ರಿತರು ಎಂದು ಘೋಷಿಸುವ ಹಕ್ಕು ಇದೆಯೇ? ಇರುವುದೇ ಆದಲ್ಲಿ ಅವರಿಗೆ ಲಭ್ಯವಿರುವ ಸೌಲಭ್ಯಗಳು, ಹಕ್ಕುಗಳು ಯಾವುದು' ಎಂದು ನ್ಯಾಯಪೀಠ ಪ್ರಶ್ನಿಸಿತು.

ರೋಹಿಂಗ್ಯಾಗಳು ಅಕ್ರಮವಾಗಿ ಪ್ರವೇಶಿಸಿದ್ದವರಾಗಿದ್ದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅವರ ಗಡೀಪಾರಿಗೆ ಕ್ರಮ ಕೈಗೊಳ್ಳುವುದು ಸಮರ್ಥನೀಯವೇ ಎಂದು ನ್ಯಾಯಾಲಯ ಕೇಳಿತು.

ರೋಹಿಂಗ್ಯಾಗಳು ಅಕ್ರಮ ನುಸುಳುಕೋರರಾಗಿದ್ದರೆ ಅವರನ್ನು ಅನಿರ್ದಿಷ್ಟಾವಧಿವರೆಗೆ ಬಂಧಿಸಬಹುದೇ ಅಥವಾ ಜಾಮೀನು ಮೂಲಕ ಬಿಡುಗಡೆ ಮಾಡಬಹುದೇ ಎಂದೂ ಪ್ರಶ್ನಿಸಿತು.

ಕಿಸಾನ್ ಸಂಪದಕ್ಕೆ ₹1,920 ಕೋಟಿ

ಹೆಚ್ಚುವರಿ ಮೊತ್ತ ವ್ಯಯಿಸಲು ಕೇಂದ್ರ ಸಂಪುಟ ಅಸ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಆಹಾರ ಸಂಸ್ಕರಣಾ ವಲಯವನ್ನು ಉತ್ತೇಜಿಸಲು ಪ್ರಧಾನಮಂತ್ರಿ ಕಿಸಾನ್ ಸಂಪದ ಯೋಜನೆಗೆ (ಪಿಎಂಕೆಎಸ್‌ವೈ) 15ನೇ ಹಣಕಾಸು ಆಯೋಗದಡಿ ₹1,920 ಕೋಟಿ ಹೆಚ್ಚುವರಿ ಮೊತ್ತ ಸೇರಿದಂತೆ ₹6,520 ಕೋಟಿ ವ್ಯಯ ಮಾಡಲು ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ.

ಈ ಹಣಕಾಸು ವರ್ಷದಲ್ಲಿ ನೀಡಲಾಗುವ ಹೆಚ್ಚುವರಿ ಹಣವನ್ನು 50 ಬಹು-ಉತ್ಪನ್ನ ಆಹಾರ ಉತ್ತೇಜನ ಘಟಕಗಳು ಮತ್ತು 100 ಆಹಾರ ಪರೀಕ್ಷಾ ಪ್ರಯೋಗಾಲಯಗಳಿಗೆ ಬಳಸಿಕೊಳ್ಳಲಾಗುವುದು ಎಂದು ಕೇಂದ್ರ ವಾರ್ತಾ ಹಾಗೂ ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

2017ರಲ್ಲಿ ಪ್ರಾರಂಭಿಸಲಾದ ಈ ಯೋಜನೆಯನ್ನು 2025-26ರ ಆರ್ಥಿಕ ವರ್ಷದ ಅಂತ್ಯದವರೆಗೆ ವಿಸ್ತರಿಸಲಾಗಿದೆ. ಆಹಾರ ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆಯಿಂದ ಆಹಾರ ಮಾದರಿಗಳ ಪರೀಕ್ಷೆ ಸುಲಲಿತವಾಗಲಿದೆ ಎಂದರು.

ಎನ್‌ಸಿಡಿಸಿಗೆ ₹2 ಸಾವಿರ ಕೋಟಿ: ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮಕ್ಕೆ (ಎನ್‌ಸಿಡಿಸಿ) ನಾಲ್ಕು ವರ್ಷಗಳ ಕಾಲ ₹2,000 ಕೋಟಿ ಅನುದಾನ ನೀಡಲು ಸಂಪುಟ ಅನುಮೋದನೆ ನೀಡಿದೆ. ಈ ಹಣಕಾಸಿನ ನೆರವಿನೊಂದಿಗೆ, ನಿಗಮವು ಮತ್ತಷ್ಟು ಸಾಲ ನೀಡಲು ಹೆಚ್ಚುವರಿಯಾಗಿ ₹20,000 ಕೋಟಿ ಸಂಗ್ರಹಿಸಲು ಸಾಧ್ಯವಾಗುತ್ತದೆ ಎಂದು ಸಚಿವರು ಹೇಳಿದರು.

ಈ ತೀರ್ಮಾನದಿಂದ ಡೇರಿ, ಜಾನುವಾರು, ಮೀನುಗಾರಿಕೆ, ಸಕ್ಕರೆ, ಜವಳಿ, ಆಹಾರ ಸಂಸ್ಕರಣೆ, ಸಂಗ್ರಹಣೆ ಮತ್ತು ಶೀತಲೀಕರಣದಂತಹ ವಿವಿಧ ವಲಯಗಳ 13,288 ಸಹಕಾರ ಸಂಘಗಳ 2.9 ಕೋಟಿ ಸದಸ್ಯರಿಗೆ ಅನುಕೂಲವಾಗುವ ಸಾಧ್ಯತೆ ಇದೆ.

'ಕ್ರೈಸ್ತ ಸನ್ಯಾಸಿನಿಯರ ಬಿಡುಗಡೆಗೆ ಸಚಿವ ಅಮಿತ್ ಶಾ ಭರವಸೆ'

ತಿರುವನಂತಪುರ (ಪಿಟಿಐ): 'ಛತ್ತೀಸಗಢದಲ್ಲಿ ಬಂಧನಕ್ಕೀಡಾಗಿರುವ ಕ್ರೈಸ್ತ ಸನ್ಯಾಸಿನಿಯರನ್ನು ಬಿಡುಗಡೆಗೊಳಿಸಲು ಸೂಕ್ತ ಕ್ರಮಕೈಗೊಳ್ಳುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ' ಎಂದು ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಸಂಸದ ಎನ್.ಕೆ ಪ್ರೇಮಚಂದ್ರನ್ ಗುರುವಾರ ಹೇಳಿದ್ದಾರೆ.

ಮಾನವ ಕಳ್ಳಸಾಗಣೆ, ಬಲವಂತದ ಮತಾಂತರದ ಆರೋಪದಲ್ಲಿ ಬಂಧನಕ್ಕೀಡಾಗಿರುವ ಇಬ್ಬರು ಸನ್ಯಾಸಿನಿಯರ ವಿಚಾರ ಕುರಿತಂತೆ ಚರ್ಚಿಸಲು ಕೇರಳದ ಸಂಸದರ ನಿಯೋಗವು ನವದೆಹಲಿಯಲ್ಲಿ ಅಮಿತ್ ಶಾ ಅವರನ್ನು ಭೇಟಿಯಾಗಿತ್ತು. ಆ ಬಳಿಕ ಮಾಧ್ಯಮಗಳ ಎದುರು ಪ್ರೇಮಚಂದ್ರನ್ ಮೇಲ್ಕಂಡ ಹೇಳಿಕೆ ನೀಡಿದರು.

ಸುಳ್ಳು ಹೇಳಿಕೆ ನೀಡುವಂತೆ ಬಜರಂಗದಳದ ಒತ್ತಾಯ: ಸಂತ್ರಸ್ತೆ

ನಾರಾಯಣಪುರ (ಪಿಟಿಐ): ಕ್ರೈಸ್ತ ಸನ್ಯಾಸಿನಿಯರು ಬಂಧನಕ್ಕೀಡಾಗಲು ಕಾರಣವಾದ ಮತಾಂತರ ಪ್ರಕರಣದ ಸಂತ್ರಸ್ತೆಯು ತಾನು ನೀಡಿದ ಹೇಳಿಕೆ ತನ್ನದಲ್ಲ, ಆ ಸುಳ್ಳು ಹೇಳಿಕೆ ನೀಡುವಂತೆ ಬಜರಂಗದಳದ ಕಾರ್ಯಕರ್ತರು ಒತ್ತಾಯಿಸಿ ಹಲ್ಲೆ ನಡೆಸಿದ್ದರು ಎಂದು ಹೇಳಿಕೆ ನೀಡಿದ್ದಾರೆ. ಸಂತ್ರಸ್ತೆಯನ್ನು ಕಮಲೇಶ್ವರಿ ಪ್ರಧಾನ್ (21) ಎಂದು ಗುರುತಿಸಲಾಗಿದೆ. 'ನಾನು ನಾಲ್ಕು ವರ್ಷಗಳಿಂದ ಕ್ರೈಸ್ತ ಧರ್ಮವನ್ನು ಅನುಸರಿಸುತ್ತಿದ್ದೇನೆ. ನನ್ನ ಕುಟುಂಬದ ಸಹಮತದೊಂದಿಗೆ ಕ್ರೈಸ್ತ ಸನ್ಯಾಸಿನಿಯರ ಜತೆಗೆ ತೆರಳುತ್ತಿದ್ದೆ. ಆದರೆ, ಬಜರಂಗದಳದ ಕಾರ್ಯಕರ್ತರು ನನ್ನನ್ನು ಬೆದರಿಸಿ, ಬಲವಂತವಾಗಿ ಮತಾಂತರ ಮಾಡುತ್ತಿದ್ದಾರೆ ಎನ್ನುವಂತಹ ಹೇಳಿಕೆ ಕೊಡಿಸಿದರು. ಪೊಲೀಸರು ಕೂಡ ನನ್ನ ಹೇಳಿಕೆಯನ್ನು ಸರಿಯಾಗಿ ದಾಖಲಿಸಿಕೊಂಡಿಲ್ಲ. ಬಂಧನಕ್ಕೀಡಾಗಿರುವ ಕ್ರೈಸ್ತ ಸನ್ಯಾಸಿನಿಯರು ಹಾಗೂ ಮತ್ತೊಬ್ಬ ವ್ಯಕ್ತಿ ಅಮಾಯಕರು ಅವರನ್ನು ಬಿಡುಗಡೆಗೊಳಿಸಬೇಕು' ಎಂದು ಕಮಲೇಶ್ವರಿ ಆಗ್ರಹಿಸಿದ್ದಾರೆ.

ಬಜರಂಗದಳ ದುರ್ಗ ಘಟಕದ ಸಂಯೋಜಕ ರವಿ ನಿಗಮ್ ಅವರು ಸಂತ್ರಸ್ತೆಯ ಆರೋಪವನ್ನು ತಳ್ಳಿಹಾಕಿದ್ದು, ನಾವು ಯಾರ ಮೇಲೂ ಹಲ್ಲೆ ನಡೆಸಿ, ಬಲವಂತ ಮಾಡಿಲ್ಲ. ರೈಲ್ವೆ ನಿಲ್ದಾಣದಲ್ಲಿರುವ ಸಿಸಿಟಿವಿ ಪರಿಶೀಲಿಸಿದರೆ, ಸತ್ಯ ಹೊರಬರುತ್ತದೆ ಎಂದು ಅವರು ಹೇಳಿದ್ದಾರೆ.

'ಎಸ್‌ಐಆರ್ ಅಲ್ಲ; ಮತ ಕಳ್ಳತನ'

ಸಂಸತ್ತಿನ ಒಳಗೆ, ಹೊರಗೆ ಪ್ರತಿಭಟನೆ ತೀವ್ರಗೊಳಿಸಲು ಸಜ್ಜು

ಪ್ರಜಾವಾಣಿ ವಾರ್ತೆ

ನವದೆಹಲಿ: ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು 'ಮತ ಕಳ್ಳತನ' (ವೋಟ್ ಚೋರಿ) ಎಂದು ಕರೆಯಲು 'ಇಂಡಿಯಾ' ಒಕ್ಕೂಟವು ಗುರುವಾರ ನಿರ್ಧರಿಸಿದೆ. ಈ ಮೂಲಕ ಸಂಸತ್ತಿನ ಒಳಗೆ ಮತ್ತು ಹೊರಗೆ ಈ ಕುರಿತ ಪ್ರತಿಭಟನೆಯನ್ನು ತೀವ್ರಗೊಳಿಸಲು ವಿಪಕ್ಷಗಳು ಸಜ್ಜಾಗಿವೆ.

ಕರ್ನಾಟಕದ ಲೋಕಸಭಾ ಕ್ಷೇತ್ರವೊಂದರಲ್ಲಿ ದೊಡ್ಡ ಪ್ರಮಾಣದಲ್ಲಿ ಚುನಾವಣಾ ಅಕ್ರಮ ನಡೆದಿದೆ ಎಂದು ಆರೋಪಿಸಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮುಂದಿನ ಮಂಗಳವಾರ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲಿದ್ದಾರೆ. ಆನಂತರ ಬಿಹಾರದಲ್ಲಿ 'ಮತ ಕಳ್ಳತನ'ದ ವಿರುದ್ಧದ ಪ್ರತಿಭಟನೆಯಲ್ಲಿ ಭಾಗಿಯಾಗಲಿದ್ದಾರೆ. ಮುಂದಿನ ವಾರ ಚುನಾವಣಾ ಆಯೋಗದ ಹೊರಗೆ ಧರಣಿ ಅಥವಾ ಘೇರಾವ್ ನಡೆಸುವ ಬಗ್ಗೆಯೂ ವಿರೋಧ ಪಕ್ಷಗಳು ಚಿಂತನೆ ನಡೆಸುತ್ತಿವೆ.

ರಾಜ್ಯಸಭೆಯ ವಿರೋಧ ಪಕ್ಷಗಳ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಶೀಘ್ರವೇ 'ಇಂಡಿಯಾ' ಸದಸ್ಯರಿಗಾಗಿ ಭೋಜನಕೂಟ ಕರೆದಿದ್ದು, ಅಲ್ಲಿ ರಾಹುಲ್ ಗಾಂಧಿ ಅವರು ಎಸ್‌ಐಆರ್ ಬಗ್ಗೆ ವಿವರಣೆ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಎಎಪಿಯು ಇಂಡಿಯಾ ಒಕ್ಕೂಟದಿಂದ ಹೊರಗಿದ್ದರೂ ಎಸ್‌ಐಆರ್ ವಿರೋಧಿಸಿ ಪ್ರತಿಭಟನೆ ನಡೆಸುವ ಸಾಧ್ಯತೆ ಇದೆ.

'ಆಪರೇಷನ್ ಸಿಂಧೂರ ಕುರಿತ ಚರ್ಚೆಯ ನಂತರ ಎಸ್‌ಐಆರ್ ಬಗ್ಗೆ ಚರ್ಚೆ ನಡೆಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ ನಂತರ ಅದು ತನ್ನ ಮಾತಿನ ಮೇಲೆ ಬದ್ಧತೆ ತೋರಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಖರ್ಗೆ ನೇತೃತ್ವದಲ್ಲಿ ಗುರುವಾರ ನಡೆದ 'ಇಂಡಿಯಾ' ಸಂಸದೀಯ ನಾಯಕರ ಸಭೆಯಲ್ಲಿ ಎಸ್‌ಐಆರ್ ಬಗ್ಗೆ ಚರ್ಚೆ ನಡೆಸಲಾಯಿತು. ಸಭೆಯಲ್ಲಿ ರಾಹುಲ್ ಗಾಂಧಿ, ಟಿಎಂಸಿಯ ಡೆರೆಕ್ ಒಬ್ರಯಾನ್, ಸಿಪಿಎಂನ ಕೆ.ರಾಧಾಕೃಷ್ಣನ್ ಮತ್ತಿತರರು ಭಾಗಿಯಾಗಿದ್ದರು. ಎಸ್‌ಐಆರ್ ವಿಚಾರವನ್ನೇ ಪ್ರಧಾನವಾಗಿ ಇಟ್ಟುಕೊಂಡು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಬೇಕೆಂದು ಸಭೆಯಲ್ಲಿ ಒಮ್ಮತದ ಅಭಿಪ್ರಾಯಕ್ಕೆ ಬರಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕ ಆಮದು ಮಾಡಿಕೊಳ್ಳಲಿರುವ ಎಲ್ಲ ಸರಕುಗಳ ಮೇಲೆ 25ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಘೋಷಿಸಿರುವ ಬಗ್ಗೆಯೂ ಧ್ವನಿ ಎತ್ತಲು ಎಡ ಪಕ್ಷಗಳು ಪ್ರತ್ಯೇಕ ಸಭೆ ನಡೆಸಿವೆ.

ಮುಂದುವರಿದ ಪ್ರತಿಭಟನೆ

ಬಿಹಾರದಲ್ಲಿ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ವಿರೋಧಿಸಿ ವಿರೋಧ ಪಕ್ಷಗಳು ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಗುರುವಾರವೂ ಪ್ರತಿಭಟನೆ ನಡೆಸಿದವು.

ರಾಜ್ಯಸಭೆಯಲ್ಲಿ ವಿಪಕ್ಷಗಳು ಪ್ರತಿಭಟನೆ ಮುಂದುವರಿಸಿದ ಕಾರಣ ಬೆಳಗಿನ ಕಲಾಪವನ್ನು ಎರಡು ಬಾರಿ ಮುಂದೂಡಲಾಯಿತು. ಎಸ್‌ಐಆರ್ ಕುರಿತ ಚರ್ಚೆಗೆ ದಿನಾಂಕ ನಿಗದಿ ಮಾಡುವಂತೆ ವಿಪಕ್ಷಗಳ ಸಂಸದರು ಪಟ್ಟುಹಿಡಿದರು.

'ಎಸ್‌ಐಆರ್ ಎಂದು ಕರೆಯುವುದು ಸೂಕ್ತವಲ್ಲ, 'ಮತ ಕಳ್ಳತನ' ಎಂದೇ ಕರೆಯಬೇಕು' ಎಂದು ಇಂಡಿಯಾ ಒಕ್ಕೂಟದ ನಾಯಕರೊಬ್ಬರು ಹೇಳಿದರು.

ಇತರ ಭಾಷೆಗಳಲ್ಲಿ 'ಮತ ಕಳ್ಳತನ'ಕ್ಕೆ ಸೂಕ್ತವಾದ ಪದವನ್ನು ಹುಡುಕಲು ವಿಪಕ್ಷಗಳ ನಾಯಕರಿಗೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜೋಶಿ ವಿರುದ್ಧ ತನಿಖೆಗೆ ತಂಡ

ಒಂದನೇ ಪುಟದಿಂದ...

ಅವರ ಅವಧಿಯಲ್ಲಿ ಹಣಕಾಸಿನ ಅವ್ಯವಹಾರ ನಡೆದಿದ್ದು, ಪರಿಷತ್ತಿನ ಸದಸ್ಯರಿಗೆ ವಿನಾಕಾರಣ ನೋಟಿಸ್ ನೀಡಿ ಕಿರುಕುಳ ನೀಡುತ್ತಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ. ಅವರು ನಡೆಸಿದ ಹಣಕಾಸಿನ ಅವ್ಯವಹಾರ ಹಾಗೂ ಸರ್ವಾಧಿಕಾರಿ ಧೋರಣೆ ವಿರುದ್ಧ ತನಿಖೆ ನಡೆಸಿ, ಅವರನ್ನು ತಕ್ಷಣ ಹುದ್ದೆಯಿಂದ ವಜಾಗೊಳಿಸುವಂತೆ ದೂರುದಾರರು ಆಗ್ರಹಿಸಿದ್ದರು ಎಂದು ತಿಳಿಸಲಾಗಿದೆ.

ಪರಿಷತ್ತಿಗೆ ಕೂಡಲೇ ಆಡಳಿತಾಧಿಕಾರಿ ನೇಮಿಸಲು ಒತ್ತಾಯಿಸಿರುವ ದೂರುದಾರರು, ಅಕ್ರಮಗಳ ಬಗ್ಗೆ ಪರಿಶೀಲಿಸಲು ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ. ದೂರುಗಳಿಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಲು ಅಧಿಕಾರಿಗಳ ಸಮಿತಿ ರಚಿಸುವಂತೆ ಮನವಿ ಮಾಡಲಾಗಿತ್ತು. ಆದ್ದರಿಂದ ತನಿಖೆಗೆ ಸಮಿತಿ ರಚಿಸಲಾಗಿದೆ ಎಂದು ಹೇಳಲಾಗಿದೆ.

'ಈ ಆದೇಶ ಅಸಿಂಧು ಆಗಲಿದೆ'

'ದೂರುಗಳ ಆಧಾರದ ಮೇಲೆ ಸಹಕಾರ ಇಲಾಖೆ ಈಗಾಗಲೇ ವಿಚಾರಣೆ ಆರಂಭಿಸಿದೆ. ಬುಧವಾರ ನಡೆದ ಕಾರ್ಯಕಾರಿ ಸಮಿತಿಯಲ್ಲಿ ಈ ಬಗ್ಗೆ ಚರ್ಚಿಸಲಾಗಿದೆ. ಹಣಕಾಸು ಸಮಿತಿ, ಪ್ರಕಟಣಾ ಸಮಿತಿಯಲ್ಲಿಯೂ ಚರ್ಚಿಸಿ, ದಾಖಲೆ ಸಮೇತ ಸಮಗ್ರ ಉತ್ತರವನ್ನು ಸೆ.15ರೊಳಗೆ ನೀಡುವುದಾಗಿ ವಿಚಾರಣಾಧಿಕಾರಿಗೆ ತಿಳಿಸಿದ್ದೇವೆ. ಈಗಾಗಲೇ ನೀಡಿರುವ ದೂರು ಅರ್ಜಿಗಳ ವಿಚಾರಣೆ ನಡೆಯುತ್ತಿರುವಾಗ, ಅದೇ ದೂರು ಅರ್ಜಿಗಳ ಮೇಲೆ ಮತ್ತೊಂದು ವಿಚಾರಣೆ ಮಾಡಲು ಸಂವಿಧಾನದಲ್ಲಿ ಅವಕಾಶವಿಲ್ಲ. ಇದನ್ನು 'ಡಬಲ್ ಜಿಯೋಪಾರ್ಡಿ' ಎಂದು ಕರೆಯುತ್ತಾರೆ. ಹಾಗಾಗಿ, ನ್ಯಾಯಾಲಯದಲ್ಲಿ ಈ ಆದೇಶ ಅಸಿಂಧುವಾಗಲಿದೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

(ಅಕ್ಕಪಕ್ಕದ ಪುಟದ ಅಂಚಿನ ಭಾಗ)

...ಮಿಷ

...ಕೋಟಿ ಅನ್ಯ ...ಛಲವಾದಿ

...ಸಯೋಜನೆ (ಎಸ್‌ಸಿಎಸ್‌ಪಿ) ಮತ್ತು ...) ಅನುದಾನದಲ್ಲಿ ₹39,000 ...ಉದ್ದೇಶಕ್ಕೆ ಬಳಸುವ ...' ಎಂದು ವಿಧಾನ ಪರಿಷತ್ತಿನ ...ನಾರಾಯಣಸ್ವಾಮಿ

...ಅವರು, 'ಪರಿಶಿಷ್ಟ ಸಮುದಾಯಗಳ ...ಾಜಿಕ ಅಭಿವೃದ್ಧಿಗೆ ನೇರ ಸಹಾಯ ...ಳ ಗುರಿ. ಯೋಜನೆಗಳ ಅಡಿಯಲ್ಲಿ ...ಗಾರ್ಹತೆ ಮತ್ತು ಮಹಿಳೆಯರಲ್ಲಿ ...ನದ ಬೆಂಬಲ ಸೇರಿ ಹಲವು ...ು. ಅನುದಾನವೇ ಇಲ್ಲವಾಗಿರು ...ು ಸ್ಥಗಿತವಾಗಿವೆ' ಎಂದು ಕಳವಳ

...ಸಬಲೀಕರಣಕ್ಕೆಂದು ತೆಗೆದಿರಿಸಿದ ...ಹೋದರೆ, ಈ ಜನರು ...ಈ ಜನರ ಹಣವನ್ನು ಬಳಸಿಕೊಳ್ಳುವ ...ದ್ಧಿಯನ್ನು ನಿರಾಕರಿಸುತ್ತಿದೆ' ಎಂದು

...ಸಿಎಸ್‌ಪಿ ಮತ್ತು ಟಿಎಸ್‌ಪಿ ...ನ್ನು ಅನ್ಯ ಉದ್ದೇಶಕ್ಕೆ ಬಳಸುವುದರ ...2023ರಿಂದಲೂ ಹೋರಾಡುತ್ತಿ... ಈಗ ಸದನದ ಒಳಗೂ, ಹೊರಗೂ ...ಹೋರಾಟ ನಡೆಸುತ್ತೇವೆ' ಎಂದರು. ...ನಾನು ದಲಿತ ಪರ ಎಂದು ...ಹೇಳಿಕೊಳ್ಳುವ ರಾಹುಲ್ ಗಾಂಧಿ ...ಅವರು, ಕರ್ನಾಟಕದಲ್ಲಿನ ತಮ್ಮದೇ ...ಸರ್ಕಾರದ ಈ ನಡೆಯ ವಿರುದ್ಧ ...ಹೋರಾಡುವುದು ಯಾವಾಗ' ...ಎಂದು ಪ್ರಶ್ನಿಸಿದರು.

...ರ್ತಿ ಪುನರ್ ...ೇರಿ ಪಿಐಎಲ್

...ಕಿನ ಬೈಲೂರು ಪರಶುರಾಮ ...ರಾಮನ ಕಂಚಿನ ಮೂರ್ತಿ ...ಂಗ್ರೆಸ್ ಮುಖಂಡ ಮುನಿಯಾಲು ...ು ಹೈಕೋರ್ಟ್‌ಗೆ ಸಾರ್ವಜನಿಕ ...ದ್ದಾರೆ. ...ನಿರ್ಮಿಸಿ, ಪ್ರತಿಷ್ಠಾಪಿಸಬೇಕು. ...ಲ್ಲಿಯನ್ನು ನೇಮಿಸಬೇಕು ಎಂದೂ

...ನ ಪ್ರತಿಮೆ ಬದಲಿಗೆ ಫೈಬರ್ ...ಪಿಸಿದ ಮೂರ್ತಿ ಸ್ಥಾಪಿಸಲಾಗಿದೆ' ...ರು ಸಲ್ಲಿಸಿದ್ದರು. ತನಿಖೆ ನಡೆಸಿದ್ದ ...ಸಲ್ಲಿಸಿದ್ದ ಆರೋಪಪಟ್ಟಿಯಲ್ಲಿ ...ಲ್ಲೇಖಿಸಿದ್ದರು.

...ದ್ಧನ ವಿರುದ್ಧ ಪ್ರಕರಣ

ಒಂದೇ ಶಾಲೆಯಲ್ಲಿ ಓದುತ್ತಿದ್ದರು. ಮೊಮ್ಮಗನ ಜತೆ ಬಾಲಕಿ ಮನೆಗೆ ಬಂದಿದ್ದಾಗ ವೃದ್ಧ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ ಎಂದು ಬಾಲಕಿಯ ಪಾಲಕರು ದೂರು ನೀಡಿದ್ದಾರೆ.

ಬುಧವಾರ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿರುವ ಪೊಲೀಸರು, ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.



...ೃತ್ವದಲ್ಲಿ ಇದೇ 5ರಂದು ನಗರದ ...ಚೇರಿಯ ಭಾರತ್ ಜೋಡೋ ...ದ ರಣದೀಪ್ ಸಿಂಗ್ ಸುರ್ಜೇವಾಲಾ, ...ಮಯ್ಯ, ಸಚಿವರು, ಶಾಸಕರು,

...ೂಚನೆ

...ುತ್ತೋಲೆ

...ಸರ್ಕಾರದ ಗಮನಕ್ಕೆ ತಂದರು. ಗೃಹ ಸಚಿವರು, ಮುಖ್ಯ ಕಾರ್ಯದರ್ಶಿಯವ... ...ರನ್ನು ಭೇಟಿಯಾಗಿ, ಬೆಳೆಗಾರರು ಎದು... ...ರಿಸುತ್ತಿರುವ ಸಮಸ್ಯೆಯನ್ನು ಮನವರಿಕೆ ಮಾಡಿಕೊಟ್ಟು, ಇದಕ್ಕೆ ಪರಿಹಾರ ಸೂಚಿಸುವಂತೆ ಮನವಿ ಮಾಡಿದ್ದರು.

ನಂತರ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪೊಲೀಸ್ ಮತ್ತು ಅರಣ್ಯ ಇಲಾಖೆಗಳ ಅಧಿಕಾರಿಗಳ ಜಂಟಿ ಸಭೆ ನಡೆಸಿ, ಪೊಲೀಸ್ ಠಾಣೆಯಲ್ಲಿ ದೂರು ಸ್ವೀಕರಿಸಲು ಸಮಾನ ಮಾರ್ಗದರ್ಶಿ ನಿಯಮಗಳನ್ನು ರೂಪಿಸುವಂತೆ ಡಿಜಿಪಿಗೆ ಸೂಚಿಸಿದ್ದರು. '14 ತಿಂಗಳ ಹೋರಾಟಕ್ಕೆ ಫಲ ದೊರೆತಿದ್ದು, ಜೂನ್ 2 ರಂದು ಡಿಜಿಪಿ ಅವರು ಕಡ್ಡಾಯವಾಗಿ ಠಾಣಾಧಿಕಾರಿಗಳು ದೂರು ಸ್ವೀಕರಿಸುವಂತೆ ಸುತ್ತೋಲೆ ಹೊರಡಿಸಿದ್ದಾರೆ' ಎಂದು ಸಂಘದ ಅಧ್ಯಕ್ಷ ಕೆ. ಅಮರನಾರಾಯಣ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಕ್ರಮದಿಂದಾಗಿ ಇನ್ನು ಮುಂದೆ ಗಂಧದ ಮರಗಳ ಕಳ್ಳತನದ ದೂರುಗಳನ್ನು ದಾಖಲಿಸಿಕೊಳ್ಳಲು ಪೊಲೀಸ್ ಠಾಣೆಯಲ್ಲಿ ಯಾವುದೇ ಕಾರಣಕ್ಕೂ ನಿರಾಕರಿಸುವಂತಿಲ್ಲ' ಎಂದು ಅವರು ಹೇಳಿದರು.

‘ಟೋಯಿಂಗ್ ಕಾರ್ಯಾಚರಣೆ ಶೀಘ್ರ’

ಬೆಂಗಳೂರು: ‘ನಿಲುಗಡೆ ನಿಷೇಧಿತ (ನೋ ಪಾರ್ಕಿಂಗ್) ಸ್ಥಳಗಳಲ್ಲಿ ನಿಲ್ಲಿಸುವ ವಾಹನಗಳನ್ನು ಕೊಂಡೊಯ್ಯುವ ಟೋಯಿಂಗ್ ಕಾರ್ಯಾಚರಣೆಯನ್ನು ಶೀಘ್ರವೇ ಆರಂಭಿಸಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ನಗರದ ಕೆಲವು ರಸ್ತೆಗಳಲ್ಲಿ ನಿಷೇಧವಿದ್ದರೂ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಈ ಬಗ್ಗೆ ಜನಜಾಗೃತಿ ಮೂಡಿಸಿದರೂ ಸಮಸ್ಯೆ ಬಗೆಹರಿದಿಲ್ಲ’ ಎಂದರು.

‘ಟೋಯಿಂಗ್ ಸಂಬಂಧ ಈ ಹಿಂದೆ ಗುತ್ತಿಗೆ ನೀಡಲಾಗಿತ್ತು. ಈ ಬಾರಿ ಬೆಂಗಳೂರು ನಗರ ಪೊಲೀಸರೇ ಟೋಯಿಂಗ್ ಮಾಡುತ್ತಾರೆ’ ಎಂದ ಅವರು, ‘ಜನ ಓಡಾಡಲು ರಸ್ತೆ ನಿರ್ಮಿಸಲಾಗಿದೆಯೇ ಹೊರತು, ವಾಹನಗಳ ನಿಲುಗಡೆಗೆ ಅಲ್ಲ’ ಎಂದರು.

ಪ್ರಯಾಣಿಕರ ಸೋಗಿನಲ್ಲಿ ಬಸ್‌ನಲ್ಲಿ ಮೊಬೈಲ್ ಕಳ್ಳತನ: 6 ಜನರ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪ್ರಯಾಣಿಕರ ಸೋಗಿನಲ್ಲಿ ಬಿಎಂಟಿಸಿ ಬಸ್‌ಗಳಲ್ಲಿ ಮೊಬೈಲ್ ಕಳ್ಳತನ ಮಾಡುತ್ತಿದ್ದ ಆರು ಆರೋಪಿಗಳನ್ನು ಎಲೆಕ್ಟ್ರಾನಿಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಕಡಪ ಜಿಲ್ಲೆಯ ನಾಗನೂರು ಕುಮಾರ್(22) ಹಾಗೂ ನಂದ್ಯಾಲ ಜಿಲ್ಲೆಯ ಶಿವಶಂಕರ(20), ಬೆಳಗಾವಿ ಜಿಲ್ಲೆಯ ಸಾಗರ್ ಸಣ್ಣಕ್ಕಿ(32), ಗೋಕಾಕ್‌ನ ಶಿವಕುಮಾರ್ (30), ಮೂಡಲಗಿಯ ಹಾಲಪ್ಪ (29) ಹಾಗೂ ಗುಡೂಸಾಬ್ ಮುಲ್ಲಾ (36) ಬಂಧಿತರು. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿಯ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಬಂಧಿತರಿಂದ ₹25 ಲಕ್ಷ ಮೌಲ್ಯದ ಒಂದು ಆಟೊ ಹಾಗೂ 70 ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಎಲೆಕ್ಟ್ರಾನಿಕ್ ಸಿಟಿಯ ಪ್ರಗತಿನಗರದ ನಿವಾಸಿಯೊಬ್ಬರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಮೊಬೈಲ್ ಕಳ್ಳತನ ಮಾಡುತ್ತಿದ್ದ ಗ್ಯಾಂಗ್ ಅನ್ನು ಪತ್ತೆಹಚ್ಚಲಾಯಿತು ಎಂದು ಪೊಲೀಸರು ತಿಳಿಸಿದರು.

ದೂರುದಾರರು, ಜುಲೈ 10ರಂದು ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಬಿಎಂಟಿಸಿ ಬಸ್ ನಿಲ್ದಾಣದಿಂದ ಕೂಡ್ಲು ಗೇಟ್ ಬಳಿಯಿರುವ ಸ್ನೇಹಿತನ ಮನೆಗೆ ತೆರಳಲು ಬಿಎಂಟಿಸಿ ಬಸ್ ಹತ್ತುತ್ತಿದ್ದರು. ಆ ಸಂದರ್ಭದಲ್ಲಿ ನಾಲ್ವರು ಹುಡುಗರು ದೂರುದಾರರನ್ನು ತಳ್ಳಿಕೊಂಡು ಮುಂದೆ ಹೋಗಿ ಮೊಬೈಲ್ ಕಳ್ಳತನ ಮಾಡಿದ್ದರು. ಸ್ವಲ್ಪ ದೂರ ಪ್ರಯಾಣಿಸಿದ ಬಳಿಕ, ಮೊಬೈಲ್ ಕಳ್ಳತನ ಆಗಿರುವುದು ದೂರುದಾರರ ಗಮನಕ್ಕೆ ಬಂದಿತ್ತು. ಈ ಸಂಬಂಧ ಜುಲೈ 13ರಂದು ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಹೊಸೂರು ಮುಖ್ಯ ರಸ್ತೆಯ ಬಿಎಂಟಿಸಿ ಬಸ್ ನಿಲ್ದಾಣದ ಬಳಿ ಮೂವರು ಅನುಮಾನಾಸ್ಪದವಾಗಿ ಓಡಾಟ ನಡೆಸುತ್ತಿದ್ದರು. ಅವರನ್ನು ವಶಕ್ಕೆ ಪಡೆದು ವಿಚಾರಣೆ, ನಡೆಸಿದಾಗ ಪ್ರಯಾಣಿಕರ ಸೋಗಿನಲ್ಲಿ ಬಿಎಂಟಿಸಿ ಬಸ್‌ಗಳಲ್ಲಿ ಮೊಬೈಲ್ ಕಳ್ಳತನ ಮಾಡುತ್ತಿರುವುದಾಗಿ ತಪ್ಪೊಪ್ಪಿಕೊಂಡಿದ್ದರು. ಅವರು ನೀಡಿದ ಸುಳಿವು ಆಧರಿಸಿ, ದೇವನಹಳ್ಳಿ ಸಮೀಪದ ದೇವಗಾನಹಳ್ಳಿಯ ದೇವಸ್ಥಾನದ ಬಳಿ ಮತ್ತೆ ಮೂವರನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘ಕದ್ದ ಮೊಬೈಲ್‌ಗಳನ್ನು ಆಂಧ್ರಪ್ರದೇಶ ಹಾಗೂ ಬೆಂಗಳೂರಿನ ಕೆಲವು ಕಡೆ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದರು. ಇನ್ನೂ ಕೆಲವು ಮೊಬೈಲ್‌ಗಳ ಬಿಡಿಭಾಗಗಳನ್ನು ಬೇರ್ಪಡಿಸಿ ಮಾರಾಟ ಮಾಡಿದ್ದರು’ എಂದು ಪೊಲೀಸರು ತಿಳಿಸಿದರು.

ಸ್ಫೋಟ: ಯುವತಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟಿಎಂ ಲೇಔಟ್‌ನ ಎರಡನೇ ಹಂತದ ಮನೆಯೊಂದರಲ್ಲಿ ಗುರುವಾರ ಸಂಜೆ ಎಲ್‌ಪಿಜಿ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಸಂಭವಿಸಿದ ಸ್ಫೋಟದಿಂದ ಯುವತಿ ಗಾಯಗೊಂಡಿದ್ದಾರೆ.

ಸಂಜೆ 6.45ರ ಸುಮಾರಿಗೆ ಅಗ್ನಿಶಾಮಕ ದಳದ ಸಹಾಯವಾಣಿಗೆ ಕರೆ ಬಂದಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ತೆರಳಿ ಕಾರ್ಯಾಚರಣೆ ನಡೆಸಿದರು.

‘ಅನಿಲ ಸೋರಿಕೆಯಿಂದ ಘಟನೆ ಸಂಭವಿಸಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಗಾಯಾಳು ಯುವತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಮೈಕೊಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಚಿಟಿಕೆ ಸುದ್ದಿ

‘ಸಾರಿಗೆ ನೌಕರರ ಮುಷ್ಕರಕ್ಕೆ ನೈತಿಕ ಬೆಂಬಲ’

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಬೇಡಿಕೆಗಳನ್ನು ತಾತ್ಸಾರದಿಂದ ನೋಡದೇ, ಕೂಡಲೇ ಈಡೇರಿಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿದ್ದಾರೆ.


ವಿಜಯೇಂದ್ರ

‘ಆ.5 ರಿಂದ ನೌಕರರ ಸಂಘಗಳ ಒಕ್ಕೂಟ ನಡೆಸಲು ಉದ್ದೇಶಿಸಿರುವ ಮುಷ್ಕರಕ್ಕೆ ನೈತಿಕ ಬೆಂಬಲ ನೀಡುತ್ತೇವೆ’ ಎಂದು ಅವರು ‘ಎಕ್ಸ್’ ನಲ್ಲಿ ಹೇಳಿದ್ದಾರೆ.

ಗ್ಯಾರಂಟಿ ಯೋಜನೆಗಳನ್ನು ನಿರ್ವಹಿಸಲು ಸಾಧ್ಯವಾಗದೇ ಹೆಣಗಾಡುತ್ತಿರುವ ಕಾಂಗ್ರೆಸ್ ಸರ್ಕಾರವು ಸೇವೆ, ಬದ್ಧತೆಗೆ ಹೆಸರಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಬಡವಾಗಿಸಿದೆ. ಸಂಸ್ಥೆಯ ನೌಕರರ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಡೆಗಣಿಸಿದೆ ಎಂದು ದೂರಿದ್ದಾರೆ.

ಸಾರಿಗೆ ನಿಗಮಗಳ ನೌಕರರು ಸಂಕಷ್ಟಗಳ ನಡುವೆಯೂ ತಮ್ಮ ಸೇವಾ ನಿಷ್ಠೆಯನ್ನು ಸಂಯಮದಿಂದಲೇ ಮುಂದುವರೆಸಿಕೊಂಡು ಬಂದಿದ್ದಾರೆ. ನೌಕರರ ವೇತನ ಪರಿಷ್ಕರಣೆ ಮಾಡಿದ ಬಳಿಕ, ಪರಿಷ್ಕೃತ ಮೊತ್ತದ 38 ತಿಂಗಳ ಬಾಕಿಯನ್ನೂ ಸರ್ಕಾರ ಬಿಡುಗಡೆ ಮಾಡಿಲ್ಲ. ರಾಜ್ಯ ಸರ್ಕಾರ ಕೂಡಲೇ ಸಾರಿಗೆ ನೌಕರರ ಬೇಡಿಕೆಯನ್ನು ಈಡೇರಿಸಬೇಕು. ತುರ್ತುಕ್ರಮ ತೆಗೆದುಕೊಳ್ಳದೇ ಹೋದರೆ ಆ. 5 ರಿಂದ ಅನಿರ್ದಿಷ್ಟಾವಧಿ ಮುಷ್ಕರದಿಂದ ಜನರಿಗೆ ಉಂಟಾಗುವ ಅನಾನುಕೂಲ ಪರಿಸ್ಥಿತಿ ,ತೊಂದರೆಗಳಿಗೆ ಸರ್ಕಾರವೇ ಹೊಣೆ ಎಂದರು.

‘ವಕೀಲರ ಪರಿಷತ್ ಅಧ್ಯಕ್ಷರಿಗೆ ಇಂಗ್ಲಿಷ್ ಬರುವುದಿಲ್ಲ’

ಬೆಂಗಳೂರು: ‘ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ನಾಮ ನಿರ್ದೇಶಿತ ಹಾಲಿ ಅಧ್ಯಕ್ಷರಿಗೆ ಇಂಗ್ಲಿಷ್ ಬರುವುದಿಲ್ಲ. ಈ ಕೂಡಲೇ ಇವರನ್ನು ಬದಲಿಸಿ ಇಂಗ್ಲಿಷ್ ಭಾಷಾ ಜ್ಞಾನ ಇರುವ ಬೇರೊಬ್ಬರನ್ನು ನೇಮಕ ಮಾಡಬೇಕು’ ಎಂದು ಬೆಂಗಳೂರು ವಕೀಲರ ಸಂಘ (ಎಎಬಿ) ಭಾರತೀಯ ವಕೀಲರ ಪರಿಷತ್‌ಗೆ (ಬಿಸಿಐ) ಪತ್ರ ಬರೆದು ಆಗ್ರಹಿಸಿದೆ.

ಎಎಬಿ ಅಧ್ಯಕ್ಷ ವಿವೇಕ್ ರೆಡ್ಡಿ, ಉಪಾಧ್ಯಕ್ಷ ಸಿ.ಎಸ್.ಗಿರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಚ್. ವಿ.ಪ್ರವೀಣ್ ಗೌಡ ಮತ್ತು ಖಜಾಂಚಿ ಶ್ವೇತಾ ರವಿಶಂಕರ್ ಸಹಿ ಮಾಡಿರುವ ಅಧಿಕೃತ ಪತ್ರವನ್ನು ಬಿಸಿಐ ಅಧ್ಯಕ್ಷರಿಗೆ ರವಾನಿಸಲಾಗಿದೆ.

ಪತ್ರದಲ್ಲಿ ಏನಿದೆ?: ‘ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ವಿಭು ಬಖ್ರು ಅವರಿಗೆ ಸ್ವಾಗತ ಕೋರುವ ಸಮಾರಂಭದಲ್ಲಿ, ಸ್ವಾಗತ ಭಾಷಣ ಓದಿದ ಕೆಎಸ್‌ಬಿಸಿ ನಾಮ ನಿರ್ದೇಶಿತ ಅಧ್ಯಕ್ಷ ಎಸ್.ಎಸ್.ಮಿಟ್ಟಲಕೋಡ್ ಅವರು ತಮ್ಮ ಭಾಷಣದುದ್ದಕ್ಕೂ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ ಅವರ ಹೆಸರುಗಳನ್ನೇ ತಪ್ಪಾಗಿ ಉಚ್ಚರಿಸಿದರು. ಇದರಿಂದ ಮುಜುಗರ ಉಂಟಾಯಿತು.

ಇನ್ನು ಮುಂದೆ ಹೈಕೋರ್ಟ್ ಹಾಲ್ 1ರಲ್ಲಿ ಪರಿಷತ್ ಅಧ್ಯಕ್ಷರು ರಾಜ್ಯ ಪರಿಷತ್ ಪ್ರತಿನಿಧಿಯಾಗಿ ಮಾತನಾಡಬೇಕಾದ ಸಂದರ್ಭ ಬಂದಲ್ಲಿ ಮಿಟ್ಟಲ್‌ಕೋಡ್ ಅವರ ಬದಲಿಗೆ ಪರಿಷತ್‌ನ ಬೇರೊಬ್ಬ ಸದಸ್ಯರು ಮಾತನಾಡುವಂತಾಗಬೇಕು. ಇಲ್ಲವೇ, ಮಿಟ್ಟಲ್‌ಕೋಡ್ ಅವರೇ ಶುದ್ಧ ಕನ್ನಡದಲ್ಲಿ ಮಾತನಾಡುವಂತೆ ನಿರ್ದೇಶಿಸಬೇಕು. ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಗಮನಕ್ಕೆ ತರುತ್ತೇವೆ’ ಎಂದು ಹೇಳಲಾಗಿದೆ.

ಸಹಾಯಧನಕ್ಕೆ ಅರ್ಜಿ

ಬೆಂಗಳೂರು: ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ 2025-26ನೇ ಸಾಲಿನ ಶೈಕ್ಷಣಿಕ ಸಹಾಯಧನಕ್ಕೆ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಎಸ್‌ಎಸ್‌ಪಿ ಮೂಲಕ ಆನ್‌ಲೈನ್‌ನಲ್ಲಿ ನಡೆಯಲಿದೆ. ಕಾರ್ಮಿಕರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯಧನ ಪಡೆಯಲು ಅಕ್ಟೋಬರ್ 31ರೊಳಗೆ ವೆಬ್‌ಸೈಟ್ https://ssp.karnataka.gov.in/ ಮೂಲಕ ಅರ್ಜಿ ಸಲ್ಲಿಸಬೇಕು.

ಪ್ರತಿಭಾ ಪುರಸ್ಕಾರ: ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ 2024-25ನೇ ಸಾಲಿನ ಶೈಕ್ಷಣಿಕ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇಕಡ 90 ಕ್ಕಿಂತ ಹೆಚ್ಚು ಅಂಕ ಪಡೆದ ಮಕ್ಕಳ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 15 ಕೊನೆ ದಿನ. ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಂಬಂಧಿಸಿ ಫಲಾನುಭವಿಯು 2025ನೇ ಮೇ 2ರ ಪೂರ್ವದಲ್ಲಿ ಹಾಗೂ ಪಿಯುಸಿ ಪರೀಕ್ಷೆಗೆ ಸಂಬಂಧಿಸಿ ಫಲಾನುಭವಿಯು 2025ನೇ ಏಪ್ರಿಲ್ 8ರ ಪೂರ್ವದಲ್ಲಿ ಮಂಡಳಿಯಲ್ಲಿ ನೋಂದಣಿಯಾಗಿರಬೇಕು. ಅರ್ಜಿಯನ್ನು ವೆಬ್‌ಸೈಟ್ https://karbwwb.karnataka.gov.in ರಲ್ಲಿ ಸಲ್ಲಿಸಬಹುದು. ಮಾಹಿತಿಗೆ ಸಹಾಯವಾಣಿ 155214 ಸಂಪರ್ಕಿಸಿ ಎಂದು ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ತಿಳಿಸಿದ್ದಾರೆ.

ಪಾದಚಾರಿ ಮಾರ್ಗ ₹1 ಲಕ್ಷ ದಂಡ

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯ ಬಸವನಗುಡಿ ವ್ಯಾಪ್ತಿಯ ಎಂ.ಎನ್. ಕೃಷ್ಣರಾವ್ ರಸ್ತೆಯಲ್ಲಿ ನಿರ್ಮಾಣ ಹಂತದ ಕಟ್ಟಡದ ಮುಂಭಾಗದಲ್ಲಿರುವ ಪಾದಚಾರಿ ಮಾರ್ಗದಲ್ಲಿ ಸಾರುವೆ ಅಳವಡಿಸಿ ನಾಗರಿಕರ ಓಡಾಟಕ್ಕೆ ಸಮಸ್ಯೆ ಮಾಡಿದ ಮಾಲೀಕರಿಗೆ ₹1 ಲಕ್ಷ ದಂಡ ವಿಧಿಸಲಾಗಿದೆ.

ಸ್ವತ್ತಿನ ಸಂಖ್ಯೆ 16ರಲ್ಲಿ ಕಟ್ಟಡ ನಿರ್ಮಿಸುತ್ತಿದ್ದು, ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಳ್ಳಲಾಗಿತ್ತು. ಕಟ್ಟಡ ಮಾಲೀಕರಿಗೆ ನೋಟೀಸ್ ನೀಡಿ ದುಪ್ಪಟ್ಟು ದಂಡ ವಿಧಿಸಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದ್ದರು. ವಲಯ ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ ಅವರ ಮಾರ್ಗದರ್ಶನದಲ್ಲಿ ಸ್ಥಳ ಪರಿಶೀಲನೆ ನಡೆಸಲಾಯಿತು. ಪಾಲಿಕೆಯಿಂದ ಅನುಮತಿ ಪಡೆಯದೆ ರಸ್ತೆ/ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ಸಾರ್ವಜನಿಕರಿಗೆ ಸಮಸ್ಯೆ ಉಂಟಾಗಿರುವುದು ಕಂಡುಬಂತು. ಕಟ್ಟಡ ಮಾಲೀಕರಾದ ರಾಜೇಂದ್ರ ಕುಮಾರ್ ಅವರಿಗೆ ಸೂಚನಾ ಪತ್ರ ನೀಡಿ, ₹1 ಲಕ್ಷ ದಂಡವನ್ನು ಪಾವತಿಸಲು ಸೂಚಿಸಲಾಗಿತ್ತು' ಎಂದು ಚಿಕ್ಕಪೇಟೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮಾಹಿತಿ ನೀಡಿದ್ದಾರೆ.

ರೈಲ್‌ಒನ್ ಮೊಬೈಲ್ ಅಪ್ಲಿಕೇಶನ್ ಆರಂಭ

ಬೆಂಗಳೂರು: ರೈಲು ಪ್ರಯಾಣವನ್ನು ಪ್ರಯಾಣಿಕರ ಸ್ನೇಹಿಯಾಗಿಸಲು 'ರೈಲ್‌ಒನ್ ಮೊಬೈಲ್ ಅಪ್ಲಿಕೇಷನ್' ಅನ್ನು ಭಾರತೀಯ ರೈಲ್ವೆ ಪ್ರಾರಂಭಿಸಿದೆ. ಎಲ್ಲ ರೈಲ್ವೆ ಸೇವೆಗಳನ್ನು ಒಂದೇ ಡಿಜಿಟಲ್ ಪ್ಲಾಟ್‌ಫಾರ್ಮ್‌ಗೆ ಸಂಯೋಜಿಸುವ ಸಮಗ್ರ ಆಲ್-ಇನ್-ಒನ್ ಮೊಬೈಲ್ ಅಪ್ಲಿಕೇಶನ್ ಇದಾಗಿದೆ.

'ಭಿನ್ನಾಭಿಪ್ರಾಯ ಸೃಷ್ಟಿಸಲು ಸಂಚು'

ಜಾರ್ಖಂಡ್‌ನ ಮಹಿಳೆ ಶಮಾ ಪರ್ವೀನ್ ಅನ್ಸಾರಿ ಬಂಧನ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮದಲ್ಲಿ ಅಲ್‌ಖೈದಾ ಭಯೋತ್ಪಾದಕ ಸಂಘಟನೆ ಪರ ಪ್ರಚಾರ ನಡೆಸುತ್ತಿದ್ದ ಹಾಗೂ ಉಗ್ರ ಸಂಘಟನೆಗಳ ಮುಖಂಡರ ಪ್ರಚೋದನಕಾರಿ ಭಾಷಣಗಳನ್ನು ಹಂಚಿಕೊಳ್ಳುತ್ತಿದ್ದ ಆರೋಪದ ಮೇರೆಗೆ ಬಂಧಿಸಿರುವ ಜಾರ್ಖಂಡ್‌ನ ಮಹಿಳೆ ಶಮಾ ಪರ್ವೀನ್ ಅನ್ಸಾರಿ(30) ಅವರ ಚಟುವಟಿಕೆಗಳ ಕುರಿತು ಗುಜರಾತ್‌ನ ಆಂತರಿಕ ಭದ್ರತಾ ವಿಭಾಗದ ಅಧಿಕಾರಿಗಳು ಹಾಗೂ ಭಯೋತ್ಪಾದನಾ ನಿಗ್ರಹ ದಳದ (ಎಟಿಎಸ್) ಸಿಬ್ಬಂದಿ ತನಿಖೆ ಚುರುಕುಗೊಳಿಸಿದ್ದಾರೆ. ಆರೋಪಿ ನಡೆಸುತ್ತಿದ್ದ ಹಲವು ರಹಸ್ಯ ಚಟುವಟಿಕೆಗಳ ಕುರಿತು ಅಧಿಕಾರಿಗಳು ಮಾಹಿತಿ ಕಲೆ ಹಾಕಿದ್ದಾರೆ.


ಶಮಾ ಪರ್ವೀನ್

ಶಮಾ ಪರ್ವೀನ್ ಅವರು ಐದು ವರ್ಷಗಳಿಂದ ಹೆಬ್ಬಾಳದ ಎಂ.ಆರ್. ಪಾಳ್ಯದ ಮನೆಯಲ್ಲಿ ತಾಯಿ ಹಾಗೂ ಸಹೋದರನ ಜತೆಗೆ ನೆಲಸಿರುವುದು ಗೊತ್ತಾಗಿದೆ. ಅಲ್ಲದೇ ಸಾಮಾಜಿಕ ಜಾಲತಾಣದ ವಿವಿಧ ವೇದಿಕೆಗಳಲ್ಲಿ ವಿಡಿಯೊ ಹಂಚಿಕೊಂಡಿರುವುದು ಎಟಿಎಸ್ ತನಿಖೆಯಿಂದ ಬಯಲಾಗಿದೆ.

'ಶಮಾ ಅವರು ಆನ್‌ಲೈನ್ ಮೂಲಕ ಜಿಹಾದಿ ಚಟುವಟಿಕೆ ನಡೆಸುತ್ತಿದ್ದರು. ಪ್ರಚೋದನಕಾರಿ ಸಂದೇಶಗಳನ್ನು ಹಂಚುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

'ಕೇಂದ್ರ ಸರ್ಕಾರದ ವಿರುದ್ಧ 'ಸಶಸ್ತ್ರ ಕ್ರಾಂತಿ'ಗೆ ಕರೆ ನೀಡಲು ಡಿಜಿಟಲ್ ವೇದಿಕೆ ಬಳಸುತ್ತಿದ್ದರು. ಆರೋಪಿಯ ಚಟುವಟಿಕೆಗಳು, ಕೇವಲ ಸೈದ್ಧಾಂತಿಕ ಪ್ರಚಾರಕ್ಕಷ್ಟೇ ಸೀಮಿತ ಆಗಿರಲಿಲ್ಲ. ಧಾರ್ಮಿಕ ಭಿನ್ನಾಭಿಪ್ರಾಯ ಸೃಷ್ಟಿಸಲು ಮತ್ತು ಹಿಂಸಾಚಾರವನ್ನು ಪ್ರಚೋದಿಸಲು ಪ್ರಚೋದನಕಾರಿ ಸಂದೇಶ ಹರಡಲು ಸಾಮಾಜಿಕ ಜಾಲತಾಣವನ್ನು ಶಮಾ ಬಳಸಿಕೊಂಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಫೇಸ್‌ಬುಕ್‌ನಲ್ಲಿ ಎರಡು ಖಾತೆ, ಒಂದು ಇನ್‌ಸ್ಟಾಗ್ರಾಂ ಖಾತೆಯನ್ನು ಆರೋಪಿ ನಿರ್ವಹಿಸುತ್ತಿದ್ದರು. ಆ ಖಾತೆಗಳಿಗೆ 10 ಸಾವಿರ ಫಾಲೋವರ್ಸ್‌ಗಳಿದ್ದರು. ಅದರಲ್ಲಿ ಉಗ್ರ ಚಟುವಟಿಕೆಗೆ ಸಂಬಂಧಿಸಿದ ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಪಾಕ್ ಸಂಸ್ಥೆಗಳ ಸಂಪರ್ಕ

'ಬಂಧಿತ ಆರೋಪಿ ಪಾಕಿಸ್ತಾನದ ಕೆಲವು ಸಂಸ್ಥೆಗಳೊಂದಿಗೆ ಫೋನ್ ಮತ್ತು ಇ-ಮೇಲ್ ಮೂಲಕ ನಿರಂತರ ಸಂಪರ್ಕದಲ್ಲಿ ಇರುವುದು ಗೊತ್ತಾಗಿದೆ. ಜುಲೈ ಆರಂಭದಲ್ಲಿ ಗುಜರಾತ್‌ನಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಶಮಾ ಪರ್ವೀನ್ ಅವರು ರೂಪಿಸಿದ್ದ ಸಂಚು ಗೊತ್ತಾಯಿತು' ಎಂದು ಮೂಲಗಳು ತಿಳಿಸಿವೆ.

ಕ್ರಿಪ್ಟೊ ಕರೆನ್ಸಿ ವಂಚನೆ: ತನಿಖೆ ಚುರುಕು



ಬೆಂಗಳೂರು: ಬೆಳ್ಳಂದೂರಿನಲ್ಲಿರುವ ಕ್ರಿಪ್ಟೊ ಕರೆನ್ಸಿ ಟ್ರೇಡಿಂಗ್ ಕಂಪನಿಯಾದ ನೆಬಿಲೊ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಸರ್ವರ್ ಹ್ಯಾಕ್ ಮಾಡಿ ₹378 ಕೋಟಿ ಮೌಲ್ಯದ ಕ್ರಿಪ್ಟೊ ಕರೆನ್ಸಿ ದೋಚಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ವೈಟ್‌ಫೀಲ್ಡ್‌ನ ಸೆನ್ ಠಾಣೆ ಪೊಲೀಸರು ಬಂಧಿಸಿದ್ದು, ತನಿಖೆ ಚುರುಕುಗೊಳಿಸಿದ್ದಾರೆ.

ಮತ್ತೊಂದೆಡೆ ದೋಚಿರುವ ಹಣವನ್ನು ವಾಪಸ್ ಕೊಡಿಸಿದರೆ ಸೂಕ್ತ ಬಹುಮಾನ ನೀಡುವುದಾಗಿಯೂ ಕಂಪನಿ ಘೋಷಿಸಿದೆ.

'ಜಾರ್ಖಂಡ್ ಮೂಲದ ಆರೋಪಿ ರಾಹುಲ್ ಸರ್ಜಾಪುರ ರಸ್ತೆಯ ಕಾರ್ಮೆರಾಮ್ ಬಳಿ ವಾಸವಾಗಿದ್ದ. ನಾಲ್ಕು ವರ್ಷಗಳಿಂದ ಕ್ರಿಪ್ಟೊ ಕರೆನ್ಸಿ ಕಂಪೆನಿಯಲ್ಲಿ ಕೆಲಸ ಮಾಡಿಕೊಂಡಿದ್ದ. ಕಚೇರಿ ಕೆಲಸಕ್ಕಾಗಿ ಕಂಪನಿಯು ಲ್ಯಾಪ್‌ಟಾಪ್ ನೀಡಿತ್ತು. ಇದರೊಂದಿಗೆ ರಾಹುಲ್ ಒಂದೂವರೆ ವರ್ಷಗಳಿಂದ ಬೇರೆ ಕಂಪೆನಿಯಲ್ಲಿ ಅರೆಕಾಲಿಕವಾಗಿ ಕೆಲಸ ಮಾಡಿಕೊಂಡಿದ್ದ. ಎರಡು ಕಂಪನಿಗಳ ಕೆಲಸವನ್ನು ಒಂದೇ ಲ್ಯಾಪ್ ಟಾಪ್‌ನಲ್ಲಿ ಮಾಡುತ್ತಿದ್ದ. ಕಂಪನಿಯ ನಿಯಮಾವಳಿ ಪ್ರಕಾರ ಇದು ಅಪರಾಧವಾಗಿತ್ತು. ಸೈಬರ್ ಕಳ್ಳರು ಜುಲೈ 19ರಂದು ಮಾಲ್‌ವೇರ್ ವೈರಸ್ ಮೂಲಕ ಲ್ಯಾಪ್‌ಟಾಪ್ ಹ್ಯಾಕ್ ಮಾಡಿದ್ದರು ಎಂಬುದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

ಲ್ಯಾಪ್‌ಟಾಪ್ ಹ್ಯಾಕ್ ಮಾಡಿ ಸಂಪೂರ್ಣವಾಗಿ ಹಿಡಿತಕ್ಕೆ ತೆಗೆದುಕೊಂಡ ವಂಚಕರು, ಜುಲೈ 19ರಂದು ಮುಂಜಾನೆ ಒಂದು ಯುಎಸ್‌ಡಿಟಿ ಹಾಗೂ ಬೆಳಿಗ್ಗೆ 9.40ರ ವೇಳೆ 44 ಮಿಲಿಯನ್ ಡಾಲರ್ ಅನ್ನು ಕ್ಷಣಾರ್ಧದಲ್ಲಿ ಕಂಪನಿಯ ವ್ಯಾಲೆಟ್‌ನಿಂದ ತಮ್ಮ ಕ್ರಿಪ್ಟೊ ವ್ಯಾಲೆಟ್‌ಗೆ ರವಾನಿಸಿಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

'ದೋಚಿರುವ ಹಣವನ್ನು ಹಿಂಪಡೆಯುವ ಸಲುವಾಗಿ ನಿರಂತರವಾಗಿ ಕೆಲಸ ಮಾಡುತ್ತಿದ್ದೇವೆ. ಜಾಗತಿಕಮಟ್ಟದ ಸೈಬರ್ ಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿದೇವೆ. ಹಲವು ಕಾನೂನು ಏಜೆನ್ಸಿಗಳೊಂದಿಗೆ ಕೆಲಸ ಮಾಡುತ್ತಿದ್ದೇವೆ. ಹೂಡಿಕೆದಾರರ ಹಣ ಸುರಕ್ಷಿತವಾಗಿದೆ' ಎಂದು ಕಂಪನಿಯ ಅಧಿಕಾರಿಗಳು ತಿಳಿಸಿದ್ದಾರೆ.

ರೈಲಿನಲ್ಲಿ ಹ್ಯಾಶಿಶ್ ಆಯಿಲ್ ಸಾಗಣೆ


ಅಪ್ಪಲರಾಜು

ಬೆಂಗಳೂರು: ರೈಲಿನಲ್ಲಿ ಮಾದಕ ವಸ್ತು ಹ್ಯಾಶಿಶ್ ಆಯಿಲ್ ಸಾಗಣೆ ಮಾಡಿಕೊಂಡು ಬಂದಿದ್ದ ಇಬ್ಬರು ಆರೋಪಿಗಳನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ವಿಜಯನಗರದ ಅಪ್ಪಲರಾಜು(34) ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಬಂಧಿಸಲಾಗಿದೆ. ಆರೋಪಿಗಳಿಂದ ₹70 ಲಕ್ಷ ಮೌಲ್ಯದ ಹ್ಯಾಶಿಶ್ ಆಯಿಲ್ ಅನ್ನು ವಶಕ್ಕೆ ಪಡೆಯಲಾಗಿದೆ ಎಂದು ರೈಲ್ವೆ ಪೊಲೀಸರು ತಿಳಿಸಿದರು.

ಆಂಧ್ರಪ್ರದೇಶದ ವಿಜಯನಗರದ ತಂಗಾಟಿ ಭರತ್ ಎಂಬಾತನಿಂದ ಹ್ಯಾಶಿಶ್ ಆಯಿಲ್ ಅನ್ನು ಕಡಿಮೆ ಬೆಲೆಗೆ ಖರೀದಿಸಿ ಪ್ರಶಾಂತಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಸಾಗಣೆ ಮಾಡಿಕೊಂಡು ನಗರಕ್ಕೆ ತಂದಿದ್ದರು. ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ, ಯಲಹಂಕ ರೈಲು ನಿಲ್ದಾಣದಲ್ಲಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.


ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಅವಶೇಷಗಳಡಿ ಯಾರಾದರೂ ಸಿಲುಕಿದ್ದಾರೆಯೇ ಎಂಬುದನ್ನು ಪತ್ತೆಹಚ್ಚಲು ಶೋಧ ನಡೆಸಿದರು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಕುಸಿದ ಕಟ್ಟಡ: ವ್ಯಕ್ತಿ ಪಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಂಗಿರಾಮನಗರದಲ್ಲಿ ಹಳೆಯ ಕಟ್ಟಡವೊಂದು ಗುರುವಾರ ಮಧ್ಯಾಹ್ನ ಏಕಾಏಕಿ ಕುಸಿದಿದ್ದು, ಕಟ್ಟಡದ ಒಳಗೆ ಸಿಲುಕಿದ್ದ ವ್ಯಕ್ತಿಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಕಾರ್ಯಾಚರಣೆ ನಡೆಸಿ ರಕ್ಷಿಸಿದರು.

ಅಶ್ವಿನ್ ಅವರಿಗೆ ಸಣ್ಣಪುಟ್ಟ ಗಾಯ ವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಶ್ವಿನ್ ಅವರಿಗೆ ಸೇರಿದ ಮೊದಲ ಅಂತಸ್ತಿನ ಕಟ್ಟಡದಲ್ಲಿ ಟೈಲ್ಸ್ ಕಾಮಗಾರಿ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಕಟ್ಟಡವು ಏಕಾಏಕಿ ಕುಸಿದಿದೆ. ನೆಲಮಹಡಿಯಲ್ಲಿ ಟೈಲ್ಸ್ ಕೆಲಸ ಮಾಡುತ್ತಿದ್ದ ಕಾರ್ಮಿಕ ಶಬ್ದ ಕೇಳಿ ಹೊರಕ್ಕೆ ಓಡಿ ಬಂದು ಪಾರಾಗಿದ್ದರು. ಅಶ್ವಿನ್ ಅವರಿಗೆ ಹೊರಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಕಾರ್ಯಾಚರಣೆ ನಡೆಸಿ ಅವರನ್ನು ರಕ್ಷಿಸಿದರು.

'ಕಟ್ಟಡವು ಅಂದಾಜು 50 ವರ್ಷ ಹಳೆಯದಾಗಿರಬಹುದು. ತಳಪಾಯ ಹಾಗೂ ಗೋಡೆ ಶಿಥಿಲಗೊಂಡು ಕುಸಿದಿದೆ ಎಂಬುದು ಕಂಡುಬಂದಿದೆ. ಘಟನೆ ಕುರಿತು ಬಿಬಿಎಂಪಿ ಅಧಿಕಾರಿಗಳಿಗೆ ಮಾಹಿತಿ ನೀಡಲಾಯಿತು. ಬಿಬಿಎಂಪಿ ಸಿಬ್ಬಂದಿ ಜೆಸಿಬಿ ಯಂತ್ರ ಬಳಸಿಕೊಂಡು ಕಟ್ಟಡದ ಅವಶೇಷಗಳ ತೆರವು ಕಾರ್ಯಾಚರಣೆ ನಡೆಸಿದರು' ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ವ್ಯಸನಮುಕ್ತ ದಿನಾಚರಣೆ: ಸಾನ್ನಿಧ್ಯ: ಗುರುಮಹಾಂತ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ವೂಡೇ ಪಿ. ಕೃಷ್ಣ, ಎ. ಶ್ರೀಧರ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ, ಜಾಗೃತಿ ಜಾಥಾ: ಬೆಳಿಗ್ಗೆ 9.30ಕ್ಕೆ ಮೌರ್ಯ ವೃತ್ತದಿಂದ ಗಾಂಧಿ ಪ್ರತಿಮೆಯಿಂದ ಗಾಂಧಿ ಭವನದವರೆಗೆ, ವೇದಿಕೆ ಕಾರ್ಯಕ್ರಮದ ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ವಿದ್ಯಾರ್ಥಿ ಪರಿಷತ್ತು–2025–26 ಉದ್ಘಾಟನೆ, ಸನ್ಮಾನ ಕಾರ್ಯಕ್ರಮ: ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ್, ಅತಿಥಿಗಳು: ಎನ್. ಸಂತೋಷ್ ಹೆಗ್ಡೆ, ಸುನಿತಾ ಮುರಳಿ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಪಿಯು ಕಾಲೇಜ್ ಫಾರ್ ವುಮೆನ್, ಬಸವನಗುಡಿ, ಬೆಳಿಗ್ಗೆ 11.30


ಎನ್. ಸಂತೋಷ್ ಹೆಗ್ಡೆ

ವಚನ ಶ್ರಾವಣ–2025: ವಚನ ಗಾಯನ: ಚಂದ್ರಮತಿ ಗಿರೀಶ್, ವಚನ ಚಿಂತನ: ರತ್ನಾ ದೇಸಾಯಿ, ಅತಿಥಿಗಳು: ಮೃತ್ಯುಂಜಯ, ರೇಖಾ ಪ್ರಕಾಶ್, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸಿದ್ಧಗಂಗಾ ಪಬ್ಲಿಕ್ ಸ್ಕೂಲ್, ವಿಜಯನಗರ, ಮಧ್ಯಾಹ್ನ 1.45

'ದಲಿತರ ಹಣ ದುರ್ಬಳಕೆ–ಮೊಂಡುವಾದ ಮಂಡಿಸುತ್ತಿರುವ ರಾಜ್ಯ ಸರ್ಕಾರ' ದುಂಡು ಮೇಜಿನ ಸಭೆ: ಉದ್ಘಾಟನೆ: ಎಂ. ವೆಂಕಟಸ್ವಾಮಿ, ಭಾಗವಹಿಸುವವರು: ಎನ್. ಮೂರ್ತಿ, ಅಶ್ವಥ್ ಅಂತ್ಯಜ, ಹರಿರಾಮ್, ಆರ್.ಎಂ.ಎನ್. ರಮೇಶ್, ಆರ್. ಮೋಹನರಾಜ್, ಆಯೋಜನೆ: ದಲಿತ ಸಂಘಟನೆಗಳ ಒಕ್ಕೂಟ, ಸ್ಥಳ: ಶಾಸಕರ ಭವನದ ಸಭಾಂಗಣ, ಬೆಳಿಗ್ಗೆ 11.30

'ಕರ್ನಾಟಕ ತಪ್ಪು ಮಾಹಿತಿ ಮತ್ತು ಸುಳ್ಳು ಸುದ್ದಿ ನಿಷೇಧ ಹಾಗೂ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ತಡೆ ಮಸೂದೆ–2025' ಸಾರ್ವಜನಿಕ ಸಮಾಲೋಚನಾ ಸಭೆ: ಡಾ. ಮೊಹಮ್ಮದ್ ಸಾದ್ ಬೆಲ್ಗಾಮಿ, ಶಿವ ಸುಂದರ್, ವಿನಯ್ ಶ್ರೀನಿವಾಸ್, ಮಾನವಿ ಅತ್ರಿ, ಹರ್ಷಕುಮಾರ್ ಕುಗ್ವೆ, ಆಯೋಜನೆ: ಜಮಾಅತೆ ಇಸ್ಲಾಮಿ ಹಿಂದ್–ಕರ್ನಾಟಕ, ಸ್ಥಳ: ಬಿಫ್ಟ್ ಸಭಾಂಗಣ, ಕ್ವೀನ್ಸ್ ರಸ್ತೆ, ಸಂಜೆ 4.30

'ಪರಿಸರ ನ್ಯಾಯ ಮತ್ತು ಹವಾಮಾನ ಬದಲಾವಣೆ' ಉಪನ್ಯಾಸ: ಬಿ.ವಿ. ನಾಗರತ್ನಾ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಸಂಜೆ 6.30

'ಮೃಚ್ಛಕಟಿಕ' ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಅತಿಥಿಗಳು: ಸಿ.ಕೆ. ಗುಂಡಣ್ಣ, ಬೇಲೂರು ರಘುನಂದನ್, ಪಿ. ಚಂದ್ರಿಕಾ, ಆಯೋಜನೆ: ದೃಶ್ಯ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಮಗು ಕೊಂದು ತಾಯಿ ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಗಳರಪಾಳ್ಯದ ಬಾಲಾಜಿನಗರದಲ್ಲಿ ಮಗುವನ್ನು ಕೊಂದು ತಾಯಿ ಆತ್ಮಹತ್ಯೆಗೆ ಯತ್ನಿಸಿದ್ದು, ಈ ಸಂಬಂಧ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಚಂದ್ರಿಕಾ

ಒಂದು ವರ್ಷ ಎಂಟು ತಿಂಗಳ ಮಗುವನ್ನು ಚಂದ್ರಿಕಾ(24) ಅವರು ಕೊಲೆ ಮಾಡಿ ತಾನೂ ಆತ್ಮಹತ್ಯೆಗೆ ಯತ್ನಿಸಿದ್ದರು. ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಪೊಲೀಸರು ಹೇಳಿದರು.


ಚಂದ್ರಿಕಾ ಅವರ ಪತಿ ಲೋಕೇಶ್ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಹಣಕಾಸು ಮತ್ತು ಕೌಟುಂಬಿಕ ಸಮಸ್ಯೆಯಿಂದ ಚಂದ್ರಿಕಾ ಅವರು ಮನನೊಂದು ಮಗುವಿಗೆ ವಿಷ ಕುಡಿಸಿ ತಾನೂ ಸಹ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದರು. ಮಾಹಿತಿ ತಿಳಿದ ಕುಟುಂಬಸ್ಥರು ತಾಯಿ ಹಾಗೂ ಮಗುವನ್ನು ಆಸ್ಪತ್ರೆಗೆ ಕರೆದೊಯ್ದರು. ಮಗು ಆಸ್ಪತ್ರೆಯಲ್ಲಿ ಮೃತಪಟ್ಟಿದೆ. ತಾಯಿಯ ಸ್ಥಿತಿ ಗಂಭೀರವಾಗಿದ್ದು, ಅವರಿಗೆ ಚಿಕಿತ್ಸೆ ಮುಂದುವರಿದಿದೆ' ಎಂದು ಪೊಲೀಸರು ಹೇಳಿದರು.

'ಲೋಕೇಶ್ ಅವರು ತಿಗಳರ ಪಾಳ್ಯದಲ್ಲಿ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಚಂದ್ರಿಕಾ ಅವರು ಗೃಹಿಣಿ. ದಂಪತಿಗೆ ಆರು ವರ್ಷದ ಪುತ್ರ ಸಹ ಇದ್ದಾನೆ. ಅವನು ಕೊರಟಗೆರೆಯ ಚಿಕ್ಕನಹಳ್ಳಿಯಲ್ಲಿರುವ ಅಜ್ಜಿಯ ಮನೆಯಲ್ಲಿ ವಾಸ ಮಾಡುತ್ತಿದ್ದ. ದಂಪತಿ ಮಧ್ಯೆ ಹಣಕಾಸು ವಿಚಾರಕ್ಕೆ ನಿತ್ಯ ಗಲಾಟೆ ನಡೆಯುತ್ತಿತ್ತು. ಜುಲೈ 29ರಂದು ಲೋಕೇಶ್ ಕೆಲಸಕ್ಕೆ ಹೋಗಿದ್ದಾಗ ಈ ಘಟನೆ ನಡೆದಿದೆ' ಎಂದು ಪೊಲೀಸರು ತಿಳಿಸಿದರು.

ಪ್ರಜಾವಾಣಿ
ಶುಕ್ರವಾರ • ಆಗಸ್ಟ್ 1, 2025
ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ



ಸುಭಾಷಿತ

ನಿಲ್ಲುವುದೇ ಸಾವು; ಚಲಿಸುವುದೇ ಬಾಳು.

-ಕುವೆಂಪು

ಸಂಪಾದಕೀಯ

ಅಮೆರಿಕದಿಂದ ಸುಂಕದ ರಾಜಕೀಯ ನಿಭಾಯಿಸಬೇಕಿದೆ ಕಠಿಣ ಪರಿಸ್ಥಿತಿ

ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕವು ಶೇಕಡ 25ರಷ್ಟು ಸುಂಕ ಹೇರಿದೆ. ಅಮೆರಿಕದ ಜೊತೆಗಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮಾತುಕತೆಯಲ್ಲಿ ಭಾರತವು ಈ ಹಂತದಲ್ಲಿ ಹಿನ್ನಡೆ ಅನುಭವಿಸಿದಂತಿದೆ. ಹೀಗಾಗಿ, ಭಾರತವು ಸುಂಕದ ಪ್ರಹಾರವನ್ನು ಎದುರಿಸಬೇಕಾಗಿದೆ. ಕೊನೆಯ ಕ್ಷಣದಲ್ಲಿ ಯಾವುದೇ ಬದಲಾವಣೆಗಳು ಆಗದೆ ಇದ್ದರೆ, ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕವು ಶೇಕಡ 25ರಷ್ಟು ಸುಂಕವನ್ನು ವಿಧಿಸಲಿದೆ. ಆದರೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕೊನೆಯ ಕ್ಷಣದಲ್ಲಿ ಬದಲಾವಣೆಗಳನ್ನು ಮಾಡುವ ಸಾಧ್ಯತೆ ಇಲ್ಲವೇ ಇಲ್ಲ ಎಂದು ಹೇಳಲಾಗದು. ಸುಂಕ ಮಾತ್ರವೇ ಅಲ್ಲದೆ, ರಷ್ಯಾದಿಂದ ಶಸ್ತ್ರಾಸ್ತ್ರ ಹಾಗೂ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿರುವ ಕಾರಣಕ್ಕೆ ಭಾರತದ ಮೇಲೆ ದಂಡವನ್ನು ವಿಧಿಸುವುದಾಗಿಯೂ ಟ್ರಂಪ್ ಹೇಳಿದ್ದಾರೆ. ಸುಂಕ ಹಾಗೂ ದಂಡದ ಪರಿಣಾಮವಾಗಿ ಭಾರತ ಮತ್ತು ಅಮೆರಿಕದ ನಡುವಿನ ವ್ಯಾಪಾರ ವಹಿವಾಟು ಕಠಿಣ ಸವಾಲಾಗಿ ಪರಿಣಮಿಸಲಿದೆ.

ವಿಶ್ವದ ಅತಿದೊಡ್ಡ ಪ್ರಜಾತಂತ್ರ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡುವಾಗ ಟ್ರಂಪ್ ಅವರು ಬಳಸಿರುವ ಭಾಷೆಯು ಭಾರತವನ್ನು ಬೆದರಿಸುವಂತೆ ಹಾಗೂ ಅವಮಾನಿಸುವಂತೆ ಇತ್ತು. ಭಾರತ ಮಾಡುವ ಎಲ್ಲ ಕೆಲಸಗಳೂ ಪ್ರಯೋಜನಕಾರಿ ಅಲ್ಲ ಎಂದು ಹೇಳಿ, ಈ ಕಾರಣಕ್ಕಾಗಿ ಭಾರತದ ಮೇಲೆ ದಂಡ ಹೇರುವುದು ಸೂಕ್ತವಾಗುತ್ತದೆ ಎಂದು ಟ್ರಂಪ್ ಅವರು ಹೇಳುವುದು ತಮ್ಮನ್ನು ಮೆಚ್ಚಿಸಲು ವಿಶೇಷ ಪ್ರಯತ್ನಗಳನ್ನು ನಡೆಸಿರುವ ಸರ್ಕಾರವೊಂದನ್ನು ಅಣಕಿಸುವುದಕ್ಕೆ ಸಮ. ಟ್ರಂಪ್ ಅವರನ್ನು ಖುಷಿಪಡಿಸಲು ಭಾರತದ ಕಡೆಯಿಂದ ಅಗತ್ಯಕ್ಕಿಂತ ಹೆಚ್ಚಿನ ಪ್ರಯತ್ನಗಳು ನಡೆದಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಐದು ವರ್ಷಗಳ ಹಿಂದೆ ಗುಜರಾತ್‌ನಲ್ಲಿ ನಡೆದ ರ‍್ಯಾಲಿಯೊಂದರಲ್ಲಿ ಟ್ರಂಪ್ ಅವರ ಬಗ್ಗೆ ಬಹಳ ಆದರ ತೋರಿಸಿದ್ದರು. ಅಲ್ಲದೆ, ಈ ವರ್ಷದ ಫೆಬ್ರುವರಿಯಲ್ಲಿ ಮೋದಿ ಅವರು ಟ್ರಂಪ್ ಅವರ 'ಮೇಕ್ ಅಮೆರಿಕ ಗ್ರೇಟ್ ಅಗೇನ್' ಘೋಷವಾಕ್ಯದ ಜೊತೆಗೆ, 'ಮೇಕ್ ಇಂಡಿಯಾ ಗ್ರೇಟ್ ಅಗೇನ್' ಎಂಬ ಘೋಷವಾಕ್ಯವನ್ನು ಜೋಡಿಸಿ, ಇವೆರಡೂ ಒಟ್ಟಾದರೆ 'ಮೆಗಾ' ಪಾಲುದಾರಿಕೆ ಸಾಧ್ಯವಾಗುತ್ತದೆ ಎಂದು ಹೇಳಿದ್ದರು. ಮಧ್ಯಂತರ ವ್ಯಾಪಾರ ಒಪ್ಪಂದವು ಸಾಧ್ಯವಾಗದೆ ಇರುವುದು ಭಾರತದ ರಾಜತಾಂತ್ರಿಕ ಪ್ರಯತ್ನಗಳಿಗೆ ಆಗಿರುವ ಸೋಲು ಎನ್ನಬಹುದು. ಅಲ್ಲದೆ, ಮಾತುಕತೆಯ ಹೊತ್ತಿನಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಭಾರತದ ಬಳಿ ಹೆಚ್ಚಿನ ಆಯ್ಕೆಗಳು ಇರುವಂತೆ ಕಾಣುತ್ತಿಲ್ಲ. ಟ್ರಂಪ್ ಅವರು ಭಾರತದ ಬಗ್ಗೆ ಬಳಸಬಾರದ ಭಾಷೆಯನ್ನು ಬಳಸಿದ್ದಾರೆ ಹಾಗೂ ಭಾರತವನ್ನು ಸಂಕಷ್ಟಕ್ಕೆ ಸಿಲುಕಿಸಲು ಯತ್ನಿಸಿದ್ದಾರೆ. ಕೇಂದ್ರ ವಾಣಿಜ್ಯ ಸಚಿವಾಲಯವು ವ್ಯಾಪಾರ ಒಪ್ಪಂದ ಸಾಧ್ಯವಾಗಿಸಲು ತನ್ನಿಂದ ಆದ ಎಲ್ಲ ಯತ್ನಗಳನ್ನೂ ನಡೆಸಿದೆ ಎಂಬುದು ನಿಜ. ಆದರೆ, ಇಲ್ಲಿ ವಿದೇಶಾಂಗ ಸಚಿವಾಲಯದ ಪಾತ್ರದ ಕುರಿತು ಹಾಗೂ ಒಪ್ಪಂದದ ವಿಚಾರವಾಗಿ ನಡೆಸಿದ ಪೂರ್ವಭಾವಿ ಪ್ರಯತ್ನಗಳ ಬಗ್ಗೆ ಅವಲೋಕನ ನಡೆಯಬೇಕಿದೆ.



ಅಮೆರಿಕ ವಿಧಿಸಿರುವ ಸುಂಕದ ಹೊರೆ ಭಾರತಕ್ಕೆ ನುಂಗಲಾರದ ತುತ್ತಿನಂತಿದೆ. ಕಠಿಣ ಸವಾಲನ್ನು ಜಾಣ್ಮೆಯಿಂದ ನಿಭಾಯಿಸುವ ಜೊತೆಗೆ, ರಾಜತಾಂತ್ರಿಕ ವ್ಯವಹಾರಗಳ ಪರಾಮರ್ಶೆಯೂ ನಡೆಯಬೇಕಿದೆ.

ಇದು ಆರೋಪಗಳನ್ನು ಮಾಡುತ್ತಾ ಕೂರಬೇಕಾದ ಸಂದರ್ಭ ಅಲ್ಲ. ಟ್ರಂಪ್ ಅವರು ಮುಂದಿರಿಸಿದ ಕೆಲವು ಕಠಿಣ ಬೇಡಿಕೆಗಳನ್ನು ಈಡೇರಿಸದೆ ಇದ್ದ ಕಾರಣಕ್ಕೆ ಹಾಗೂ ಹೈನು ಉತ್ಪನ್ನಗಳು ಮತ್ತು ಕೃಷಿ ಉತ್ಪನ್ನಗಳಿಗೆ ಭಾರತದ ಮಾರುಕಟ್ಟೆಯನ್ನು ಮುಕ್ತವಾಗಿಸಲು ಒಪ್ಪದೆ ಇದ್ದ ಕಾರಣಕ್ಕೆ ಒಪ್ಪಂದ ಸಾಧ್ಯವಾಗುತ್ತಿಲ್ಲ ಎಂದು ವರದಿಗಳು ಹೇಳುತ್ತಿವೆ. ಈ ವಿಚಾರಗಳಲ್ಲಿ ಭಾರತವು ಹೊಂದಾಣಿಕೆಗೆ ಒಪ್ಪಿಗೆ ಸೂಚಿಸಿದ್ದರೆ ಒಪ್ಪಂದ ಸಾಧ್ಯವಾಗುತ್ತಿತ್ತು ಎನ್ನುವುದಾದರೆ, ಒಪ್ಪಂದ ಮುರಿದುಬೀಳುವಂತೆ ಮಾಡುವುದನ್ನು ಹೊರತುಪಡಿಸಿ ಭಾರತದ ಎದುರು ಬೇರೆ ಆಯ್ಕೆಗಳೇ ಇರಲಿಲ್ಲ ಎಂದು ಹೇಳಬಹುದು. ಭಾರತವು ಈಗ ಎದುರಾಗಿರುವ ಸವಾಲನ್ನು ಮೆಟ್ಟಿ ನಿಲ್ಲಬೇಕಿದೆ ಹಾಗೂ ಕಠಿಣ ಸವಾಲನ್ನು ಜಾಣ್ಮೆಯಿಂದ ನಿಭಾಯಿಸಬೇಕಿದೆ. ಗಂಭೀರ ಸ್ವರೂಪದ ಪರಿಣಾಮಗಳನ್ನು ಉಂಟುಮಾಡುವ ಯಾವುದೇ ಕೆಲಸವನ್ನು ಭಾರತ ಮಾಡುವುದಿಲ್ಲ ಎಂಬ ಸಂದೇಶ ರವಾನೆ ಆಗಬೇಕಿದೆ. ಮತ್ತೆ ಮತ್ತೆ ವಿದೇಶಗಳಿಗೆ ಭೇಟಿ ನೀಡುವುದು ಹಾಗೂ ಕ್ಯಾಮೆರಾ ಮುಂದೆ ನಿಲ್ಲುವುದು ರಾಜತಾಂತ್ರಿಕ ಮಟ್ಟದಲ್ಲಿ ನಡೆಯುವ ಕಠಿಣ ಪರಿಶ್ರಮದ ಕೆಲಸಗಳಿಗೆ ಪರ್ಯಾಯ ಅಲ್ಲ ಎನ್ನುವ ಪಾಠವನ್ನೂ ನಾವು ಕಲಿಯಬೇಕಿದೆ.

ಸಿಮೆಂಟ್ ರೋಡ್ ಶಾಪ



ಮಳೆಗಾಲದಲ್ಲಿ ಮಲೆನಾಡಿನಲ್ಲಿ ಸಿಮೆಂಟ್ ರಸ್ತೆಯಲ್ಲಿ ಓಡಾಡುವುದು ಅಪಾಯಕರ. ಸಿಮೆಂಟ್ ರಸ್ತೆಯಲ್ಲಿ ಹೋಗುವಾಗ ಎರಡೂ ಕಾಲುಗಳು ಜಾರಿ ಒಮ್ಮೆಲೇ ಮೇಲೆ ಹೋಗಿ ಆಕಾಶದಿಂದ ಎಸೆದಂತೆ ನೆಲಕ್ಕೆ ಬಿದ್ದು ಸೊಂಟಕ್ಕೆ ಪೆಟ್ಟು ಮಾಡಿಕೊಂಡೆ. ಡಾಕ್ಟರಲ್ಲಿಗೆ ಹೋದಾಗ, ಇದೇ ರೀತಿ ಪೆಟ್ಟು ಮಾಡಿಕೊಂಡವರಲ್ಲಿ ನನ್ನದು ಹದಿನೈದನೇ ಕೇಸ್ ಎಂದರು. ಮಲೆನಾಡಿಗೆ ಅವೈಜ್ಞಾನಿಕ ಸಿಮೆಂಟ್ ರೋಡ್ ಯಾವ ಪುರುಷಾರ್ಥಕ್ಕಾಗಿ ಬೇಕು?

ಚಿದಂಬರ ರಾವ್ ಜಂಬೆ, ರಂಗಕರ್ಮಿ, ಫೇಸ್‌ಬುಕ್‌ನಿಂದ

ಕಿಡಿನುಡಿ



ಮಾಲೇಗಾಂವ್ ಬಾಂಬ್ ಸ್ಫೋಟವು, ಹಿಂದೂ ಭಯೋತ್ಪಾದಕ ಸಂಘಟನೆಗಳ ಕೃತ್ಯ ಹಾಗೂ 'ಕೇಸರಿ ಭಯೋತ್ಪಾದನೆ' ಎಂದು ಬಿಂಬಿಸುವ ಕಾಂಗ್ರೆಸ್‌ನ ಹೋರಾಟವು ಎನ್‌ಐಎ ವಿಶೇಷ ನ್ಯಾಯಾಲಯ ನೀಡಿರುವ ತೀರ್ಪಿನಿಂದಾಗಿ ನೆಲಕಚ್ಚಿದೆ.

ರವಿಶಂಕರ್ ಪ್ರಸಾದ್, ಬಿಜೆಪಿ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 1-8-2000

- **ವೀರಪ್ಪನ್‌ನಿಂದ ರಾಜ್‌ಕುಮಾರ್ ಅಪಹರಣ**

ಬೆಂಗಳೂರು, ಜುಲೈ 31– ತಮ್ಮ ಸ್ವಗ್ರಾಮವಾದ ತಮಿಳುನಾಡು ಗಡಿ ಭಾಗದ ಗಾಜನೂರಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಕನ್ನಡದ ಮೇರುನಟ ಡಾ. ರಾಜ್‌ಕುಮಾರ್ ಹಾಗೂ ಅವರ ಅಳಿಯ ಸೇರಿದಂತೆ ನಾಲ್ವರನ್ನು ಕಾಡುಗಳ್ಳ ವೀರಪ್ಪನ್ ಭಾನುವಾರ ರಾತ್ರಿ ಅಪಹರಿಸಿದ್ದಾನೆ.

ಅಪಹರಣದ ಸುದ್ದಿ ರಾಜ್ಯಾದ್ಯಂತ ಕಾಡ್ಗಿಚ್ಚಿನಂತೆ ಹರಡುತ್ತಿದ್ದಂತೆಯೇ ವಿವಿಧೆಡೆ ಬಂದ್ ಹಾಗೂ ಪ್ರತಿಭಟನೆಗಳು ನಡೆದವು.

ನಗರದಲ್ಲಿ ಹಲವೆಡೆ ಅಗ್ನಿಸ್ಪರ್ಶ, ಕಲ್ಲುತೂರಾಟ, ರಸ್ತೆತಡೆಗಳಿಂದಾಗಿ ಜನಜೀವನ ಅಸ್ತವ್ಯಸ್ತ ಆಗಿತ್ತು.

ಡಾ. ರಾಜ್‌ಕುಮಾರ್ ಮತ್ತು ಅವರ ಪತ್ನಿ ಪಾರ್ವತಮ್ಮ ರಾಜ್‌ಕುಮಾರ್ ಅವರು ಕುಟುಂಬದ ಸದಸ್ಯರ ಜೊತೆಯಲ್ಲಿ ಶುಕ್ರವಾರದಿಂದ ರಾಜ್ಯದ ಗಡಿಗೆ ಹೊಂದಿಕೊಂಡಿರುವ ತಮಿಳುನಾಡಿನ ತಾಳವಾಡಿ ಬಳಿಯ ಗಾಜನೂರು ಗ್ರಾಮದಲ್ಲಿ ಇರುವ ತಮ್ಮ ತೋಟದ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು.

- **ಕಾಶ್ಮೀರ: 7 ಸೈನಿಕರ ಹತ್ಯೆ**

ಶ್ರೀನಗರ, ಜುಲೈ 31 (ಪಿಟಿಐ)– ಕಳೆದ ವಾರ ಹಿಜಬುಲ್ ಮುಜಾಹಿದ್ದೀನ್ ಕದನ ವಿರಾಮ ಘೋಷಿಸಿದ ಮೇಲೆ ಇದೇ ಮೊದಲ ಬಾರಿಗೆ ಶಸ್ತ್ರಸಜ್ಜಿತ ಉಗ್ರರು, ಕಳೆದ ರಾತ್ರಿ ಉತ್ತರ ಕಾಶ್ಮೀರದ ಸೈನಿಕ ಶಿಬಿರದ ಮೇಲೆ ಪ್ರಮುಖ ದಾಳಿ ನಡೆಸಿ 7 ಸೈನಿಕರನ್ನು ಕೊಂದು ಹಾಕಿದ್ದಾರೆ. ಇತರೆ 7 ಮಂದಿ ಗಾಯಗೊಂಡಿದ್ದಾರೆ

75 ವರ್ಷಗಳ ಹಿಂದೆ

ಮಂಗಳವಾರ, 1-8-1950

- **ಟಿ.ಎ. ಬಷಿರುದ್ದೀನ್‌ರವರಿಗೆ 2 ವರ್ಷ ಕಠಿಣ ಶಿಕ್ಷೆ– ಜುಲ್ಮಾನೆ**

ಬೆಂಗಳೂರು, ಜುಲೈ 31– ಮನೆ ಬಾಡಿಗೆ ಹತೋಟಿ ಅಧಿಕಾರಿ ಜನಾಬ್ ಟಿ.ಎ. ಬಷಿರುದ್ದೀನ್ ಅಹಮದ್ ಅವರ ಮೇಲಿನ ಲಂಚ ತಿಂದ ಆಪಾದನೆ ಮೊಕದ್ದಮೆಯ ಬಗ್ಗೆ ಫಸ್ಟ್ ಅಡಿಷನಲ್ ಸೆಷನ್ಸ್ ಜಡ್ಜ್ ಕೆ.ಆರ್. ತಿಮ್ಮರಾಯಶೆಟ್ಟಿ ಅವರು ಇಂದು ತೀರ್ಪಿತ್ತು, ಆಪಾದಿತರಿಗೆ 2 ವರ್ಷ ಕಠಿಣ ಶಿಕ್ಷೆ ಮತ್ತು ಒಂದು ಸಾವಿರ ರೂ. ಜುಲ್ಮಾನೆ, ತಪ್ಪಿದಲ್ಲಿ ಮತ್ತೆ 6 ತಿಂಗಳ ಕಠಿಣ ಶಿಕ್ಷೆ ವಿಧಿಸಿದರು.

ನ್ಯಾಯಾಧೀಶರು ಐಪಿಸಿ 161 ಮತ್ತು ಲಂಚ ನಿರೋಧ ಶಾಸನದ ಕ್ಲಾಸ್ 5(1) ಡಿ ರೀತ್ಯಾ ಎರಡು ಆಪಾದನೆಗಳಿಗೂ ಶಿಕ್ಷೆ ವಿಧಿಸಿ, ತೀರ್ಪಿತ್ತರು.

ಕಲಿಕೆಯಿಲ್ಲದ ಪರೀಕ್ಷೆ ನಿರರ್ಥಕ



ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

> ಪರೀಕ್ಷಾ ಕ್ರಮದ ಪುನರ್ ವಿನ್ಯಾಸದಿಂದ ಶಿಕ್ಷಣದ ಗುಣಮಟ್ಟ ಸುಧಾರಿಸುವುದಿಲ್ಲ. ವಿದ್ಯಾರ್ಥಿಯ ಸಮಗ್ರ ವ್ಯಕ್ತಿತ್ವ ವಿಕಸನ, ಶಿಕ್ಷಕರ ಶೈಕ್ಷಣಿಕ ಸ್ವಾತಂತ್ರ್ಯ, ಶಾಲೆಗಳ ನಿರ್ಧಾರಾತ್ಮಕ ಶಕ್ತಿ, ಮತ್ತು ಅಗತ್ಯ ಮೂಲಸೌಕರ್ಯಗಳ ಪೂರೈಕೆ – ಇವೆಲ್ಲವನ್ನೂ ಒಟ್ಟಿಗೆ ನೋಡಬೇಕಿದೆ. ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಇದು ನಿಜವಾದ ಹೆಜ್ಜೆ.

ಕಳೆದ ಐದಾರು ವರ್ಷಗಳಿಂದ ಕರ್ನಾಟಕದಲ್ಲಿ ಶಾಲಾ ಶಿಕ್ಷಣ ವರ್ಷದಿಂದ ವರ್ಷಕ್ಕೆ ಅಧೋಗತಿಗೆ ತಲುಪುತ್ತಿರುವುದು, ಶಿಕ್ಷಣ ಇಲಾಖೆಯ ತೀರ್ಮಾನ ಮತ್ತು ಕಾರ್ಯಕ್ರಮಗಳಿಂದ ಸಾಬೀತಾಗಿದೆ. ಕೋವಿಡ್ ಸಾಂಕ್ರಾಮಿಕ ರೋಗದಿಂದ ಉಂಟಾದ ಬಿಕ್ಕಟ್ಟಿನ ಅವಧಿ (2019–2023), ಇಡೀ ಶಿಕ್ಷಣ ವ್ಯವಸ್ಥೆಯನ್ನು ಹತ್ತಾರು ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ದಿತು. ಕೊರೊನಾ ಅವಧಿ, ಅಲ್ಲಿಯವರೆಗೆ ಸಾಧಿಸಿದ್ದ ಸ್ವಲ್ಪಮಟ್ಟಿಗಿನ ಯಶಸ್ಸನ್ನೂ ಕಸಿಯಿತು. ಇದೇ ಸಂದರ್ಭದಲ್ಲಿ ಸಾಂಕ್ರಾಮಿಕ ರೋಗವು, ಶಿಕ್ಷಣ ವ್ಯವಸ್ಥೆಯ ಸಮರ್ಥ ನಿರ್ವಹಣೆಯಲ್ಲಿ ವಿವಿಧ ಪಾಲುದಾರರು, ಅಂದರೆ – ಸರ್ಕಾರ, ಶಿಕ್ಷಣ ಸಂಸ್ಥೆಗಳು, ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಹಯೋಗ ಮತ್ತು ಪಾಲುದಾರಿಕೆಗಳ (ಭಾರತದ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು) ಮಹತ್ವವನ್ನು ಎತ್ತಿ ತೋರಿಸಿತು (ಮೆಹ್ತ, 2021). ಇದರಿಂದ ಹೆಚ್ಚೇನೂ ಪಾಠ ಕಲಿಯದ ನಾವು, ಮಾನವನಿಗೆ ಮಾರಕವಾಗಿದ್ದ ಕೊರೊನಾವನ್ನು ಲೆಕ್ಕಿಸದೆ, ಒಂದು ನಿರ್ದಿಷ್ಟ ನಂಬಿಕೆಯ ರಾಜಕೀಯ ಅವಶ್ಯಕತೆಗೆ ಶಿಕ್ಷಣವನ್ನು ಬಳಸಿಕೊಂಡು, ಇಡೀ ಶಿಕ್ಷಣದ ಉದ್ದೇಶ ಮತ್ತು ಕಲಿಕಾ ವಿಷಯವನ್ನು ಪಲ್ಲಟಗೊಳಿಸಿದೆವು. ಆ ಮೂಲಕ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರವನ್ನು ಅಧೋಗತಿಗೆ ಕೊಂಡೊಯ್ದಿದ್ದು ಇತಿಹಾಸ.

ಶಿಕ್ಷಣವನ್ನು ಉತ್ತಮ ಸ್ಥಿತಿಗೆ ತರುವ ಭರವಸೆಯ ಮೂಲಕ ಅಧಿಕಾರಕ್ಕೆ ಬಂದ ಹೊಸ ಸರ್ಕಾರ, ಕಳೆದ ಎರಡು ವರ್ಷಗಳಲ್ಲಿ ಉತ್ತಮ ಸ್ಥಿತಿಗೆ ತರುವುದು ಇರಲಿ, ಮನಸೋಇಚ್ಛೆ ಬದಲಾವಣೆಗಳ ಮೂಲಕ ಶಿಕ್ಷಣದ ಮೂಲ ಉದ್ದೇಶವನ್ನೇ ಮೂಲೆಗುಂಪಾಗಿಸಿದೆ. ರಾಷ್ಟ್ರೀಯ ಕಾಂಗ್ರೆಸ್, ಕಳೆದ ಲೋಕಸಭಾ ಚುನಾವಣೆಯ (2024) ಪ್ರಣಾಳಿಕೆಯಲ್ಲಿ– ಶಿಕ್ಷಣ ಒಂದು ಸಾರ್ವಜನಿಕ ಒಳಿತಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಗೂ ರಾಜ್ಯವು ಒದಗಿಸಲೇಬೇಕಾದ ಗುಣಮಟ್ಟದ ಉಚಿತ ಶಿಕ್ಷಣದ ಹಕ್ಕಿದೆ, ಶಾಲಾ– ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಪ್ರಧಾನವಾಗಿ ಸಾರ್ವಜನಿಕ ಸಂಪನ್ಮೂಲಗಳಿಂದ ನಿಧಿಯನ್ನು ಪಡೆಯುವ ಸಾರ್ವಜನಿಕ ಸಂಸ್ಥೆಗಳಾಗಿರಬೇಕು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಪೂರಕ ಪಾತ್ರವನ್ನು ವಹಿಸುತ್ತವೆ ಎಂದು ನಾವು ಗುರುತಿಸುತ್ತೇವೆ ಎಂಬ ಮುಂಗಾಣ್ಕೆಯ ಆಶಯವನ್ನು ವ್ಯಕ್ತಪಡಿಸಿತ್ತು. ರಾಜ್ಯ ಸರ್ಕಾರ ಕನಿಷ್ಠ ಆ ಮುಂಗಾಣ್ಕೆಯನ್ನು ಗುರಿಯನ್ನಾಗಿಸಿಕೊಂಡು ಕಾರ್ಯ ನಿರ್ವಹಿಸಬಹುದಿತ್ತು.

ಶಿಕ್ಷಣ ಎನ್ನುವುದು ಬರೀ ಸಾಕ್ಷರತೆ ಮತ್ತು ಅದು ಸಾಧಿಸಿದ ಪ್ರಗತಿಯನ್ನು ಅಳೆಯುವ ಒಂದಷ್ಟು ಪರೀಕ್ಷೆಗಳನ್ನು ನಡೆಸುವ ಪ್ರಕ್ರಿಯೆಯಲ್ಲ. ಒಂದು ರಾಜ್ಯದಲ್ಲಿನ ಶಿಕ್ಷಣ ಮತ್ತು ಕಲಿಕಾ ವ್ಯವಸ್ಥೆ, ಅಲ್ಲಿನ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಸೂಚ್ಯಂಕ. ಸಂವಿಧಾನದ ಆಶಯದಂತೆ ಸಮಸಮಾಜವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಗೆ ಅಗತ್ಯ ಮಾನವ ಸಂಪನ್ಮೂಲಗಳ ರೂಪರೇಷೆಯನ್ನು ನಿರ್ಧರಿಸುವ ದಿಕ್ಸೂಚಿ.

ಇತ್ತೀಚೆಗೆ, ಗುಣಮಟ್ಟದ ಸುಧಾರಣೆಯೆಂದರೆ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸುವುದು (ಈಗ ನಾವು ವರ್ಷಕ್ಕೆ ಮೂರು ಸಾರ್ವತ್ರಿಕ ಪರೀಕ್ಷೆಗಳನ್ನು ನಡೆಸುತ್ತೇವೆ); ಮೌಲ್ಯಮಾಪನ ವಿಧಾನಗಳನ್ನು ಮತ್ತಷ್ಟು ಸಂಕೀರ್ಣಗೊಳಿಸುವುದು; (ಉದಾಹರಣೆಗೆ, ಶಿಕ್ಷಣ ಇಲಾಖೆ ಹೊಸದಾಗಿ ಜಾರಿಗೊಳಿಸಿರುವ ಪಾಠ ಆಧಾರಿತ ಮೌಲ್ಯಮಾಪನದ– ಎಲ್‌ಬಿಎ– ಅನ್ವಯ, ಶಿಕ್ಷಕರು ಹೇಳುವಂತೆ 4ರಿಂದ 8ನೇ ತರಗತಿಯವರೆಗೆ 364 ಪಾಠಗಳಿದ್ದು, 364 ಪರೀಕ್ಷೆ, 364 ಮೌಲ್ಯಮಾಪನ, 364 ವಿಶ್ಲೇಷಣೆ ಹಾಗೂ 364 ದಾಖಲೀಕರಣ ಪ್ರಕ್ರಿಯೆ ಮಾಡಬೇಕಾಗುತ್ತದೆ) ಮತ್ತು ಅಂಕ ಕೇಂದ್ರಿತ ಫಲಿತಾಂಶವೇ ಗುಣಮಟ್ಟ ಎಂದು ಪರಿಭಾವಿಸಿ ಅಂಕದಾಟವಾಡುವುದು; ಅಂದರೆ, ವಿದ್ಯಾರ್ಥಿ 35 ಅಂಕ ಗಳಿಸಬೇಕೋ ಅಥವಾ 33 ಅಂಕ ಸಾಕೋ? 33ರಲ್ಲಿ ಆಂತರಿಕ ಮೌಲ್ಯಮಾಪನದ ಅಂಕವೆಷ್ಟು, ಬಾಹ್ಯ ಮೌಲ್ಯಮಾಪನದ ಅಂಕವೆಷ್ಟು? ಈ ಅಂಶಗಳೇ ಶಿಕ್ಷಣದ ಗುಣಮಟ್ಟದ ಮಾನದಂಡಗಳಾಗಿ ಇರುವುದು ಆತಂಕಕಾರಿ.

ನಕಾರಾತ್ಮಕ ಬೆಳವಣಿಗೆಗಳ ಬಗ್ಗೆ ಯುನೆಸ್ಕೊ, 'ನಮ್ಮ ಭವಿಷ್ಯವನ್ನು ಒಟ್ಟಾಗಿ ಮರುಕಲ್ಪಿಸಿಕೊಳ್ಳಲು: ಶಿಕ್ಷಣಕ್ಕಾಗಿ ಹೊಸ ಸಾಮಾಜಿಕ ಒಪ್ಪಂದ' ಎಂಬ ಪ್ರಕಟಣೆಯಲ್ಲಿ ವಿವರವಾಗಿ ಚರ್ಚಿಸಿದೆ. ಶಿಕ್ಷಣ, ಸಮಾಜದ ಒಳಿತಿಗಾಗಿ ಸಹಕರಿಸಲು ಸಮಾಜದ ಸದಸ್ಯರ ನಡುವಿನ ಒಂದು ಸೂಚ್ಯ ಅಂತರ್ಗತ ಸಾಮಾಜಿಕ ಒಪ್ಪಂದ. ಈ ಸಾಮಾಜಿಕ ಒಪ್ಪಂದ ಕೇವಲ ಶಿಕ್ಷಣದ ಒಂದು ವಹಿವಾಟು ಆಗಿರದೆ, ಶಾಸನಬದ್ಧವಾದ ಮತ್ತು ಸಾಂಸ್ಕೃತಿಕವಾಗಿ ಹುದುಗಿಸಲಾದ ರೂಢಿ, ಬದ್ಧತೆ ಮತ್ತು ಸಾಮಾಜಿಕ ತತ್ವಗಳನ್ನು ಪ್ರತಿಬಿಂಬಿಸುತ್ತದೆ. ಸಾರ್ವಜನಿಕ ಉದ್ದೇಶದ ಒಪ್ಪಿತ ಮುಂಗಾಣ್ಕೆ ಶಿಕ್ಷಣದ ಪ್ರಾರಂಭಿಕ ಹೆಜ್ಜೆ.

20ನೇ ಶತಮಾನದಲ್ಲಿ, ಸಾರ್ವಜನಿಕ ಶಿಕ್ಷಣವು ಮಕ್ಕಳಿಗೆ ಕಡ್ಡಾಯ ಶಾಲಾ ಶಿಕ್ಷಣದ ಮೂಲಕ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿಸಿ, ಪೌರತ್ವ ಮತ್ತು ಅಭಿವೃದ್ಧಿ ಪ್ರಯತ್ನಗಳನ್ನು ಬೆಂಬಲಿಸುವ ಗುರಿಯನ್ನು ಹೊಂದಿತ್ತು. ಇಂದು, 21ನೇ ಶತಮಾನದಲ್ಲಿ ಮಾನವೀಯತೆ ಹಾಗೂ ಮಾನವೀಯ ಮೌಲ್ಯಗಳು ದೊಡ್ಡ ಬಿಕ್ಕಟ್ಟಿನಲ್ಲಿವೆ. ಜೀವರಾಶಿಯನ್ನು ಬೆಂಬಲಿಸುವ ಏಕೈಕ ಗ್ರಹದ ಭವಿಷ್ಯಕ್ಕೆ ಗಂಭೀರ ಅಪಾಯಗಳು ಎದುರಾಗಿವೆ. ಸಾಮಾಜಿಕ, ಆರ್ಥಿಕ ಅಸಮಾನತೆ ದಿನದಿಂದ ದಿನಕ್ಕೆ ದೊಡ್ಡದಾಗುತ್ತಿದೆ. ಈ ಎಲ್ಲಾ ಸವಾಲುಗಳನ್ನು ಎದುರಿಸಲು ನಾವು ತುರ್ತಾಗಿ ಶಿಕ್ಷಣವನ್ನು ಮರುಶೋಧಿಸಬೇಕಿದೆ. ಈ ಹಿನ್ನೆಲೆಯಲ್ಲಿ, ನಾವು ಶಿಕ್ಷಣದ ಬಗ್ಗೆ ಕೇಳಬೇಕಾದ ಮೂರು ಅಗತ್ಯ ಪ್ರಶ್ನೆಗಳಿವೆ: ನಾವು ಯಾವುದನ್ನು ಮುಂದುವರಿಸಬೇಕು? ಏನನ್ನು ಕೈಬಿಡಬೇಕು? ಹೊಸದಾಗಿ ಏನನ್ನು ಸೃಜನಾತ್ಮಕವಾಗಿ ಆವಿಷ್ಕರಿಸಬೇಕು? (ಯುನೆಸ್ಕೊ, 2021).

ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ನಡೆಸಲಾದ ಬಹುಪಾಲು ಅಧ್ಯಯನಗಳು– ಪರೀಕ್ಷೆಗಳು ಕಂಠಪಾಠ ಉತ್ತೇಜಿಸಿವೆ, ಒತ್ತಡವನ್ನು ಹೆಚ್ಚಿಸಿವೆ ಮತ್ತು ಕಲಿಕೆಯ ಸೃಜನಶೀಲತೆಯನ್ನು ನಿರ್ಬಂಧಿಸಿವೆ ಎಂದು ಹೇಳಿವೆ. ಜೊತೆಗೆ, ಪರೀಕ್ಷೆಗಳು ಗ್ರಾಮೀಣ ಹಾಗೂ ನಗರ ವಿದ್ಯಾರ್ಥಿಗಳ ನಡುವೆ, ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ವಿದ್ಯಾರ್ಥಿಗಳ ನಡುವೆ ಕಂದರ ಸೃಷ್ಟಿಸಿವೆ. ಗುಣಮಟ್ಟದ ಕಲಿಕೆ ಕೇವಲ ಮೌಲ್ಯಮಾಪನಕ್ಕೆ ಸೀಮಿತವಾದ ವಿಷಯವಲ್ಲ. ಅಂಕಗಳಿಗೆ ಸೀಮಿತವೂ ಅಲ್ಲ. ಪರಿಣಾಮಕಾರಿ ಗುಣಾತ್ಮಕ ಕಲಿಕೆಯೆಂದರೆ; ಕಲಿತ ವಿಷಯವನ್ನು ಜೀವನದಲ್ಲಿ ಬಳಸುವ ಸಾಮರ್ಥ್ಯ, ಪ್ರಜಾಸತ್ತಾತ್ಮಕ ಸಂಭಾಷಣೆ, ಶಿಕ್ಷಕ– ವಿದ್ಯಾರ್ಥಿಗಳು– ಸಮುದಾಯದ ನಡುವಿನ ಸಹಭಾಗಿತ್ವ, ಸಹಬಾಳ್ವೆ, ಆಲೋಚನೆ ಮತ್ತು ಪ್ರಶ್ನಿಸುವ ಸಾಮರ್ಥ್ಯ, ನ್ಯಾಯ–ಸತ್ಯದ ಪರ ನಿಲ್ಲುವುದು. ಇದು ಸಾಧ್ಯವಾಗಬೇಕಾದರೆ ಸೃಜನಶೀಲ ಕಲಿಕೆಗೆ ಉತ್ತೇಜನ, ಸಂವೇದನಾಶೀಲತೆ ಮತ್ತು ಮಾನವೀಯ ಮೌಲ್ಯಬೋಧನೆ ಕಲಿಕೆಯ ವಿಧಾನವಾಗಬೇಕು. ಶಿಕ್ಷಣವು ಒಂದು ಮಾನವೀಯ ಸಮಸಮಾಜವನ್ನು ನಿರ್ಮಿಸಲು ವಿದ್ಯಾರ್ಥಿಗಳನ್ನು ಅಣಿಗೊಳಿಸುತ್ತಿದೆಯೇ ಎಂಬುದು ಮೌಲ್ಯಮಾಪನ ಆಗಬೇಕು.

ಶಿಕ್ಷಕರನ್ನು ಬರೀ ಕಲಿಕೇತರ ಕೆಲಸ ನಿರ್ವಹಿಸುವ ಸರ್ಕಾರಿ ನೌಕರರಂತೆ ನೋಡದೆ– ಕಲಿಕೆ, ಕ್ರಿಯಾ ಸಂಶೋಧನೆ, ಕಲಿಕೆಯನ್ನು ಉದ್ದೀಪಿಸುವ ಮಾರ್ಗದರ್ಶಕರಾಗಿ ಮತ್ತು ಕಲಿಕೆಯನ್ನು ಪ್ರಜಾಸತ್ತಾತ್ಮಕವಾಗಿ ಕೊಡು–ಕೊಳ್ಳುವಿಕೆ ಮೂಲಕ ಸಮನ್ವಯಗೊಳಿಸುವ ಸಂವಹನಕಾರರಾಗಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಡಬೇಕು. ಎಲ್ಲವನ್ನೂ ಮೇಲಿಂದಲೇ ತೀರ್ಮಾನಿಸಿ, ಶಿಕ್ಷಕರನ್ನು ಅನುಷ್ಠಾನಗೊಳಿಸುವ ಯಂತ್ರಗಳಂತೆ ನಡೆಸಿಕೊಳ್ಳುವುದನ್ನು ಮೊದಲು ನಿಲ್ಲಿಸಬೇಕು. ಶಿಕ್ಷಕರ ಮೇಲಿನ ಕನಿಷ್ಠ ನಂಬಿಕೆ ಹಾಗೂ ವಿಶ್ವಾಸ ಕಲಿಕಾ ಪ್ರಕ್ರಿಯೆಗೆ ವೇಗವರ್ಧಕವಾಗುವುದರಲ್ಲಿ ಸಂದೇಹವಿಲ್ಲ.

ಡಾರ್ಲಿಂಗ್ ಹ್ಯಾಮ್ಮಂಡ್ ಅವರ ಪ್ರಕಾರ, ಫಿನ್‌ಲೆಂಡ್, ಕೆನಡಾ, ಜಪಾನ್ ಮುಂತಾದ ದೇಶಗಳು ಶಿಕ್ಷಕರ ಸಬಲೀಕರಣಕ್ಕಾಗಿ ಮಾಡಿರುವ ಪ್ರಯತ್ನಗಳು ಅಲ್ಲಿನ ಶಿಕ್ಷಣದ ಗುಣಮಟ್ಟವನ್ನು ಅತ್ಯುತ್ತಮ ಮಟ್ಟಕ್ಕೆ ಕೊಂಡೊಯ್ದಿವೆ. ಭಾರತದಲ್ಲಿ ಸರ್ಕಾರಿ ಶಿಕ್ಷಕರನ್ನು ನಿರಂತರ ಕಲಿಕೇತರ ಕೆಲಸದ ಒತ್ತಡದಲ್ಲಿ ಇಟ್ಟಿರುವ ಕಾರಣ, ಅದು ಮಕ್ಕಳ ಗುಣಾತ್ಮಕ ಶಿಕ್ಷಣದ ಮೇಲೆ ನಕಾರಾತ್ಮಕ ಪ್ರಭಾವ ಬೀರಿದೆ.

ಇಲ್ಲಿ ಪ್ರಸ್ತಾಪಿಸಲೇಬೇಕಾದ ಮತ್ತೊಂದು ಮುಖ್ಯ ವಿಷಯ, ಕಲಿಕೆಗೆ ಪೂರಕವಾದ ಮೂಲಸೌಕರ್ಯಗಳಿಲ್ಲದೆ ಯಾವುದೇ ಗುಣಮಟ್ಟದ ಕನಸು ಸಾಧ್ಯವಿಲ್ಲ ಎನ್ನುವುದು. ಕನಿಷ್ಠ ಸೌಲಭ್ಯಗಳಾದ, ಉತ್ತಮ ಸ್ಥಿತಿಯಲ್ಲಿನ ಕಟ್ಟಡ, ಅಗತ್ಯ ಸಂಖ್ಯೆಯ ಶಿಕ್ಷಕರು, ಶುದ್ಧ ಕುಡಿಯುವ ನೀರು, ಶೌಚಾಲಯ, ವಿದ್ಯುಚ್ಛಕ್ತಿ, ಆಟದ ಮೈದಾನ, ಗುಣಮಟ್ಟದ ಪಠ್ಯಪುಸ್ತಕ ಹಾಗೂ ವರ್ಕ್ ಪುಸ್ತಕ, ಪಾಠೋಪಕರಣ, ಗ್ರಂಥಾಲಯ, ಪ್ರಯೋಗಾಲಯ, ಪೀಠೋಪಕರಣ, ಕ್ರೀಡಾ ಸಾಮಗ್ರಿ, ಇತ್ಯಾದಿಗಳು ಕಲಿಕಾ ಸ್ವರೂಪ ಮತ್ತು ಗುಣಮಟ್ಟವನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಮೂಲಾಧಾರಗಳಾಗುತ್ತವೆ. ಶಿಕ್ಷಣ ಹಕ್ಕು ಕಾಯ್ದೆಯಲ್ಲಿ (2009) ಇವೆಲ್ಲವನ್ನು ಸವಿವರವಾಗಿ ನಿಗದಿಪಡಿಸಲಾಗಿದೆ. ಈ ಅಂಶಗಳನ್ನು ಸರಿಪಡಿಸದೆ, ಕೇವಲ ಪರೀಕ್ಷೆಗಳ ಸಂಖ್ಯೆಯ ಹೆಚ್ಚಳ, ಶೇಕಡಾವಾರು ಅಂಕದ ಇಳಿಕೆ, ಪಾಠ ಆಧಾರಿತ ಮೌಲ್ಯಮಾಪನ, ಪ್ರಶ್ನೆಪತ್ರಿಕೆಯನ್ನು ಸುಲಭಗೊಳಿಸುವುದು, ಶಿಕ್ಷಕರ ಮೇಲೆ ಅನಗತ್ಯ ಪ್ರಹಾರ ಮಾಡುವುದರಿಂದ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲಾಗದು.



ವಾಚಕರ ವಾಣಿ

ಅತಿರೇಕದ ಅಭಿಮಾನ ತರವಲ್ಲ

ಸಾಮಾಜಿಕ ಜಾಲತಾಣಗಳಲ್ಲಿ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿರುವುದು ಕಳವಳಕಾರಿ. ರಮ್ಯಾ ಅವರಂಥ ಸೆಲೆಬ್ರಿಟಿಗೂ ಕೆಟ್ಟದ್ದಾಗಿ ಸಂದೇಶ ಕಳುಹಿಸುತ್ತಾರೆಂದರೆ, ಸಾಮಾನ್ಯ ಹೆಣ್ಣುಮಕ್ಕಳ ಕಥೆ ಏನಾಗಬೇಡ? ತಮ್ಮ ಮೆಚ್ಚಿನ ನಟನ ಮೇಲಿರುವ ಅಭಿಮಾನವನ್ನು ಈ ಬಗೆಯಲ್ಲಿ ವ್ಯಕ್ತಪಡಿಸುವುದು ಸರಿಯಲ್ಲ. ಇಂತಹ ಅತಿರೇಕದ ಅಭಿಮಾನವೇ ಪ್ರಾಣಕ್ಕೆ ಅಪಾಯವಾಗಿ ಪರಿಣಮಿಸುವುದುಂಟು. ಒಬ್ಬರ ಮೇಲಿನ ಅಭಿಮಾನ ಇನ್ನೊಬ್ಬರಿಗೆ ತೊಂದರೆಯಾಗದಂತೆ ಎಚ್ಚರವಹಿಸುವುದು ಅಗತ್ಯ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ರೈಲ್ವೆ ಯೋಜನೆಗಳ ಸುತ್ತಮುತ್ತ

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು, ಕರ್ನಾಟಕದ ರೈಲ್ವೆ ಯೋಜನೆಗಳ 'ಆಮೆನಡಿಗೆ'ಯ ಬಗ್ಗೆ ಲೋಕಸಭೆಯಲ್ಲಿ ಮಾಹಿತಿ ನೀಡಿದ್ದಾರೆ (ಪ್ರ.ವಾ., ಜುಲೈ 31). 'ಶೂನ್ಯ ಪ್ರಗತಿ' ದಾಖಲಿಸಿರುವ ನಾಲ್ಕು ಯೋಜನೆಗಳು ಸೇರಿ 8,280 ಎಕರೆ ಭೂಸ್ವಾಧೀನ ಬಾಕಿಯಿದೆ ಎಂದು ಹೇಳಿದ್ದಾರೆ. ಹಾಗಿದ್ದರೆ ಈ ಯೋಜನೆಗಳು ಪೂರ್ಣಗೊಳ್ಳಲು ಇನ್ನೆಷ್ಟು ದಶಕಗಳು ಬೇಕಾಗಬಹುದೊ?

ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ವೇಳೆ ರಾಜ್ಯ ಸರ್ಕಾರದಿಂದ ರೈಲ್ವೆ ಯೋಜನೆಗೆ ಬೇಕಾದ ಭೂಮಿ ನೀಡಿಕೆ ಹಾಗೂ ಯೋಜನಾ ವೆಚ್ಚದಲ್ಲಿ ಶೇ 50ರಷ್ಟು ಅನುದಾನ ಒದಗಿಸಿ, ಇನ್ನುಳಿದ ಅನುದಾನವನ್ನು ರೈಲ್ವೆ ಸಚಿವಾಲಯದಿಂದ ಭರಿಸಿ ಯೋಜನೆ ಪೂರ್ಣಗೊಳಿಸುವ ಕುರಿತು ಒಪ್ಪಂದ ಮಾಡಿಕೊಂಡರು. ಈ ಒಪ್ಪಂದವೇ ರಾಜ್ಯದ ರೈಲ್ವೆ ಅಭಿವೃದ್ಧಿಗೆ ಮುಳುವಾದಂತಾಗಿದೆ.

ರಾಜ್ಯದ ಖಜಾನೆಯಲ್ಲಿರುವ ಹಣ ಭಾಗ್ಯವಂತರಿಗೇ ಸಾಕಾಗುತ್ತಿಲ್ಲ. ಇನ್ನು ರೈಲ್ವೆ ಯೋಜನೆಗಳಿಗೆ ಅನುದಾನ ನೀಡುವುದು ಸಾಧ್ಯವೇ? ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಎಸ್.ಎಂ. ಕೃಷ್ಣ ಅವರು ಮಾಡಿಕೊಂಡಿದ್ದ ಒಪ್ಪಂದವನ್ನು ಹಿಂಪಡೆದು, ರೈಲ್ವೆ ಸಚಿವಾಲಯವೇ ಸಂಪೂರ್ಣ ವೆಚ್ಚ ಭರಿಸಿ ಯೋಜನೆಗಳನ್ನು ಪೂರ್ಣಗೊಳಿಸುವ ಕುರಿತಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಬೇಕಿದೆ.

ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

ರಾಜಕೀಯ ಬಿಡಿ; ಗೊಬ್ಬರ ಕೊಡಿ

ರಾಜ್ಯದ ಹಲವು ಜಿಲ್ಲೆಗಳಲ್ಲಿ ಯೂರಿಯಾಕ್ಕಾಗಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಕೆಲವೆಡೆ ದಿನವಿಡೀ ಸರತಿ ಸಾಲಿನಲ್ಲಿ ನಿಂತರೂ ರಸಗೊಬ್ಬರ ಸಿಗುತ್ತಿಲ್ಲ. ಇನ್ನೊಂದೆಡೆ ಗುಣಮಟ್ಟದ ಬಿತ್ತನೆಬೀಜವೂ ಲಭಿಸುತ್ತಿಲ್ಲ. ರೈತರು ಇಷ್ಟೆಲ್ಲಾ ಸಮಸ್ಯೆ ಎದುರಿಸುತ್ತಿದ್ದರೂ ಜನಪ್ರತಿನಿಧಿಗಳು ಮಾತ್ರ ಸ್ಪಂದಿಸುತ್ತಿಲ್ಲ. ಕೇಂದ್ರ ಸಚಿವರು, ರಾಜ್ಯ ಸಚಿವರು, ಸಂಸದರು, ಶಾಸಕರು ರಾಜಕೀಯ ಆರೋಪ– ಪ್ರತ್ಯಾರೋಪ ಮಾಡಿದರೆ ರೈತರ ಸಮಸ್ಯೆ ಬಗೆಹರಿಯು ತ್ತದೆಯೇ? ರೈತರ ಹೆಸರಿನಲ್ಲಿ ರಾಜಕೀಯ ಮಾಡುವುದನ್ನು ಬದಿಗೊತ್ತಿ, ಸಕಾಲದಲ್ಲಿ ಗೊಬ್ಬರ ಪೂರೈಸಲು ಕ್ರಮವಹಿಸಬೇಕಿದೆ.

ನಬಿ ಆರ್.ಬಿ. ದೋಟಿಹಾಳ, ಕುಷ್ಟಗಿ

'ಮನೆ ಮನೆಗೆ ಪೊಲೀಸ್' ಶ್ಲಾಘನೀಯ

ಗೃಹ ಸಚಿವ ಜಿ. ಪರಮೇಶ್ವರ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ ಅವರ ಸೂಚನೆ ಮೇರೆಗೆ ರಾಜ್ಯದ ಎಲ್ಲಾ ಜಿಲ್ಲೆಯಲ್ಲೂ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಡಿ 'ಮನೆ ಮನೆಗೆ ಪೊಲೀಸ್' ಎಂಬ ವಿನೂತನ ಕಾರ್ಯಕ್ರಮಕ್ಕೆ ಚಾಲನೆ ನೀಡಿರುವುದು ಶ್ಲಾಘನೀಯ. ಉತ್ತಮ ಸಮಾಜ ನಿರ್ಮಾಣದ ಆಶಯಕ್ಕೆ ಈ ಕಾರ್ಯಕ್ರಮ ಪೂರಕವಾಗಿದೆ.

ಪೊಲೀಸ್ ಠಾಣೆ ಹಾಗೂ ಪೊಲೀಸರೆಂದರೆ ಸಾರ್ವಜನಿಕರು ಭಯಪಡುವುದೇ ಹೆಚ್ಚು. ಪೊಲೀಸರೆಂದರೆ ಸದಾಕಾಲವೂ ಜನರ ಹಿತರಕ್ಷಣೆ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ನಿಂತಿರುವ ರಕ್ಷಣಾ ಪಡೆ ಎಂಬ ಆತ್ಮಸ್ಥೈರ್ಯ ತುಂಬುತ್ತಿರುವುದು ಒಳ್ಳೆಯ ಬೆಳವಣಿಗೆ. ಜನಸಾಮಾನ್ಯರು ಮತ್ತು ಪೊಲೀಸರ ನಡುವಿನ ಬಾಂಧವ್ಯ ಉತ್ತಮವಾಗಿದ್ದರೆ, ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಬೀಳಲಿದೆ.

ಪವನ್ ಜಯರಾಂ, ಚಾಮರಾಜನಗರ

ಉದ್ಯೋಗ ಸೃಷ್ಟಿ ಮರೀಚಿಕೆ

ಜನಸಂಖ್ಯೆಯಲ್ಲಿ ಚೀನಾವನ್ನು ಹಿಂದಿಕ್ಕಿರುವ ಭಾರತವು ಅಗ್ರಸ್ಥಾನದಲ್ಲಿದೆ. ಆದರೆ, ಜನಸಂಖ್ಯೆ ಏರಿಕೆಗೆ ಅನುಗುಣವಾಗಿ ಉದ್ಯೋಗ ಸೃಷ್ಟಿಸುವ ಕೆಲಸ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ನಡೆಯುತ್ತಿಲ್ಲ. ಕೇವಲ ಚುನಾವಣೆ ವೇಳೆ ಹಾಗೂ ಪಕ್ಷದ ಪ್ರಣಾಳಿಕೆಯಲ್ಲಿ ಕೋಟಿ ಕೋಟಿ ಉದ್ಯೋಗ ಸೃಷ್ಟಿಸುತ್ತೇವೆಂಬ ಸುಳ್ಳು ಆಶ್ವಾಸನೆ ನೀಡುವುದಕ್ಕಷ್ಟೇ ಆಳುವ ವರ್ಗ ಸೀಮಿತವಾಗಬಾರದು. ಉದ್ಯೋಗ ಕಸಿಯುವ ಕಾರ್ಯ ಎಲ್ಲ ಕ್ಷೇತ್ರದಲ್ಲೂ ನಡೆಯುತ್ತಿದೆ. ಮಾನವ ಸಂಪನ್ಮೂಲದ ಸದ್ಬಳಕೆಯ ಕೆಲಸವಂತೂ ನಡೆಯುತ್ತಿಲ್ಲ.

ಸುರೇಶ್ ಎಸ್., ವಡಗಲಪುರ

ಕಸ ವಿಲೇವಾರಿ: ವೈಜ್ಞಾನಿಕ ಕ್ರಮ ರೂಪಿಸಿ

ನಗರ ಪ್ರದೇಶಗಳಲ್ಲಿ ಕಸವನ್ನು ಮೂಲದಲ್ಲೇ ಹಸಿ ಕಸ ಮತ್ತು ಒಣ ಕಸವಾಗಿ ವಿಂಗಡಿಸಿ ನೀಡಬೇಕೆಂದು ನಗರ ಸ್ಥಳೀಯ ಸಂಸ್ಥೆಗಳಿಂದ ಧ್ವನಿವರ್ಧಕದ ಮೂಲಕ ಹೇಳಲಾಗುತ್ತದೆ. ಆದರೆ, ನಾವು ಕಸವನ್ನು ವಿಂಗಡಿಸಿ ವಾಹನಕ್ಕೆ ನೀಡಿದರೂ ಪೌರ ಕಾರ್ಮಿಕರು ಅದನ್ನು ಒಂದೆಡೆ ಸುರಿದುಕೊಳ್ಳುತ್ತಾರೆ. ಕಸ ಸಂಗ್ರಹಕ್ಕೆ ವೈಜ್ಞಾನಿಕ ವಿಧಾನ ರೂಪಿಸಿ, ಶಾಶ್ವತ ಪರಿಹಾರ ರೂಪಿಸಲು ರಾಜ್ಯ ಸರ್ಕಾರ ಮುಂದಾಗಬೇಕಿದೆ. ಹಸಿ ಕಸ ಮತ್ತು ಒಣ ಕಸಕ್ಕೆ ಪ್ರತ್ಯೇಕವಾಗಿ ವಾಹನಗಳನ್ನು ಒದಗಿಸುವುದು ಉತ್ತಮ.

ಸುನಿಲ್ ಟಿ.ಪಿ., ಮಳವಳ್ಳಿ

ಚುರುಮುರಿ



ಏನ್ ಮಹಾ ಎಸ್ಸೆಸ್ಸೆಲ್ಸಿ...

• ಬಿ.ಎನ್. ಮಲ್ಲೇಶ್

'ಏಯ್, ಬೆಳಬೆಳಿಗ್ಗೆ ಏನದು ತಾಯಿ ಮಗನ ಗದ್ಲ? ಇದೇನು ಮನೇನಾ ಲೋಕಸಭೇನಾ?' ಸಿಟ್ಟಿನಿಂದಲೇ ಬೆಡ್ ರೂಂನಿಂದ ಆಚೆ ಬಂದೆ.

'ನೋಡ್ರಿ ಇವ್ನು, ಓದ್ಕೋ ಅಂದ್ರೆ ಮೊಬೈಲ್ ನೋಡ್ತ ಕೂತಿದಾನೆ. ಈ ವರ್ಷ ಎಸ್ಸೆಸ್ಸೆಲ್ಸಿ ಬೇರೆ...' ಮಡದಿಗೆ ಕೋಪ.

'ಡೋಂಟ್ ವರಿ ಮಾಮ್, ನಿಂಗೇನು ಎಸ್ಸೆಸ್ಸೆಲ್ಸಿ ಪಾಸಾದ್ರೆ ಆತಿಲ್ಲೋ? ನೀನು ಸಿದ್ರಾಮಣ್ಣ ಶಾಸಕರಿಗೆ ಪಾಠ ಮಾಡಿದಂಗೆ ನಂಗೆ ಮಾಡಾಕೆ ಬರ್ಬೇಡ...' ಮಗ ಗುರ್ ಅಂದ.

ಅಲೆ ಇವ್ನ, ಈಗ್ಲೇ ರಾಜಕೀಯ ಮಾತಾಡ್ತಾನಲ್ಲ ಅಂತ ನಂಗೆ ಗಾಬರಿ. ಆದ್ರೂ ಡಿಕೆಶಿ ತರ ಕೂಲಾಗಿ 'ಅಮ್ಮ ಹೇಳಿದ್ರಲ್ಲಿ ಏನು ತಪ್ಪಿಲ್ಲ ಮಗಾ, ನೀನು ಮೊಬೈಲ್ ಬಿಟ್ಟು ಓದ್ಕೋ' ಅಂದೆ.

'ಅಲ್ಲೋ, ಸಿದ್ರಾಮಣ್ಣ ಎಷ್ಟ್ ಚೆನ್ನಾಗಿ ವ್ಯಾಕರಣ ಹೇಳ್ತಾರೆ. ಆಗಮಸಂಧಿ, ಲೋಪಸಂಧಿ ಇವೆಲ್ಲ ನಿಂಗೆ ಗೊತ್ತೇನೋ?' ಮಡದಿ ಕೇಳಿದಳು.

'ಗೊತ್ತು ಬಿಡಮ್ಮ, ಡಿಕೆಶಿ ಸಿ.ಎಂ ಆದ್ರೆ ಆಗಮಸಂಧಿ, ಸಿದ್ರಾಮಣ್ಣ ಸಾಹೇಬ್ರಿಗೆ ಅದು ಲೋಪಸಂಧಿ' ಎಂದ ಮಗ.

'ನೀನಿಂಗೆ ಬರೀ ಮೊಬೈಲ್ ನೋಡ್ತಿದ್ರೆ ಎಸ್ಸೆಸ್ಸೆಲ್ಸಿ ಹೆಂಗೆ ಪಾಸಾಗ್ತೀಯೋ? ಐಎಎಸ್ ಮಾಡಲ್ವೇನೋ?'

'ಮಾಮ್, ಎಸ್ಸೆಸ್ಸೆಲ್ಸಿಲಿ 13 ಮಾರ್ಕ್ಸ್ ತಗಳ್ಳೋದು ದೊಡ್ಡ ವಿಷ್ಯಾನ? 20 ಹೆಂಗೂ ಅವ್ರೇ ಕೊಟ್ಟಿರ್ತಾರೆ, 33 ಬಂದ್ರೆ ಪಾಸಲ್ವಾ? ನಾನು ಐಎಎಸ್ ಮಾಡಲ್ಲ, ರಾಜಕಾರಣಿ, ಮಂತ್ರಿ ಆಗ್ತೀನಿ. ಐಎಎಸ್, ಐಪಿಎಸ್‌ಗಳು ನಂಗೇ ಸೆಲ್ಯೂಟ್ ಹೊಡೀತಾರೆ'.

ಮಗನ ಮಾತು ಕೇಳಿ ನಂಗೆ ಸಿಟ್ಟು ಬಂತು. ಜಮೀರ್ ಅಹ್ಮದ್ ತರ 'ಥು ನಿನ್ ಜನ್ಮಕ್ಕೆ, ಹೋಗು...' ಎಂದೆ.

ಮಡದಿ ನನ್ನ ಮುಖ ನೋಡುತ್ತ 'ಏನ್ ಮಾಡ್ಲಿರೀ, ಮನೆಯಿಂದ ಹೊರಗಾಕ್ತೀನಿ ಅಂದ್ರೆ, ಯತ್ನಾಳ್ ಸಾಹೇಬ್ರ ತರ 'ಹಾಕು, ಆಮೇಲೆ ನೀನೇ ವಾಪಸ್ ಕರೀತೀಯ ಅಂತಾನೆ' ಎಂದಳು. ನಾನು ಪಿಟಿಕ್ಕನ್ನಲಿಲ್ಲ.

ಸಂಗತ

ಟ್ರೋಲ್: ಪಾಠ ಕಲಿಸುವ ಹೊತ್ತು!

ಸಾಮಾಜಿಕ ಮಾಧ್ಯಮಗಳಲ್ಲಿ ಹೆಣ್ಣುಮಕ್ಕಳ ಚಾರಿತ್ರ್ಯಹನನ ಮಾಡುವವರ ವಿರುದ್ಧ ನಡೆಯಬೇಕಾದ ಆಂದೋಲನಕ್ಕೆ ರಮ್ಯಾ ಚಾಲನೆ ನೀಡಿರುವಂತಿದೆ.

• ಕುಸುಮಾ ಆಯರಹಳ್ಳಿ

ನಟ ದರ್ಶನ್ ಅಭಿಮಾನಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಅಶ್ಲೀಲ ಕಮೆಂಟ್‌ಗಳನ್ನು ಮಾಡಿದ ಕಾರಣಕ್ಕೆ ನಟಿ ರಮ್ಯಾ ದೂರು ಕೊಟ್ಟಿದ್ದಾರೆ. ಸಾಮಾಜಿಕ ಮಾಧ್ಯಮಗಳ ದಾಳಿಕೋರರಿಂದ ಡಿಜಿಟಲ್ ದೌರ್ಜನ್ಯಕ್ಕೆ ಒಳಗಾಗುತ್ತಿರುವವರಲ್ಲಿ ರಮ್ಯಾ ಮೊದಲಿಗರಲ್ಲ. ಸಾಮಾನ್ಯರಿಂದ ಖ್ಯಾತನಾಮರವರೆಗೆ ಅನೇಕರು ನಿತ್ಯವೂ ಟ್ರೋಲ್‌ಗೆ ಒಳಗಾಗುತ್ತಿದ್ದಾರೆ.

ಈ ಹಿಂದೆ ನಟಿಯೊಬ್ಬರು ದಪ್ಪಗಾದಾಗ ಅವರ ದೇಹದ ಕುರಿತು ಅಪಹಾಸ್ಯ ಮಾಡಲಾಗಿತ್ತು; ಅಶ್ಲೀಲ ಕಾರಣಗಳನ್ನು ಬರೆದು ಅವರನ್ನು ನೋಯಿಸಲಾಗಿತ್ತು. ಇಂತಹ ಉದಾಹರಣೆಗಳು ನೂರಾರು ಇವೆ. ಹಾಗಾಗಿ, ಅಶ್ಲೀಲ ಕಮೆಂಟ್‌ಗಳನ್ನು ದರ್ಶನ್ ಅಭಿಮಾನಿಗಳು ಮಾತ್ರ ಮಾಡುತ್ತಿದ್ದಾರೆ ಎನ್ನಲಾಗದು. ಇದು ಚಿತ್ರರಂಗಕ್ಕೆ ಸಂಬಂಧಿಸಿದ ವಿದ್ಯಮಾನ ಮಾತ್ರವೂ ಅಲ್ಲ. ಸಾಮಾನ್ಯ ಹೆಣ್ಣುಮಕ್ಕಳಿಗೂ, ಭಿನ್ನ ಸಿದ್ಧಾಂತದ, ಅಭಿಪ್ರಾಯ ಭೇದವಿರುವ ಹೆಣ್ಣುಮಕ್ಕಳಿಗೂ, ರಾಜಕೀಯ ಕಾರಣಕ್ಕೂ, ಹೆಣ್ಣು–ಗಂಡೆಂಬ ಭೇದವಿರದೇ ಸೋಷಿಯಲ್ ಮೀಡಿಯಾ ದಾಳಿಕೋರರು ವ್ಯಕ್ತಿತ್ವಹರಣ ಮಾಡುತ್ತಲೇ ಇರುತ್ತಾರೆ. ಶಿಕ್ಷೆಯ ಭಯವಿಲ್ಲದೇ ಕುಹಕವಾಡಿ ನೋಯಿಸುತ್ತಿರುತ್ತಾರೆ. ಅದೆಲ್ಲವೂ ಖಂಡನೀಯವೇ. ಆದರೆ, ಹೆಣ್ಣುಮಕ್ಕಳ ವಿಷಯದಲ್ಲಿ ಬೇರೊಂದು ಸೂಕ್ಷ್ಮವಿದೆ.

ಹೆಣ್ಣುಮಕ್ಕಳನ್ನು, ಅದರಲ್ಲೂ ಗಟ್ಟಿಧ್ವನಿ ಇರುವವರನ್ನು ಬಗ್ಗಿಸಲು, ಕುಗ್ಗಿಸಲು ಅಶ್ಲೀಲ ಮಾತುಗಳಾಡುವುದು, ಚಾರಿತ್ರ್ಯ ಕುರಿತು ಮಾತುಗಳನ್ನಾಡುವುದು, ಸೋಷಿಯಲ್ ಮೀಡಿಯಾ ಕಾಲಕ್ಕೂ ಮೊದಲಿನಿಂದಲೂ ಬಳಸಲಾಗುತ್ತಿರುವ ಅಸ್ತ್ರ. ವೈಯಕ್ತಿಕ ನಿಂದನೆ ಮಾಡಿದಾಗ ಹೆಣ್ಣುಮಕ್ಕಳು ಅವಮಾನದಿಂದ ಕುಗ್ಗಿಬಿಡುತ್ತಾರೆ; ಅವರನ್ನು ಮತ್ತೆ ಎಂದಿಗೂ ತಲೆ ಎತ್ತದಂತೆ ಮಣಿಸಿಬಿಡಬಹುದು ಎಂದು ಕೆಲವರು ಭಾವಿಸಿದ್ದಾರೆ. ಇದೇ ಸೂತ್ರ ಸಾಮಾಜಿಕ ಮಾಧ್ಯಮಗಳಲ್ಲೂ ಮುಂದುವರಿದಿದೆ.

ಸಾಕಷ್ಟು ಹೆಣ್ಣುಮಕ್ಕಳ ವಿಷಯದಲ್ಲಿ ಇದು ನಿಜವೂ ಆಗುತ್ತದೆ. ಅವರು ನೊಂದು, ಅತ್ತು ಸುಮ್ಮನಾಗಿಬಿಡುತ್ತಾರೆ. ಡಿಜಿಟಲ್ ದೌರ್ಜನ್ಯಕ್ಕೆ ಹೆದರಿ ಹೊರನಡೆದೂ ಬಿಡುತ್ತಾರೆ. ಕೆಲವರು ಹಾಗಲ್ಲ. ಎಸೆದ ಕಲ್ಲುಗಳ ಪೆಟ್ಟಿಗೆ ಹೆದರುವುದಿಲ್ಲ. ಕಲ್ಲೆಸೆದ ಕೈಗಳ ಪಕ್ಕಾ ಲೆಕ್ಕವಿಡುತ್ತಾರೆ. ಎಲ್ಲ ಒಟ್ಟು ಸೇರಿಸಿಕೊಂಡು ಧೈರ್ಯವಾಗಿ ನುಗ್ಗಿ, ತಿರುಗಿ ಕೊಡುತ್ತಾರೆ. ರಮ್ಯಾ ಅವರು ಈಗ ಮಾಡಿರುವುದು ಅಂತಹ ಧೈರ್ಯದ ಕೆಲಸ. ತಮ್ಮ ವಿರುದ್ಧ ಕೊಳಕು ಮಾತುಗಳನ್ನು ಆಡಿದವರ ಬಗ್ಗೆ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದಾರೆ. ಇದು ಡಿಜಿಟಲ್ ಸಂತ್ರಸ್ತರೆಲ್ಲರ ಪರವಾಗಿ ಕೊಟ್ಟಿರುವ ಪ್ರಾತಿನಿಧಿಕ ದೂರು ಅನ್ನಬಹುದು. ಹಾಗಾಗಿಯೇ ರಮ್ಯಾ ಪರ ನಿಲ್ಲುವುದು ಸಂತ್ರಸ್ತರ ಪರವಾದ ನಡೆ.

ಡಿಜಿಟಲ್ ಜಗತ್ತೊಂದು ಗೋಡೆಗಳ ಜಾತ್ರೆ. ಅಲ್ಲಿ ಯಾರು ಬೇಕಾದರೂ ಯಾವ ಗೋಡೆಯ ಮೇಲಾದರೂ ಏನನ್ನಾದರೂ ಬರೆದು ಹೋಗಿಬಿಡಬಹುದು. ಹಾಗೆ ಬರೆಯುವವರು ತಮ್ಮ ನಿಜವಾದ ಗುರುತು ತೋರಿಸಬಹುದು. ತೋರಿಸದೆಯೂ ಇರಬಹುದು. ಅಲ್ಲಿ ಉತ್ತರದಾಯಿತ್ವ ಇಲ್ಲವಾದ್ದರಿಂದ ಮಾತುಗಳು ಸುಲಭ ಮತ್ತು ಅಗ್ಗ. ರೇಣುಕಾಸ್ವಾಮಿ, ಪವಿತ್ರಾ ಗೌಡಗೆ ಮಾತಾಡಿದ್ದೂ ಈ ಕಾರಣದಿಂದಲೇ. ಯಾರು, ಯಾರ ಬಗ್ಗೆ ಬೇಕಾದರೂ, ಅವರ ಪರಿಚಯವೇ ಇರದಿದ್ದರೂ, ಒಮ್ಮೆಯೂ ಭೇಟಿಯಾಗದಿದ್ದರೂ, ಏನೂ ಗೊತ್ತಿಲ್ಲದಿದ್ದರೂ ಹಗುರವಾಗಿ, ಹೀನಾಯವಾಗಿ ಸಾಮಾಜಿಕ ಮಾಧ್ಯಮದಲ್ಲಿ ಮಾತನಾಡಬಹುದು. ನಿಜವಾಗಿ ಅಂತಹವರು ತಮ್ಮ ಕಮೆಂಟುಗಳ ಮೂಲಕ ಯಾರ ಬಗ್ಗೆಯೋ ಮಾತನಾಡುತ್ತಿರುವುದಿಲ್ಲ, ಬದಲಾಗಿ ತಮ್ಮ ಬಗ್ಗೆ ತಾವೇ ಮಾತನಾಡುತ್ತಾರೆ. ಇನ್ನೊಬ್ಬರ ವ್ಯಕ್ತಿತ್ವ ಹನನ ಮಾಡಿದ ವಿಕೃತ ಸಂತೋಷ ಅನುಭವಿಸುತ್ತಲೇ ತಮ್ಮ ವ್ಯಕ್ತಿತ್ವದ ವಿಕೃತಿ ಅನಾವರಣಗೊಳಿಸಿರುತ್ತಾರೆ.



ಚರ್ಚೆಗಳು, ವಾದಗಳು, ಪರ– ವಿರೋಧಗಳು ಸಮಾಜದಲ್ಲಿ ಇರುವಂತಹವೇ. ಆ ಕಾರಣಕ್ಕೆ ಯಾರ ಬಗ್ಗೆಯೇ ಆಗಲಿ ಕೊಳಕು ಭಾಷೆ ಬಳಸಿ, ನಿಂದಿಸಿ ಕಮೆಂಟ್ ಮಾಡುವುದು ಸರಿಯಲ್ಲ. ಆ ಡಿಜಿಟಲ್ ಧಾರ್ಷ್ಟ್ಯಕ್ಕೆ ಕಾನೂನಿನ ತಡೆ ಬೇಕಾಗಿದೆ.

ಈ ದಾಳಿ ಪ್ರತಿದಾಳಿ ನಡೆಯುತ್ತಿರುವುದು ಕೇವಲ ಅಕ್ಷರಗಳ ಮೂಲಕ. ಶಿಕ್ಷಿತರು ಹೀಗೆಲ್ಲಾ ವರ್ತಿಸುತ್ತಿರುವುದು, ನಮ್ಮ ಶಿಕ್ಷಣಕ್ಕೂ, ಕನಿಷ್ಠ ನಾಗರಿಕ ವರ್ತನೆಗೂ ಯಾವುದೇ ಸಂಬಂಧ ಇಲ್ಲದಂತಾಗಿರುವುದಕ್ಕೆ ಸಾಕ್ಷಿ. ಸಹ ಮನುಷ್ಯರನ್ನು ನೋಯಿಸಲು, ನಿಂದಿಸಲು, ಕುಹಕವಾಡಲು ಅಕ್ಷರಗಳನ್ನು ಅಸ್ತ್ರ ಮಾಡಿಕೊಳ್ಳುವುದು ದುರಂತ. ತಾವು ಯಾರಿಗೂ ಕಾಣುವುದಿಲ್ಲ, ಕಂಡರೂ ಏನೂ ಮಾಡಲಾಗುವುದಿಲ್ಲ ಎಂಬುದು ಡಿಜಿಟಲ್ ದಾಳಿಕೋರರ ಧೈರ್ಯ ಪ್ರದರ್ಶನಕ್ಕೆ, ವಿಕೃತಿಗೆ ಕಾರಣ. ಈಗ ರಮ್ಯಾ ಅವರ ದೂರಿನನುಸಾರ ಡಿಜಿಟಲ್ ವಿಳಾಸದ ಆಧಾರದಿಂದ ಅವರನ್ನು ಪತ್ತೆಹಚ್ಚಿ ಹಿಡಿದು, ಕಾನೂನಿನ ಪ್ರಕಾರ ಶಿಕ್ಷಿಸಬಹುದು ಎಂಬುದು ಈ ಪ್ರಕರಣದಲ್ಲಿ ಸಾಬೀತಾದರೆ, ಡಿಜಿಟಲ್ ದೌರ್ಜನ್ಯಕ್ಕೊಳಗಾದ ಅನೇಕರಿಗೆ ಮಾನಸಿಕ ನೆಮ್ಮದಿ ಸಿಗಬಹುದು. ಮುಂದೆ ಹಾಗೆ ಮಾಡುವವರಿಗೆ ಎಚ್ಚರಿಕೆಯೂ ಆಗಬಹುದು.


ರಮ್ಯಾ ದೂರು ಕೊಟ್ಟಿದ್ದರಿಂದ ಆಗುತ್ತಿರುವ ಲಾಭವೆಂದರೆ, ಬೇರೆ ಯಾರೂ ಇಂತಹ ಡಿಜಿಟಲ್ ದೌರ್ಜನ್ಯದ ದೂರು ಕೊಟ್ಟಿದ್ದರೂ ಆಗಬಹುದಾಗಿದ್ದರ ಎಷ್ಟೋ ಪಟ್ಟು ದೊಡ್ಡ ಸುದ್ದಿಯಾಗುತ್ತಿರುವುದು. ಇಷ್ಟು ದೊಡ್ಡ ಸುದ್ದಿ, ಅಧಿಕೃತ ದೂರು, ಇದೆಲ್ಲದರಿಂದಾಗಿ ಕೆಟ್ಟ ಕಮೆಂಟು ಕುಟ್ಟುವ ಮುನ್ನ ಒಮ್ಮೆಯಾದರೂ ಯೋಚಿಸುವಂತಾಗಿದೆ ಈಗ. ಅದಕ್ಕಾಗಿ ರಮ್ಯಾ ಅವರನ್ನು ಅಭಿನಂದಿಸಲೇಬೇಕು. ರಮ್ಯಾ ದೂರಿನಷ್ಟೇ ಮಹತ್ವ ಸಾಮಾನ್ಯರ ದೂರಿಗೂ ಸಿಕ್ಕರೆ, ಕಿರುಕುಳ ಅನುಭವಿಸಿ ಆತ್ಮಹತ್ಯೆಯವರೆಗೂ ಯೋಚಿಸುವವರು ನೆಮ್ಮದಿಯಿಂದ ಬದುಕಿಯಾರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಾಲೇಗಾಂವ್ ಸ್ಫೋಟ 17 ವರ್ಷಗಳ ಜಾಡು ಹಿಡಿದು

ಪ್ರಜಾವಾಣಿ ವಾರ್ತೆ

2008ರ ಸೆಪ್ಟೆಂಬರ್ 29ರ ರಾತ್ರಿ 9.35ರ ಹೊತ್ತು. ಹಿಂದೂಗಳಿಗೆ ನವರಾತ್ರಿಯ ದಿನವಾಗಿದ್ದರೆ, ಮುಸ್ಲಿಮರಿಗೆ ರಂಜಾನ್ ಮಾಸದ ದಿನ. ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೇಗಾಂವ್ ಪಟ್ಟಣದ ಭಿಕ್ಕು ಚೌಕದಲ್ಲಿ ಬೈಕ್ ಒಂದು ಏಕಾಏಕಿ ಸ್ಫೋಟಗೊಂಡಿತು. ಆರು ಮಂದಿ ಮೃತಪಟ್ಟು, 101 ಜನರು ಗಾಯಗೊಂಡರು. ಕೊನೆಯುಸಿರೆಳೆದವರು, ಗಾಯಗೊಂಡವರಲ್ಲಿ ಬಹುತೇಕರು ಮುಸ್ಲಿಮರು. ಬೈಕ್‌ನಲ್ಲಿ ಆರ್‌ಡಿಎಕ್ಸ್ ಇಟ್ಟು ಸ್ಫೋಟಿಸಲಾಗಿತ್ತು. ಘಟನೆ ನಡೆದು ಮೂರು ವಾರಗಳ ನಂತರ (ಅ.21) ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿದ್ದ ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ಪಡೆಯು (ಎಟಿಎಸ್) ಎರಡನೇ ದಿನಕ್ಕೆ ಪ್ರಮುಖ ಆರೋಪಿ ಪ್ರಜ್ಞಾ ಸಿಂಗ್ ಠಾಕೂರ್ ಹಾಗೂ ಇತರ ಮೂವರನ್ನು ಬಂಧಿಸಿತ್ತು. ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಬಲಪಂಥೀಯ ತೀವ್ರವಾದಿಗಳು ಈ ಕೃತ್ಯ ಎಸಗಿದ್ದಾರೆ ಎಂದು ಪ್ರತಿಪಾದಿಸಿದ್ದ ಎಟಿಎಸ್, ಅಭಿನವ್ ಭಾರತ್ ಎಂಬ ಹಿಂದೂ ಮೂಲಭೂತವಾದಿ ಸಂಘಟನೆಯತ್ತ ಬೊಟ್ಟು ಮಾಡಿತ್ತು. ಸೇನಾ ಗುಪ್ತಚರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಲೆಫ್ಟಿನೆಂಟ್ ಕರ್ನಲ್ (ಪ್ರಸಾದ್ ಶ್ರೀಕಾಂತ್ ಪುರೋಹಿತ) ಮತ್ತು ನಿವೃತ್ತ ಮೇಜರ್ (ರಮೇಶ್ ಉಪಾಧ್ಯಾಯ) ಕೂಡ ಪ್ರಕರಣದ ಪ್ರಮುಖ ಆರೋಪಿಗಳಾಗಿದ್ದರು.



ಆರಂಭದಲ್ಲಿ ಮಹಾರಾಷ್ಟ್ರ ಎಟಿಎಸ್ ತನಿಖೆ ನಡೆಸಿದ್ದರೆ ನಂತರ, ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತನಿಖೆ ಕೈಗೆತ್ತಿಕೊಂಡಿತ್ತು. ಒಟ್ಟು 14 ಮಂದಿಯನ್ನು ಬಂಧಿಸಲಾಗಿತ್ತು. ಈ ಪೈಕಿ ಏಳು ಮಂದಿ ಮೊದಲೇ ಆರೋಪ ಮುಕ್ತಗೊಂಡಿದ್ದರು. ಘಟನೆ ನಡೆದು ಒಂದು ವರ್ಷದ ನಂತರ, ಪ್ರಜ್ಞಾ ಠಾಕೂರ್, ಪುರೋಹಿತ, ರಮೇಶ್ ಉಪಾಧ್ಯಾಯ, ಸಮೀರ್ ಕುಲಕರ್ಣಿ, ಅಜಯ್ ರಾಹಿರ್ಕರ್, ಸುಧಾಕರ್ ದ್ವಿವೇದಿ ಮತ್ತು ಸುಧಾಕರ್ ಚತುರ್ವೇದಿ ವಿರುದ್ಧ ಎನ್‌ಐಎ ನ್ಯಾಯಾಲಯ ದೋಷಾರೋಪ ನಿಗದಿ ಮಾಡಿತ್ತು.

ಒತ್ತಡ ಹಾಕಿತ್ತೇ ಕೇಂದ್ರ?

ಆರಂಭದಲ್ಲಿ ಈ ಪ್ರಕರಣದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದವರು ಮಂಗಳೂರಿನವರಾದ ರೋಹಿಣಿ ಸಾಲಿಯಾನ್. 2015ರಲ್ಲಿ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, '2014ರಲ್ಲಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಈ ಪ್ರಕರಣದ ಆರೋಪಿಗಳ ಬಗ್ಗೆ 'ಮೃದು' ಧೋರಣೆ ತಳೆಯುವಂತೆ ಎನ್‌ಐಎ ಒತ್ತಡ ಹಾಕುತ್ತಿದೆ. ಎನ್‌ಐಎಯ ಉನ್ನತ ಅಧಿಕಾರಿಯೊಬ್ಬರು ನನ್ನ ಬಳಿಗೆ ಬಂದು ಇದನ್ನು ತಿಳಿಸಿದ್ದರು' ಎಂದು ಹೇಳಿದ್ದರು. ಅವರು ಈ ಹೇಳಿಕೆ ನೀಡಿದ ನಂತರ ಎನ್‌ಐಎಯು ರೋಹಿಣಿಯವರನ್ನು ವಕೀಲರ ಸಮಿತಿಯಿಂದ ತೆಗೆದುಹಾಕಿತ್ತು.

ರೋಹಿಣಿಯವರ ಹೇಳಿಕೆಯು ತನಿಖೆಯ ಕುರಿತಾಗಿ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿತ್ತು.

ಅಷ್ಟರಲ್ಲಾಗಲೇ ಎಲ್ಲ ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದರು. ಇದಾಗಿ, ಏಳು ವರ್ಷಗಳು ಕಳೆದಿವೆ. ಈಗ ಎನ್‌ಐಎನ ವಿಶೇಷ ನ್ಯಾಯಾಲಯ ಎಲ್ಲಾ ಆರೋಪಿಗಳನ್ನೂ ಖುಲಾಸೆಗೊಳಿಸಿ ತೀರ್ಪು ನೀಡಿದೆ.

'ಹಿಂದೂ ಭಯೋತ್ಪಾದನೆ' ಚರ್ಚೆಗೆ

ಈ ಪ್ರಕರಣವು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಭಾರಿ ರಾಜಕೀಯ ಜಟಾಪಟಿಗೆ ಕಾರಣವಾಗಿತ್ತು.

2008ರಲ್ಲಿ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್–ಎನ್‌ಸಿಪಿ ನೇತೃತ್ವದ ಸರ್ಕಾರವಿದ್ದರೆ, ಕೇಂದ್ರದಲ್ಲಿ ಯುಪಿಎ ಸರ್ಕಾರ ಇತ್ತು. ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಹಿಂದೂ ಮೂಲಭೂತವಾದಿಗಳು ನಡೆಸಿದ ಕೃತ್ಯ ಇದು ಎಂದು ತನಿಖೆ ನಡೆಸಿದ್ದ ಮಹಾರಾಷ್ಟ್ರ ಎಟಿಎಸ್‌ನ ಪ್ರತಿಪಾದನೆಯು ರಾಜಕೀಯ ಕದನಕ್ಕೆ ಇಂಬು ನೀಡಿತು. ಕಾಂಗ್ರೆಸ್‌ನ ಕೆಲವು ಪ್ರಮುಖ ಮುಖಂಡರು ಇದನ್ನು 'ಹಿಂದೂ ಭಯೋತ್ಪಾದನೆ' ಕೃತ್ಯ ಎಂದು ಕರೆದರು. ಇನ್ನೂ ಕೆಲವರು 'ಕೇಸರಿ ಭಯೋತ್ಪಾದನೆ' ಎಂದು ಜರಿದರು. ಇದು ಬಿಜೆಪಿ, ಆರ್‌ಎಸ್‌ಎಸ್, ಹಿಂದೂ ಸಂಘಟನೆಗಳನ್ನು ಕೆರಳಿಸಿತು. 'ಒಂದು ಸಮುದಾಯದ ಮತಗಳನ್ನು ಗಳಿಸುವುದಕ್ಕಾಗಿ ಕಾಂಗ್ರೆಸ್ ಹಿಂದೂ/ಕೇಸರಿ ಭಯೋತ್ಪಾದನೆ ಎಂಬ ಸಂಕಥನವನ್ನು ಸೃಷ್ಟಿಸಿದೆ' ಎಂದು ಆರೋಪಿಸಿದ ಬಿಜೆಪಿಯು ಇದನ್ನು ಹಲವು ರಾಜ್ಯಗಳಲ್ಲಿ ಚುನಾವಣಾ ವಿಷಯವನ್ನಾಗಿಯೂ ಮಾಡಿತು.

ಪ್ರಜ್ಞಾಸಿಂಗ್ ಮೇಲಿದ್ದ ಆರೋಪ ಏನು?

ಬಿಜೆಪಿಯೊಂದಿಗೆ ಗುರುತಿಸಿಕೊಂಡಿರುವ ಪ್ರಜ್ಞಾ ಸಿಂಗ್ ಠಾಕೂರ್ ಹೆಸರಿನಲ್ಲಿ ನೋಂದಣಿಯಾಗಿದ್ದ ಬೈಕ್ ಅನ್ನು ಸ್ಫೋಟಕ್ಕೆ ಬಳಸಲಾಗಿತ್ತು ಎಂಬ ಆರೋಪದಲ್ಲಿ ಮಹಾರಾಷ್ಟ್ರ ಎಟಿಎಸ್ ಅವರನ್ನು ಬಂಧಿಸಿತ್ತು. ಆ ಬೈಕ್‌ನಲ್ಲಿ ಆರ್‌ಡಿಎಕ್ಸ್ ಅಳವಡಿಸಲಾಗಿತ್ತು.

ಸ್ಫೋಟದ ಸಂದರ್ಭದಲ್ಲಿ ಬೈಕ್ ಹೊಂದಿದ್ದ ನೋಂದಣಿ ಸಂಖ್ಯೆ ನಕಲಿಯಾಗಿತ್ತು. ಬೈಕ್ ಚಾಸಿ ಮತ್ತು ಎಂಜಿನ್ ಸಂಖ್ಯೆಗಳನ್ನೂ ಅಳಿಸಿಹಾಕಲಾಗಿತ್ತು. ತನಿಖಾಧಿಕಾರಿಗಳು ವಿಧಿ ವಿಜ್ಞಾನ ಪ್ರಯೋಗಾಲಯದ ನೆರವಿನಿಂದ ಮೂಲ ಚಾಸಿ ಮತ್ತು ಎಂಜಿನ್ ಸಂಖ್ಯೆಗಳನ್ನು ಸಂಗ್ರಹಿಸಿದ್ದರು. ಆ ಬೈಕ್ ಪ್ರಜ್ಞಾ ಹೆಸರಲ್ಲಿ ನೋಂದಣಿಯಾಗಿದ್ದುದು ತನಿಖೆಯಿಂದ ತಿಳಿದು ಬಂದಿತ್ತು. ಆದರೆ, ಬೈಕ್ ತನ್ನದಾಗಿದ್ದರೂ ಅದನ್ನು ಎರಡು ವರ್ಷಗಳ ಹಿಂದೆಯೇ ಮಾರಾಟ ಮಾಡಿದ್ದಾಗಿ ಪ್ರಜ್ಞಾ ಹೇಳಿದ್ದರು.

ಇದಲ್ಲದೇ, ದಾಳಿಗೆ ಸಂಚು ರೂಪಿಸುವುದಕ್ಕಾಗಿ ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆದ ಸಭೆಯಲ್ಲಿ ಪ್ರಜ್ಞಾ ಕೂಡ ಭಾಗವಹಿಸಿದ್ದರು ಎಂದು ಪ್ರಾಸಿಕ್ಯೂಷನ್ ಆರೋಪಿಸಿತ್ತು. ಸ್ಫೋಟಕ್ಕೆ ಅಗತ್ಯವಾದ ಮಾನವ ಸಂಪನ್ಮೂಲವನ್ನು ಒದಗಿಸುವ ಭರವಸೆಯನ್ನೂ ಪ್ರಜ್ಞಾ ನೀಡಿದ್ದರು ಎಂದೂ ದೂರಿತ್ತು.

ಜಾಮೀನು ಸಿಗುವುದಕ್ಕೂ ಮೊದಲು ಅವರು ಜೈಲಿನಲ್ಲಿ ಎಂಟು ವರ್ಷಗಳನ್ನು ಕಳೆದಿದ್ದರು. 2019ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಅವರು ಬಿಜೆಪಿಯಿಂದ ಭೋಪಾಲ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯಿಸಿದ್ದರು. ಕಳೆದ ವರ್ಷದ (2024) ಲೋಕಸಭಾ ಚುನಾವಣೆಯಲ್ಲಿ ಪಕ್ಷ ಅವರಿಗೆ ಟಿಕೆಟ್ ನೀಡಿರಲಿಲ್ಲ.

ಪ್ರಕರಣ ನಡೆದು ಬಂದ ಹಾದಿ

2008, ಸೆ.29: ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೇಗಾಂವ್‌ನಲ್ಲಿ ಬೈಕ್‌ನಲ್ಲಿ ಅಳವಡಿಸಲಾಗಿದ್ದ ಬಾಂಬ್ ಸ್ಫೋಟ. ಘಟನೆಯಲ್ಲಿ ಆರು ಮಂದಿ ಸಾವು, 101 ಮಂದಿಗೆ ಗಾಯ

2008, ಸೆ.30: ಮಾಲೇಗಾಂವ್‌ನ ಆಜಾದ್ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲು

2008, ಅ.21: ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡ ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ಪಡೆ (ಎಟಿಎಸ್)

2008, ಅ.23: ಎಟಿಎಸ್‌ನಿಂದ ಪ್ರಜ್ಞಾ ಸಿಂಗ್ ಠಾಕೂರ್ ಮತ್ತು ಇತರ ಮೂವರ ಬಂಧನ. ಬಲಪಂಥೀಯ ತೀವ್ರವಾದಿಗಳು ಕೃತ್ಯ ಎಸಗಿರುವುದಾಗಿ ಎಟಿಎಸ್ ಪ್ರತಿಪಾದನೆ

2008 ನವೆಂಬರ್: ಪ್ರಕರಣ ಸಂಬಂಧ ಪಿತೂರಿ ನಡೆಸಿದ ಆರೋಪದ ಮೇಲೆ ಎಟಿಎಸ್‌ನಿಂದ ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಪುರೋಹಿತ ಬಂಧನ

2009, ಜ.20: 11 ಬಂಧಿತ ಆರೋಪಿಗಳ ವಿರುದ್ಧ ವಿಶೇಷ ನ್ಯಾಯಾಲಯದಲ್ಲಿ ಆರೋಪಪಟ್ಟಿ ಸಲ್ಲಿಸಿದ ಎಟಿಎಸ್. ಮಹಾರಾಷ್ಟ್ರ ಸಂಘಟಿತ ಅಪರಾಧ ತಡೆ ಕಾಯ್ದೆ (ಮೋಕಾ), ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ), ಐಪಿಸಿಯ ಕಠಿಣ ನಿಯಮಗಳ ಅಡಿ ಪ್ರಕರಣ ದಾಖಲು. ರಾಮ್‌ಜಿ ಅಲಿಯಾಸ್ ರಾಮಚಂದ್ರ ಮತ್ತು ಸಂದೀಪ್ ಡಾಂಗೆ ಅವರನ್ನು 'ಬೇಕಾಗಿರುವ ಆರೋಪಿಗಳು' ಎಂದು ಹೆಸರಿಸಲಾಗಿತ್ತು

2009, ಜುಲೈ: ಪ್ರಕರಣವು 'ಮೋಕಾ' ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದ ವಿಶೇಷ ನ್ಯಾಯಾಲಯ; ನಾಸಿಕ್‌ನ ಕೋರ್ಟ್‌ನಲ್ಲಿ ಪ್ರಕರಣ ಮುಂದುವರಿಸುವಂತೆ ನಿರ್ದೇಶನ

2009. ಆಗಸ್ಟ್: ವಿಶೇಷ ನ್ಯಾಯಾಲಯದ ಆದೇಶವನ್ನು ಬಾಂಬೆ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ ಮಹಾರಾಷ್ಟ್ರ ಸರ್ಕಾರ

2010 ಜುಲೈ: ವಿಶೇಷ ನ್ಯಾಯಾಲಯದ ಆದೇಶ ರದ್ದುಪಡಿಸಿ, ಪ್ರಕರಣವು 'ಮೋಕಾ' ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಆದೇಶಿಸಿದ ಬಾಂಬೆ ಹೈಕೋರ್ಟ್

2010 ಆಗಸ್ಟ್: ಹೈಕೋರ್ಟ್ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಪ್ರಜ್ಞಾ ಸಿಂಗ್ ಮತ್ತು ಪುರೋಹಿತ

2011, ಫೆ.1: ಮುಂಬೈ ಎಟಿಎಸ್‌ನಿಂದ ಮತ್ತೊಬ್ಬ ಆರೋಪಿ ಪ್ರವೀಣ್ ಮುತಾಲಿಕ್ ಬಂಧನ. ಬಂಧಿತರ ಸಂಖ್ಯೆ 12ಕ್ಕೆ ಏರಿಕೆ

2011, ಏ 13: ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಪ್ರಕರಣದ ಹಸ್ತಾಂತರ

2012, ಫೆಬ್ರುವರಿ ಮತ್ತು ಡಿಸೆಂಬರ್: ಎನ್‌ಐಎಯಿಂದ ಆರೋಪಿಗಳಾದ ಲೋಕೇಶ್ ಶರ್ಮ ಮತ್ತು ಧನಸಿಂಗ್ ಚೌಧರಿ ಬಂಧನ. ಬಂಧಿತರ ಸಂಖ್ಯೆ 14ಕ್ಕೆ ಏರಿಕೆ

2015 ಏಪ್ರಿಲ್: 'ಮೋಕಾ' ಅನ್ವಯವಾಗುತ್ತದೆಯೇ ಎಂಬ ಬಗ್ಗೆ ಪುನರ್‌ಪರಿಶೀಲಿಸುವಂತೆ ಪ್ರಕರಣವನ್ನು ವಿಶೇಷ ನ್ಯಾಯಾಲಯಕ್ಕೆ ವಾಪಸ್ ಕಳುಹಿಸಿದ ಸುಪ್ರೀಂ ಕೋರ್ಟ್

2016 ಫೆಬ್ರುವರಿ: ಪ್ರಕರಣಕ್ಕೆ 'ಮೋಕಾ' ಅನ್ವಯಿಸುತ್ತದೆಯೇ ಎನ್ನುವ ಬಗ್ಗೆ ಅಟಾರ್ನಿ ಜನರಲ್ ಅವರ ಅಭಿಪ್ರಾಯ ಪಡೆಯಲಾಗಿದೆ ಎಂದು ಕೋರ್ಟ್‌ಗೆ ತಿಳಿಸಿದ ಎನ್‌ಐಎ

2016, ಮೇ 13: ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ ಎನ್‌ಐಎ. 'ಮೋಕಾ'ದಿಂದ ಪ್ರಕರಣ ಹೊರಕ್ಕೆ; ಏಳು ಆರೋಪಿಗಳು ಆರೋಪಮುಕ್ತ

2017, ಏ.25: ಬಾಂಬೆ ಹೈಕೋರ್ಟ್‌ನಿಂದ ಪ್ರಜ್ಞಾ ಸಿಂಗ್ ಅವರಿಗೆ ಜಾಮೀನು; ಪುರೋಹಿತ್‌ಗೆ ಜಾಮೀನು ನಿರಾಕರಣೆ

2017, ಸೆ.21: ಪುರೋಹಿತ್ ಅವರಿಗೆ ಸುಪ್ರೀಂ ಕೋರ್ಟ್‌ನಿಂದ ಜಾಮೀನು; ವರ್ಷಾಂತ್ಯದ ಹೊತ್ತಿಗೆ ಎಲ್ಲ ಆರೋಪಿಗಳಿಗೂ ಜಾಮೀನು

2017, ಡಿ.27: ಶಿವನಾರಾಯಣ, ಶ್ಯಾಮ್ ಸಾಹು ಮತ್ತು ಪ್ರವೀಣ್ ಮುತಾಲಿಕ್ ನಾಯ್ಕ್ ಅವರನ್ನು ಪ್ರಕರಣದಿಂದ ಮುಕ್ತಗೊಳಿಸಿದ ಎನ್‌ಐಎ ವಿಶೇಷ ನ್ಯಾಯಾಲಯ. ಭಯೋತ್ಪಾದನಾ ಸಂಘಟನೆಗೆ ಸೇರಿದವರು ಎನ್ನುವ ಆರೋಪದಿಂದ ಮುಕ್ತಿ; ಯುಎಪಿಎ ಅಡಿ ದಾಖಲಾಗಿದ್ದ ಭಯೋತ್ಪಾದನಾ ಚಟುವಟಿಕೆಗಳಿಗಾಗಿ ಧನಸಂಗ್ರಹ ಆರೋಪದಿಂದಲೂ ಮುಕ್ತಿ

2018, ಅ.30: ಪ್ರಜ್ಞಾ, ಪುರೋಹಿತ, ರಮೇಶ್ ಉಪಾಧ್ಯಾಯ, ಸಮೀರ್ ಕುಲಕರ್ಣಿ, ಅಜಯ್ ರಾಹಿರ್ಕರ್, ಸುಧಾಕರ್ ದ್ವಿವೇದಿ ಮತ್ತು ಸುಧಾಕರ್ ಚತುರ್ವೇದಿ– ಈ ಏಳು ಆರೋಪಿಗಳ ವಿರುದ್ಧ ದೋಷಾರೋಪ ನಿಗದಿ

2018 ಡಿ.3: ನ್ಯಾಯಾಲಯದಲ್ಲಿ ಪ್ರಕರಣದ ಮೊದಲ ಸಾಕ್ಷಿಯ ವಿಚಾರಣೆ ಆರಂಭ

2023, ಸೆ.14: 323 ಪ್ರಾಸಿಕ್ಯೂಷನ್ ಸಾಕ್ಷಿಗಳ ವಿಚಾರಣೆಯೊಂದಿಗೆ (ಈ ಪೈಕಿ 37 ಸಾಕ್ಷಿಗಳು ಪ್ರತಿಕೂಲ ಸಾಕ್ಷಿಗಳಾಗಿ ಬದಲಾದರು) ಪ್ರಾಸಿಕ್ಯೂಷನ್ ವಾದ ಅಂತ್ಯ

2024, ಜುಲೈ 23: ಎಂಟು ಮಂದಿ ಆರೋಪಿಪರ ಸಾಕ್ಷಿಗಳ ವಿಚಾರಣೆ ಅಂತ್ಯ

2024, ಆ.12: ವಿಶೇಷ ನ್ಯಾಯಾಲಯದಿಂದ ಆರೋಪಿಗಳ ಅಂತಿಮ ಹೇಳಿಕೆ ದಾಖಲು. ಪ್ರಾಸಿಕ್ಯೂಷನ್ ಮತ್ತು ಪ್ರತಿವಾದಿಗಳಿಂದ ಅಂತಿಮ ಹಂತದ ವಾದ ಮಂಡನೆ

2025, ಏ.19: ವಿಚಾರಣೆ ಅಂತ್ಯಗೊಳಿಸಿದ ವಿಶೇಷ ನ್ಯಾಯಾಲಯ

2025, ಜುಲೈ 31: 'ಸಮರ್ಪಕ ಹಾಗೂ ವಿಶ್ವಾಸಾರ್ಹ' ಸಾಕ್ಷ್ಯಗಳಿಲ್ಲ ಎಂದು ಎಲ್ಲ ಏಳು ಆರೋಪಿಗಳನ್ನು ದೋಷಮುಕ್ತಗೊಳಿಸಿದ ಎನ್‌ಐಎ ವಿಶೇಷ ನ್ಯಾಯಲಯದ ನ್ಯಾಯಾಧೀಶ ಎ.ಕೆ.ಲಾಹೋಟಿ.



2008ರಲ್ಲಿ ಮಾಲೇಗಾಂವ್‌ನಲ್ಲಿ ಸ್ಫೋಟ ಸಂಭವಿಸಿದ್ದ ಸ್ಥಳ ಎಎಫ್‌ಪಿ ಸಂಗ್ರಹ ಚಿತ್ರ

ಸೇನೆಯಲ್ಲಿದ್ದವರೂ ಆರೋಪಿಗಳು

ಪ್ರಕರಣದಲ್ಲಿ ಬಂಧಿತರಾಗಿದ್ದ ಮತ್ತೊಬ್ಬ ಪ್ರಮುಖ ಆರೋಪಿ ಪ್ರಸಾದ್ ಶ್ರೀಕಾಂತ್ ಪುರೋಹಿತ. 2008ರ ನವೆಂಬರ್‌ನಲ್ಲಿ ಎಟಿಎಸ್ ಅವರನ್ನು ಬಂಧಿಸುವಾಗ ಅವರು ಸೇನೆಯ ಗುಪ್ತಚರ ವಿಭಾಗದಲ್ಲಿ ಕರ್ತವ್ಯದಲ್ಲಿದ್ದರು. ಸೇವೆಯಲ್ಲಿದ್ದ ಸೇನಾ ಸಿಬ್ಬಂದಿಯೊಬ್ಬರ ಮೇಲೆ ಭಯೋತ್ಪಾದನೆಯ ಆರೋಪ ಕೇಳಿಬಂದಿದ್ದು ಅದೇ ಮೊದಲು.

'ಸ್ಫೋಟದ ಯೋಜನೆಯನ್ನು ಕಾರ್ಯಗತಗೊಳಿಸಲು ನಡೆಸಿದ ಸಭೆಯಲ್ಲಿ ಪುರೋಹಿತ ಹಾಜರಿದ್ದರು. ಆರ್‌ಡಿಎಕ್ಸ್ ತಯಾರಿಸಲು ಬೇಕಾದ ಕಚ್ಚಾ ವಸ್ತುಗಳನ್ನು ಜಮ್ಮು ಮತ್ತು ಕಾಶ್ಮೀರದಿಂದ ತಂದು, ತಮ್ಮ ಮನೆಯಲ್ಲೇ ಅದನ್ನು ಸಿದ್ಧಪಡಿಸಿದ್ದರು' ಎಂದು ಆರೋಪಿಸಲಾಗಿತ್ತು. ಆರೋಪಗಳನ್ನು ನಿರಾಕರಿಸಿದ್ದ ಅವರು, ವಿಚಾರಣೆಯ ಸಂದರ್ಭದಲ್ಲಿ ಎಟಿಎಸ್‌ನ ಹಿರಿಯ ಅಧಿಕಾರಿಗಳು ತಮಗೆ ದೈಹಿಕ ಹಿಂಸೆ ನೀಡಿದ್ದರು. ಕೆಲವು ಮುಖಂಡರ ಹೆಸರುಗಳನ್ನು ಹೇಳಲು ಒತ್ತಡ ಹಾಕಿದ್ದರು' ಎಂದು ನ್ಯಾಯಾಲಯಕ್ಕೆ ನೀಡಿದ್ದ ಅಂತಿಮ ಹೇಳಿಕೆಯಲ್ಲಿ ಪುರೋಹಿತ ತಿಳಿಸಿದ್ದರು. ಒಂಬತ್ತು ವರ್ಷ ಅವರು ಸೆರೆವಾಸ ಅನುಭವಿಸಿದ್ದರು.

ಸೇನೆಯಲ್ಲಿ ಮೇಜರ್ ಆಗಿ ನಿವೃತ್ತರಾದ ರಮೇಶ್ ಉಪಾಧ್ಯಾಯ ಅವರು ಈ ಪ್ರಕರಣದ ಇನ್ನೊಬ್ಬ ಪ್ರಮುಖ ಆರೋಪಿಯಾಗಿದ್ದವರು. ಅಭಿನವ ಭಾರತ ಸಂಘಟನೆಯ ಸಂಸ್ಥಾಪಕರಲ್ಲಿ ಒಬ್ಬರು. 'ಭೋಪಾಲ್‌ನಲ್ಲಿ ನಡೆದ ಸ್ಫೋಟ ಸಂಚಿನ ಸಭೆಯಲ್ಲಿ ಇವರು ಭಾಗವಹಿಸಿದ್ದರು. 'ಹಿಂದೂ ರಾಷ್ಟ್ರ' ನಿರ್ಮಿಸಬೇಕು ಎಂಬುದು ಅವರ ಕನಸು' ಎಂದು ಪ್ರಾಸಿಕ್ಯೂಷನ್ ಆರೋಪಿಸಿತ್ತು.

14 ಪ್ರಕರಣದಲ್ಲಿ ಬಂಧನಕ್ಕೆ ಒಳಗಾದವರು

7 ವಿಚಾರಣೆ ಎದುರಿಸಿದವರು

7 ದೋಷಾರೋಪ ನಿಗದಿ ಸಮಯದಲ್ಲಿ ಆರೋಪದಿಂದ ಮುಕ್ತಗೊಂಡವರು

ಭಗವಾಕ್ಕೆ ಸಂದ ಜಯ: ಪ್ರಜ್ಞಾ

ತಮ್ಮನ್ನು ಖುಲಾಸೆಗೊಳಿಸಿ ನ್ಯಾಯಾಲಯ ತೀರ್ಪು ನೀಡಿದ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಪ್ರಜ್ಞಾ ಠಾಕೂರ್, 'ಭಗವಾ ಕಿ ಜೀತ್ ಹುಯಿ, ಹಿಂದುತ್ವ ಕಿ ಜೀತ್ ಹುಯಿ (ಭಗವಾ ಗೆದ್ದಿತು, ಹಿಂದುತ್ವ ಗೆದ್ದಿತು) ಎಂದು ಭಾವುಕರಾಗಿ ಹೇಳಿದರು.

'ಇದು ನನಗೆ ಸಿಕ್ಕ ಗೆಲುವು ಮಾತ್ರವಲ್ಲ, ಇದು ಭಗವಾಕ್ಕೂ (ಕೇಸರಿ) ಸಂದ ಜಯ. ಕಳೆದ 17 ವರ್ಷ ನನ್ನ ಜೀವನ ಹಾಳಾಯಿತು. ಭಗವಾಕ್ಕೆ ಅವಮಾನ ಮಾಡಲು ಯತ್ನಿಸಿದವರನ್ನು ದೇವರು ಶಿಕ್ಷಿಸದೇ ಬಿಡುವುದಿಲ್ಲ' ಎಂದರು.

'ನಾನು ಸನ್ಯಾಸಿನಿ ಆಗಿರುವುದರಿಂದಲೇ ಇಂದು ಜೀವಂತವಾಗಿರುವೆ. ಪಿತೂರಿ ನಡೆಸುವ ಮೂಲಕ ಅವರು ಭಗವಾಧ್ವಜಕ್ಕೆ ಅವಮಾನಿಸಿದರು. ಇಂದು ಭಗವಾಕ್ಕೆ ಜಯ ಸಿಕ್ಕಿದೆ' ಎಂದು ಹೇಳಿದರು.

'ಯಾವ ಕಾರಣವೂ ಇಲ್ಲದೆಯೇ ವಿಚಾರಣೆಗೆ ಹಾಜರಾಗುವಂತೆ ನನಗೆ ಸೂಚಿಸಲಾಗುತ್ತಿತ್ತು. ವಿಚಾರಣೆಗೆ ಬರುವಂತೆ ನನ್ನನ್ನು ಕರೆಸಿಕೊಂಡಿದ್ದ ಅಧಿಕಾರಿಗಳು ನಂತರ ನನ್ನನ್ನು ಬಂಧಿಸಿ, ಚಿತ್ರಹಿಂಸೆ ನೀಡಿದರು. ಈ ಪ್ರಕರಣ ನನ್ನ ಇಡೀ ಜೀವನವನ್ನೇ ಹಾಳುಮಾಡಿತು' ಎಂದು ಹೇಳಿದರು.

ಸೇನೆಗೆ ಧನ್ಯವಾದ: ಪುರೋಹಿತ

'ಈ ಪ್ರಕರಣಕ್ಕೆ ಸಂಬಂಧಿಸಿ, ತನಿಖೆಯುದ್ದಕ್ಕೂ ನನ್ನ ಬೆನ್ನಿಗೆ ನಿಂತ ಭಾರತೀಯ ಸೇನೆಗೆ ಧನ್ಯವಾದ ಹೇಳಲು ನಾನು ಬಯಸುತ್ತೇನೆ' ಎಂದು ಸೇನೆಯ ಗುಪ್ತಚರ ವಿಭಾಗದ ಮಾಜಿ ಅಧಿಕಾರಿ, ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಪುರೋಹಿತ ಪ್ರತಿಕ್ರಿಯಿಸಿದರು.

'ನನ್ನ ಪಾಲಿಗೆ ದೇಶವೇ ಸರ್ವಸ್ವ. ಸೇನೆ ಮತ್ತು ಆ ಮೂಲಕ ದೇಶ ಸೇವೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ನಿಮಗೆ ಧನ್ಯವಾದ ಹೇಳುವೆ. ನನ್ನ ಎಲ್ಲ ಸಹೋದ್ಯೋಗಿಗಳು ಹಾಗೂ ಗೆಳೆಯರಿಗೂ ಧನ್ಯವಾದ ಹೇಳುವೆ' ಎಂದರು.

'ಇಷ್ಟೆಲ್ಲಾ ನಡೆದಿರುವುದಕ್ಕೆ ಸಂಬಂಧಿಸಿ ನಾನು ಯಾವ ಸಂಘಟನೆಗಳನ್ನೂ ದೂಷಿಸಲು ಇಚ್ಛಿಸುವುದಿಲ್ಲ. ತನಿಖಾ ಸಂಸ್ಥೆಗಳ ತಪ್ಪು ಇಲ್ಲ. ಆದರೆ, ಸಂಸ್ಥೆಯಲ್ಲಿನ ಕೆಲ ವ್ಯಕ್ತಿಗಳು ತಪ್ಪು ಮಾಡಿದರು. ವ್ಯವಸ್ಥೆ ಕುರಿತಂತೆ ಸಾಮಾನ್ಯ ಜನರಿಗೆ ಇರುವ ನಂಬಿಕೆಯನ್ನು ಮರುಸ್ಥಾಪನೆ ಮಾಡಿದ್ದಕ್ಕಾಗಿ ನಿಮಗೆ ಧನ್ಯವಾದ ಹೇಳುತ್ತೇನೆ' ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಭಾಗವತ್ ಹೆಸರಿಸುವಂತೆ ಒತ್ತಡ'

ಅದೊಂದು ಭಯಾನಕ ಅನುಭವ. ನಾನು ಕಸ್ಟಡಿಯಲ್ಲಿದ್ದಾಗ, ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಮೋಹನ್ ಭಾಗವತ್ (ಈಗ ಆರ್‌ಎಸ್‌ಎಸ್ ಮುಖ್ಯಸ್ಥ), ಯೋಗಿ ಆದಿತ್ಯನಾಥ (ಸದ್ಯ ಉತ್ತರ ಪ್ರದೇಶ ಮುಖ್ಯಮಂತ್ರಿ) ಅವರನ್ನು ಹೆಸರಿಸುವಂತೆ ಒತ್ತಡ ಹಾಕಲಾಗುತ್ತಿತ್ತು. ಇದೊಂದು ಸಂಪೂರ್ಣ ರಾಜಕೀಯ ಪ್ರೇರಿತ ಪ್ರಕರಣ ಎಂದು ಸುಧಾಕರ್ ಚತುರ್ವೇದಿ ಹೇಳಿದ್ದಾರೆ.

ಈಗ ಖುಲಾಸೆಗೊಂಡಿದ್ದೇನೆ. ಆದರೆ, ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಬಾಂಬೆ ಹೈಕೋರ್ಟ್, ನಂತರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವುದು ಖಾತ್ರಿ. ನಮ್ಮ ಹೋರಾಟ ಮುಂದುವರಿಯತ್ತದೆ ಎಂದಿದ್ದಾರೆ.

'ಕೆಲ ವರ್ಷಗಳ ಹಿಂದೆಯಷ್ಟೆ ನಾನು ಸನ್ಯಾಸ ಸ್ವೀಕರಿಸಿದ್ದೇನೆ. ಈಗ ಏನು ಮಾಡಬೇಕು ಎಂದು ತೋಚುತ್ತಿಲ್ಲ. ಎಲ್ಲಿ ಹೋಗಬೇಕು ಎಂದು ತಿಳಿಯುತ್ತಿಲ್ಲ' ಎಂದು ಹೇಳಿದ್ದಾರೆ.

'ಖುಲಾಸೆಯ ವಿಶ್ವಾಸ ಇತ್ತು'

17 ವರ್ಷಗಳಿಂದ ನಾನು ಈ ದಿನಕ್ಕಾಗಿ ಕಾಯುತ್ತಿದ್ದೆ. ನನಗೆ ನ್ಯಾಯಾಂಗದಲ್ಲಿ ನಂಬಿಕೆ ಇದೆ. ನಾವು ನಿರಪರಾಧಿಗಳು ಎಂಬ ಸತ್ಯಸಂಗತಿಗೆ ನ್ಯಾಯಾಲಯ ಮುದ್ರೆ ಒತ್ತುತ್ತದೆ ಎಂಬ ವಿಶ್ವಾಸ ಇತ್ತು ಎಂದು ಸಮೀರ್ ಕುಲಕರ್ಣಿ ಹೇಳಿದ್ದಾರೆ.

ಸಾಕು ಎನ್ನುವುದರ ಅಳತೆ...

ನುಡಿ ಬೆಳಗು



ದಯಾ ಗಂಗನಘಟ್ಟ

ಊರ ಗೌಡ ತೀರಿಕೊಂಡ. ಮಗ ಅವನ ತಿಥಿ ಕಾರ್ಯಗಳನ್ನು ಅದ್ದೂರಿಯಾಗಿ ನಡೆಸಿದ. ಎಲ್ಲ ಮುಗಿದ ಮೇಲೆ ಲೆಕ್ಕದವನನ್ನು ಕರೆದು ಅಪ್ಪನ ವ್ಯವಹಾರದ ಬಗ್ಗೆ ತಿಳಿದುಕೊಳ್ಳಲು 'ನಮ್ಮ ಬಳಿ ಎಷ್ಟು ಸಂಪತ್ತಿದೆ?' ಎಂದ. 'ನಾಲ್ಕು ತಲೆಮಾರಿನವರೆಗೆ ಕೂತು ತಿನ್ನುವಷ್ಟು' ಎಂದ ಅವನು.

ಅವತ್ತಿನಿಂದ ಗೌಡನಿಗೆ ನಾಲ್ಕು ತಲೆಮಾರಿನ ನಂತರ ನನ್ನ ಮನೆತನದವರ ಜೀವನ ಹೇಗೆ ಎಂಬ ಚಿಂತೆ ಶುರುವಾಯಿತು. ಅದರ ಬಗ್ಗೆ ಯೋಚಿಸಿ, ಕೆಲಸ ಮಾಡಿ, ಚಿಂತೆ ಮಾಡಿ ಅವನ ಆರೋಗ್ಯ ಹಾಳಾಗಿಹೋಯಿತು. ಗೌಡನ ಮನೆಯ ಹಿರಿಯ ಕೆಲಸಗಾರನಿಗೆ ಗೌಡ ಈ ಎಳಸುತನದ ಬೇಡದ ಯೋಚನೆಯಿಂದ ತಂದುಕೊಂಡ ಅನಾರೋಗ್ಯದ ಬಗ್ಗೆ ಬೇಜಾರಾಯಿತು. ಸಮಯ ನೋಡಿ ಆತ ಗೌಡನಿಗೆ 'ನಿಮ್ಮ ಚಿಂತೆ ದೂರವಾಗಬೇಕೆಂದರೆ ಪ್ರತಿ ದಿನ ಅವಶ್ಯಕತೆ ಇರುವ ಒಬ್ಬನಿಗೆ ಏನಾದರೂ ದಾನ ಮಾಡಿ' ಎಂದು ಒಂದು ಪರಿಹಾರ ಸೂಚಿಸಿದ. ಗೌಡ ಪ್ರತಿ ದಿನ ದಾನ ಕೊಡತೊಡಗಿದ. ಹೀಗೆ ಕೊಡುವಾಗ ಅವನಿಗೆ ಏನೂ ಇಲ್ಲದವರ ಸ್ಥಿತಿಯ ಅರಿವಾಗತೊಡಗಿತು.


ಒಂದು ದಿನ ಗೌಡನಿಂದ ದಾನ ಪಡೆಯಲು ಯಾರೂ ಬರಲೇ ಇಲ್ಲ. ಗೌಡ ಕಾಯ್ದೂ ಕಾಯ್ದೂ ಬೇಸತ್ತ. ಅಷ್ಟರಲ್ಲಿ ದಾರಿಯಲ್ಲಿ ರಸ್ತೆ ಸ್ವಚ್ಛ ಮಾಡುವ ಹೆಂಗಸೊಬ್ಬಳು ಹೋಗುತ್ತಿದ್ದಳು. ಗೌಡನಿಗೆ ಖುಷಿಯಾಯ್ತು. ಆಕೆಯನ್ನು ಕರೆದು 'ತಗೋ ನಿನಗಿವತ್ತು ಹಣ ಕೊಡುತ್ತೇನೆ' ಅಂದ. ಆಕೆ, 'ಸ್ವಲ್ಪ ಇರಿ ಸ್ವಾಮಿ' ಎಂದವಳು ತನ್ನ ಕೈಚೀಲವನ್ನು ಒಮ್ಮೆ ತೆಗೆದು ಅದೇನೋ ಎಣಿಸಿದವಳು ಗೌಡರ ಕಡೆ ನೋಡಿ 'ಸ್ವಾಮಿ, ನನಗೆ ಹಣ ಬೇಡ. ಇವತ್ತಿಗೆ ಸಾಕಾಗುವಷ್ಟು ಹಣ ಈಗಾಗಲೇ ನನ್ನ ಬಳಿ ಇದೆ. ಬೇರೆ ಯಾರಾದರೂ ಅಗತ್ಯ ಇರುವವರಿಗೆ ಕೊಟ್ಟುಬಿಡಿ' ಎಂದಳು.

ಗೌಡನಿಗೆ ಆಶ್ಚರ್ಯವಾಯಿತು. ಇದೇನಿದು! ನಾನು ನೋಡಿದರೆ ನಾಲ್ಕನೇ ತಲೆಮಾರಿನ ಉಣ್ಣುವ ಚಿಂತನೆಯಲ್ಲಿ ಹೈರಾಣಾಗಿದ್ದೇನೆ. ಈಕೆ ನೋಡಿದರೆ ನಾಳೆಯ ಚಿಂತೆಯನ್ನೂ ಮಾಡುತ್ತಿಲ್ಲವಲ್ಲ ಎಂದು ಯೋಚಿಸಿ 'ಏನಮ್ಮಾ ನಿನಗೆ ನಿನ್ನ ಮಕ್ಕಳ ಭವಿಷ್ಯದ ಮುಂದಾಲೋಚನೆ ಇಲ್ವಾ? ಹಣವಂತಳಾಗುವ, ಬೇಕಾದ್ದನ್ನು ಕೊಳ್ಳುವ, ಬಳಸುವ ಆಸೆಗಳಿಲ್ವಾ?' ಅಂದ. ಆಕೆ ನಗುತ್ತಾ 'ನನಗೂ ಖಂಡಿತಾ ಅವೆಲ್ಲಾ ಆಸೆಗಳಿವೆ ಸ್ವಾಮಿ, ಆದರೆ ನನಗಿನ್ನೂ ವಯಸ್ಸಿದೆ, ನನ್ನ ಮಕ್ಕಳು ಚೆನ್ನಾಗಿ ದುಡಿಯುತ್ತಿದ್ದಾರೆ. ಹಾಗಾಗಿ ನಿಮ್ಮ ದಾನ ಬೇಡವೆಂದೆ. ಅಗೋ ಅಲ್ಲಿ ಬರುತ್ತಿದ್ದಾನಲ್ಲ ಮುದುಕ, ಅವನಿಗೆ ನೀವು ಕೊಡಿ. ಅವನೀಗ ಕೆಲಸ ಮಾಡಲು ಅಶಕ್ತ. ನನಗಿಂತ ಅವನಿಗೆ ಇದರ ಅಗತ್ಯವಿದೆ' ಎಂದು ಮುಂದೆ ಹೋದಳು. ಆಗ ಗೌಡನಿಗೆ ತನ್ನ ಅಹಂ ಮತ್ತು ಆಕೆಯ ಸ್ವಾಭಿಮಾನ, ತನ್ನ ದುರಾಸೆ ಮತ್ತು ಆಕೆಯ ತೃಪ್ತಿ, ಆಕೆಯ ಆರೋಗ್ಯ ಮತ್ತು ತನ್ನ ಅನಾರೋಗ್ಯದ ನಡುವಿನ ಕಾರಣ ಅರ್ಥವಾಯಿತು.

ಹಣ ಮತ್ತು ಸವಲತ್ತುಗಳು ಯಾರಿಗಾದರೂ ಬೇಕೇಬೇಕು. ದೂರದೃಷ್ಟಿಯೂ ಇರಬೇಕು, ನಿಜ. ಆದರೆ ಅದಕ್ಕೆ ನಾವು ತೆರುವ ಬೆಲೆ ಎಂಥದ್ದು ಅನ್ನುವುದೂ ಬಹಳ ಮುಖ್ಯವಾದ ವಿಚಾರ. ಸಹಜವಾದ ಕಾಳಜಿ ಮತ್ತು ಕೆಲಸಗಳು ಅತಿಯಾಸೆ ಅಥವಾ ವ್ಯಸನವಾಗಿ ನಮ್ಮ ನೆಮ್ಮದಿಯನ್ನೇ ಹಾಳುಮಾಡುವಂತಿರಬಾರದು. ನಮ್ಮ ಸುತ್ತಮುತ್ತ ಅನಗತ್ಯ ಆಸ್ತಿ ಸಂಚಯ, ಬೇಡದ ಸಂಗ್ರಹಣೆ, ಕೊಳ್ಳುಬಾಕತನ ಇತ್ಯಾದಿ ದುರಾಸೆಯ ಗುಣಗಳನ್ನೇ ಬದುಕಿನ ದೂರಾಲೋಚನೆ ಎಂಬ ಭ್ರಮೆಯಲ್ಲಿ ಬದುಕುವವರನ್ನೇ ನೋಡುತ್ತಾ ಅವೇ ಇವತ್ತಿನ ಮೌಲ್ಯಗಳು ಎಂದು ನಾವು ಅಂದುಕೊಂಡಿದ್ದೇವೆ. ❖

ಪದಬಂಧ 6121

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಕೊನೆಗೆ ಪದವಿಟ್ಟರೆ ಮೋಕ್ಷವೇ ಸಿಗುವುದು! (5)
4.ದೃಷ್ಟಿಗೆ ದೂರವಾದುದು ಪಕ್ಷದೊಳಗಿದೆಯಲ್ಲಾ! (3)
5.ಪದಗಳ ಅರ್ಥವನ್ನು ಹೇಳುವ ಪುಸ್ತಕ (3)
6.ಸರ ನೀಡಿ ಪ್ರಾರಂಭಿಸಿದ ಸಲ್ಲಾಪ (3)
10.ಯೋಗವಿಟ್ಟುಕೊಂಡು ಮಾಡಿದ ಹಂಚಿಕೆ (4)
11.ಜೀವಿಸಿದರೂ ಶವದಂತೆ ಇರುವವನು (4)
12.ಒಳ್ಳೆಯ ದಿನವಿದು (3)
14.ಭವನದ ಹತ್ತಿರವಿರುವ ಗಂಡ (3)
16.ಕೋಟೆಯ ಮೇಲಿನ ಕೊತ್ತಳ (3)
17.ಬೆಂಗಳೂರಿನಲ್ಲಿರುವ ಭವ್ಯಸರ್ಕಾರಿ ಕಟ್ಟಡ (5)

ಮೇಲಿಂದ ಕೆಳಕ್ಕೆ

1.ಹದಿನೈದು ದಿನಗಳ ಅವಧಿ (2)
2.ಸವಿಯಾದುದು ಇದು (3)
3.ಇಂಪಾದ ಸ್ವರವಿದು (2)
6.ಮಧುರವಾದ ಸ್ವಪ್ನ (5)
7.ಜೊತೆಯಲ್ಲಿ ಬಾಳುವುದು (5)
8.ಮುಂದೆ ಬರಲಿರುವ ಕಾಲ (3)
9.ಬಣವೆ ಹಾಕುವಾಗ ಆಗಿರುವ ಕಷ್ಟ (3)
13.ದಿನದಲ್ಲಿ ಬಂದಿರುವ ಮಂತ್ರಿ (3)
15.ಸಂಸಾರ ಬಂಧನಕ್ಕೆ ಒಳಗಾದವನು (2)
16.ನವಗ್ರಹಗಳಲ್ಲಿ ಇದೊಂದು (2)

6120ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಜವಾನ 3.ಗತ್ಯಂತರ
5.ತಿಲಕ 7.ಗಡಿಯಾರ
9.ಮೆಲುಮಾತು 12.ನವಮಿ
14.ಚದುರಂಗ 15.ಕಠೋರ

ಮೇಲಿಂದ ಕೆಳಕ್ಕೆ:

1.ಜಯಂತಿ 2.ನರಕ
3.ಗಡಿಬಿಡಿ 4.ರಥಾಂಗ
6.ಲವಾಜಮೆ 7.ಗರತಿ
8.ರಥೋತ್ಸವ 10.ಮಾವಟಿಗ
11.ಚಮಚ 12.ನಡುಕ
13.ಮಿಹಿರ

ಸುಡೊಕು 6505

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		7		6				2
	8	1	5		2	3		
6		2		4		7		8
	7				9			
5		9			6		3	7
	6		7					4
2		3	8		4	6		
		6		2			8	9
8	1		6		7	4		

6504 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

01 ಆಗಸ್ಟ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಅಷ್ಟಮಿ ಅಹೋರಾತ್ರ **ನಕ್ಷತ್ರ:** ಸ್ವಾತಿ ಗಂ. 27-41 **ಯೋಗ:** ಶುಭ ಗಂ. 29-30 **ಕರಣ:** ವಿಷ್ಟಿ ಗಂ. 18-11, ಕರ್ನಾಟಕ ಮಾಸದ 16 ನೇ ದಿನ. **ಮಳೆ ನಕ್ಷತ್ರ:** ಪುಷ್ಯ 4 ನೇ ಪಾದ. **ರಾಹುಕಾಲ:** ಬೆಳಿಗ್ಗೆ 10-30 12-00, **ಸೂರ್ಯೋದಯ:** 06-19 **ಸೂರ್ಯಾಸ್ತ:** 06-55, **ಮುಸ್ಲಿಂ ದಿನಾಂಕ:** 06 ಸಫರ್, **ಅದೃಷ್ಟ ಸಂಖ್ಯೆ:** 4, 8

ಮೇಷ: ಸಾಹಸ ಮಾಡಿ ಪಡೆದುಕೊಂಡ ದ್ರವ್ಯವನ್ನು ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಸಕಾರಾತ್ಮಕ ನಡವಳಿಕೆಯಿಂದ ಲಾಭ ಹೊಂದುವಿರಿ. ಅಗತ್ಯ ವಸ್ತುಗಳಿಗೆ ಹಣ ವಿನಿಯೋಗ ಮಾಡಿದರೂ ಲೆಕ್ಕವಿರಲಿ.

ವೃಷಭ: ಮನೆಯ ಗೃಹಿಣಿಯರ ಚತುರತೆಯಿಂದ ಪುರುಷರಿಗೆ ಅನಾಯಾಸವಾಗಿ ಅನುಕೂಲವಾಗುತ್ತದೆ. ಎಷ್ಟೇ ಗಳಿಸಿದ್ದರೂ ಇನ್ನೂ ಗಳಿಸಬೇಕೆಂಬ ಅತಿಯಾದ ಆಸೆಯಿಂದ ವೇದನೆಯಾಗುವಂತೆ ಮಾಡದಿರಿ.

ಮಿಥುನ: ಗೋಮಾಳ, ಅರಣ್ಯ ಭೂಮಿ ಅಥವಾ ಇತರೆ ಸರ್ಕಾರಿ ಜಾಗಗಳ ಸಂಬಂಧಿ ಭೂವ್ಯಾಜ್ಯಗಳು ಹೆಗಲೇರುವ ಸಾಧ್ಯತೆ ಇದೆ. ತೀಕ್ಷ್ಣವಾದ ವೇದನೆ, ಕಾಯಿಲೆಗಳಿಂದ ಬಳಲುವವರಿಗೆ ಆಶಾಕಿರಣ ಗೋಚರಿಸುತ್ತದೆ.

ಕರ್ಕಾಟಕ: ಸಂಪಾದನೆಯಲ್ಲಿ ಮಾಡುತ್ತಿರುವ ಧಾರ್ಮಿಕ ಕೆಲಸಗಳು, ದಾನಾದಿ ಕಾರ್ಯಗಳು ಕುಟುಂಬಕ್ಕೆ ಶ್ರೇಯಸ್ಸನ್ನುಂಟು ಮಾಡುತ್ತವೆ. ಕುಟುಂಬದ ಜನರೊಂದಿಗೆ ಮನರಂಜನೆಗಾಗಿ ಸಮಯ ಮೀಸಲಿಡಿ.

ಸಿಂಹ: ಕೆಲಸ ಕಾರ್ಯಗಳಲ್ಲಿ ಇದ್ದ ಅಡಚಣೆಗಳು, ಅನವಶ್ಯಕ ವಾದ-ವಿವಾದಗಳು ಹಾಗೂ ಭಿನ್ನಾಭಿಪ್ರಾಯಗಳು ದೂರಾಗಲಿವೆ. ಉನ್ನತ ಸರ್ಕಾರಿ ನೌಕರರಿಗೆ ಬಡ್ತಿಯ ಯೋಗ. ಬಂಧುಗಳ ಆಗಮನದಿಂದ ಮನಸ್ಸಿಗೆ ಸಂತೋಷ.

ಕನ್ಯಾ: ಶಿಕ್ಷಕ ವೃಂದದವರಿಗೆ ಕೆಲಸದ ಒತ್ತಡ ಕಡಿಮೆ ಇರುವುದು. ಆಲಂಕಾರಿಕ ವಸ್ತುಗಳ ಮೇಲಿನ ಹಣ ವಿನಿಯೋಗ ಸರಿಯಲ್ಲ. ಕುಟುಂಬದಲ್ಲಿ ಆರ್ಥಿಕ ತೊಂದರೆಯಿಂದ ನಿಂತಿದ್ದ ಅನೇಕ ಕಾರ್ಯಗಳು ಮುಂದುವರಿಯಲಿವೆ.

ತುಲಾ: ಬೇಕಾದ ವಸ್ತು ನಿಮ್ಮಲ್ಲಿಯೇ ಇದ್ದರೂ, ಅಜ್ಞಾನದ ಕಾರಣ ಬೇರೆಲ್ಲಾ ಕಡೆ ಹುಡುಕುವಂತಾಗುತ್ತದೆ. ಕಟ್ಟಡ ನಿರ್ಮಾಣ ಮಾಡಿಸುತ್ತಿರುವವರಿಗೆ ಲಾಭ ನಷ್ಟಗಳ ಬಗ್ಗೆ ಪುನರಾವಲೋಕನ ಅಗತ್ಯ.

ವೃಶ್ಚಿಕ: ವಿಳಂಬವಾಗಿದ್ದ ಕೆಲಸ ಕಾರ್ಯಗಳು ಚುರುಕುಗೊಂಡು ಅನುಕೂಲ ಒದಗಿ ಬರಲಿವೆ. ಉನ್ನತ ವಿದ್ಯಾಭ್ಯಾಸಕ್ಕಾಗಿ ಬೇಕಾದ ಆರ್ಥಿಕ ವ್ಯವಸ್ಥೆಯು ಸಕಾಲದಲ್ಲಿ ಆಗಲಿದೆ. ತಂತ್ರಜ್ಞಾನದ ತರಬೇತಿ ಅನಿವಾರ್ಯ.


ಧನು: ಸಹನೆಯಿಂದ ಸಮಸ್ಯೆಗಳ ಪರಾಮರ್ಶೆ ಮಾಡಿದರೆ ಯಾವುದೂ ಕಷ್ಟಕರವಲ್ಲವೆಂಬ ಅರಿವಾಗುವುದು. ಪ್ರಾಮಾಣಿಕತೆಯಿಂದ ಮೇಲಧಿಕಾರಿಗಳ ನಂಬಿಕೆ ಪಡೆಯುವಿರಿ. ಯೋಗ್ಯರಿಗೆ ಮದುವೆಯ ಸುಯೋಗವಿದೆ.

ಮಕರ: ಇಂದು ಷರತ್ತುಗಳನ್ನು ಹೊಂದಿರುವ ಯಾವುದೇ ವ್ಯವಹಾರವನ್ನು ಒಪ್ಪಿಕೊಳ್ಳಬೇಡಿ. ವಿವಾಹದ ಬಗ್ಗೆ ಮನೆಯಲ್ಲಿ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು ಸರಿಯಾದ ದಿನ. ಲೇವಾದೇವಿ ವ್ಯವಹಾರದಲ್ಲಿ ಅನುಕೂಲ ಇರಲಿದೆ.


ಕುಂಭ: ಒತ್ತಡಗಳ ನಡುವೆಯೂ ಸಂತೋಷದಿಂದ ಇರಿ. ಸಕ್ರಿಯ ಹಾಗೂ ಕಾರ್ಯ ಮಗ್ನತೆಯ ದಿನವು ಇದಾಗಿದೆ. ಸಂಜೆ ಸ್ನೇಹಿತರ ಜೊತೆ ಕಾಲ ಕಳೆಯುವಿರಿ. ಹೊಸದೊಂದು ವಿಚಾರ ಸಿಗಲಿದೆ.

ಮೀನ: ಗುರಿಯನ್ನು ತಲುಪುವಲ್ಲಿ ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸುವುದು ಉತ್ತಮ. ಶ್ರಮವು ಸಾರ್ಥಕವೆನಿಸುವುದು. ಷೇರು ವ್ಯವಹಾರಗಳಲ್ಲಿ ಲಾಭವಿದೆ. ಕೆಲಸ ಬದಲಿಸುವ ಯೋಚನೆಗೆ ದಾರಿ ದೊರಕುವುದು.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,855
ಇಂದಿನ ಅಂತ್ಯ: 24,768
ದಿನದ ಕನಿಷ್ಠ: 24,635
86

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹475; 12 ಕ್ಕೆ ₹65
ಮೈಸೂರು: 100 ಕ್ಕೆ ₹480

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹400-615
ದ್ವಿತಳಿ (ಬಿ.ವಿ) ₹356-721

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹203
ಆರ್‌ಎಸ್‌ಎಸ್-5 ₹197
ಗುಡ್ ಲಾಟ್ ₹181

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1415 (1420)
ಸೋಯಾ (ರಿಫೈನ್ಡ್) ₹1235 (1240)
ಸೂರ್ಯಕಾಂತಿ (ರಿಫೈನ್ಡ್) ₹1365 (1370)
ಪಾಮೋಲಿನ್ ₹1200 (1205)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹30100-30100
ತಿಪಟೂರು ₹25000-28106
ತುಮಕೂರು ₹22500-24000
ತುರುವೇಕೆರೆ ₹28000-28000

ಸುಂಕ: ಬೆಳವಣಿಗೆ ಶೇ 0.30ರಷ್ಟು ಇಳಿಕೆ?

ಅಮೆರಿಕದ ಸುಂಕದ ದುಷ್ಪರಿಣಾಮ ಭಾರತದ ಜಿಡಿಪಿ ಬೆಳವಣಿಗೆ ಮೇಲೆ ಹೆಚ್ಚಿರಲಿಕ್ಕಿಲ್ಲ: ಬಾರ್ಕ್ಲೇಸ್ ಹೇಳಿಕೆ

ನವದೆಹಲಿ (ಪಿಟಿಐ): ಭಾರತದ ಸರಕುಗಳ ಮೇಲೆ ಅಮೆರಿಕವು ವಿಧಿಸಿರುವ ಶೇಕಡ 25ರಷ್ಟು ಸುಂಕ ಹಾಗೂ ರಷ್ಯಾದಿಂದ ಕಚ್ಚಾತೈಲ ಮತ್ತು ಶಸ್ತ್ರಾಸ್ತ್ರ ಆಮದು ಮಾಡಿಕೊಳ್ಳುತ್ತಿರುವುದಕ್ಕೆ ವಿಧಿಸಿರುವ ದಂಡದ ಕಾರಣದಿಂದಾಗಿ ಭಾರತದ ಜಿಡಿಪಿ ಬೆಳವಣಿಗೆಯು ಈ ವರ್ಷದಲ್ಲಿ ಶೇ 0.30ರಷ್ಟು ಕಡಿಮೆ ಆಗಬಹುದು ಎಂದು ಬ್ರಿಟನ್ನಿನ ಬ್ಯಾಂಕಿಂಗ್ ಕಂಪನಿ ಬಾರ್ಕ್ಲೇಸ್ ಅಂದಾಜು ಮಾಡಿದೆ.

ಭಾರತವು ದೇಶಿ ಬೇಡಿಕೆಯನ್ನು ಹೆಚ್ಚಾಗಿ ನೆಚ್ಚಿಕೊಂಡಿರುವ ಅರ್ಥ ವ್ಯವಸ್ಥೆಯನ್ನು ಹೊಂದಿರುವ ಕಾರಣಕ್ಕೆ ಅಮೆರಿಕದ ಸುಂಕವು ಗಣನೀಯ ಪ್ರಮಾಣದಲ್ಲಿ ಹಾನಿ ಉಂಟುಮಾಡಲಿಕ್ಕಿಲ್ಲ ಎಂದು ಅದು ಹೇಳಿದೆ.



ಭಾರತದ ಅರ್ಥವ್ಯವಸ್ಥೆಯು ಹೆಚ್ಚು ತೆರೆದುಕೊಂಡಿಲ್ಲ. ದೇಶದ ಆಂತರಿಕ ಬೇಡಿಕೆಯೇ ಬೆಳವಣಿಗೆಗೆ ಪ್ರಮುಖ ಆಧಾರ. ಹೀಗಾಗಿ, ಶೇ 25ರಷ್ಟು ಸುಂಕ ವಿಧಿಸುವ ಕ್ರಮವು ಜಿಡಿಪಿ ಬೆಳವಣಿಗೆಯ ಮೇಲೆ ದೊಡ್ಡ ಮಟ್ಟದಲ್ಲಿ ಪರಿಣಾಮ ಉಂಟುಮಾಡುವ ಸಾಧ್ಯತೆ ಕಾಣುತ್ತಿಲ್ಲ. ಭಾರತ ಮತ್ತು ಅಮೆರಿಕದ ನಡುವೆ ವ್ಯಾಪಾರ ಒಪ್ಪಂದದ ಕುರಿತು ಮಾತುಕತೆ ಮುಂದುವರಿದಿರುವ ಕಾರಣಕ್ಕೆ, ಅಂತಿಮವಾಗಿ ಸುಂಕದ ಪ್ರಮಾಣವು ಶೇ 25ಕ್ಕಿಂತ ಕಡಿಮೆ ಆಗುವ ನಿರೀಕ್ಷೆ ಇದೆ ಎಂದು ಸಂಸ್ಥೆ ಹೇಳಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಅಂದಾಜಿನ ಪ್ರಕಾರ ಈ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 6.5ರಷ್ಟು ಇರಲಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಅಂದಾಜಿನ ಪ್ರಕಾರ ಇದು ಶೇ 6.4ರಷ್ಟು ಇರಲಿದೆ.

ಬಾರ್ಕ್ಲೇಸ್ ಅಂದಾಜಿನ ಧಾಟಿಯಲ್ಲೇ ಅಭಿಪ್ರಾಯ ವ್ಯಕ್ತಪಡಿಸಿರುವ ಮೂಡಿಸ್ ಅನಾಲಿಟಿಕ್ಸ್‌ನ ಸಹಾಯಕ ಅರ್ಥಶಾಸ್ತ್ರಜ್ಞೆ ಅದಿತಿ ರಾಮನ್ ಅವರು 'ಭಾರತದ ಅರ್ಥ ವ್ಯವಸ್ಥೆಯು ಬಾಹ್ಯ ವ್ಯಾಪಾರದ ಮೇಲೆ ಬಹಳ ಕಡಿಮೆ ಅವಲಂಬನೆ ಹೊಂದಿದೆ. ಅರ್ಥ ವ್ಯವಸ್ಥೆಯು ದೇಶಿ ಬೇಡಿಕೆಯ ಮೇಲೆ ಹೆಚ್ಚು ಅವಲಂಬಿತವಾಗಿದೆ' ಎಂದು ಹೇಳಿದ್ದಾರೆ.

'ಔಷಧ, ಮುತ್ತು ಮತ್ತು ಜವಳಿ ಉದ್ಯಮದ ಮೇಲೆ ಏಟು ಬೀಳುವ ಸಾಧ್ಯತೆ ಇದೆ' ಎಂದು ಅದಿತಿ ಹೇಳಿದ್ದಾರೆ.

ಜವಳಿ ರಫ್ತಿಗೆ ಏಟು



ನವದೆಹಲಿ (ಪಿಟಿಐ): ಶೇ 25ರಷ್ಟು ಸುಂಕವು ಭಾರದಿಂದ ಅಮೆರಿಕಕ್ಕೆ ಜವಳಿ ಉತ್ಪನ್ನಗಳನ್ನು ರಫ್ತು ಮಾಡುವವರಿಗೆ ಏಟು ನೀಡುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

ಭಾರತದ ಜವಳಿ ಉತ್ಪನ್ನಗಳಿಗೆ ಅಮೆರಿಕವು ಅತಿದೊಡ್ಡ ವಿದೇಶಿ ಮಾರುಕಟ್ಟೆ. ವಿಯೆಟ್ನಾಂ ಮತ್ತು ಇಂಡೊನೇಷ್ಯಾಕ್ಕೆ ಹೋಲಿಸಿದರೆ ಭಾರತದಿಂದ ರಫ್ತಾಗುವ ಜವಳಿ ಉತ್ಪನ್ನಗಳ ಬೆಲೆಯು ಸುಂಕದ ಪರಿಣಾಮವಾಗಿ ಸ್ಪರ್ಧಾತ್ಮಕವಾಗಿ ಇರುವುದಿಲ್ಲ.

'ಸುಂಕ ಏರಿಕೆಯಿಂದಾಗಿ ಬೆಲೆ ಹೆಚ್ಚಾಗುತ್ತದೆ. ಹೀಗಾಗಿ, ಬೆಲೆಯನ್ನು ತಗ್ಗಿಸಲು ಒತ್ತಡ ಬರುತ್ತದೆ, ಕೆಲವು ಖರೀದಿ ಒಪ್ಪಂದ ರದ್ದಾಗಬಹುದು' ಎಂದು ಪರಿಣತರು ಹೇಳಿದ್ದಾರೆ.

ಮುತ್ತು ಮತ್ತು ಆಭರಣ ಉದ್ಯಮಕ್ಕೆ ಹಿನ್ನಡೆ

ಮುತ್ತು ಹಾಗೂ ಆಭರಣ ಉದ್ಯಮವು ಸುಂಕ ಹೆಚ್ಚಳದ ಕ್ರಮದಿಂದಾಗಿ ಹಿನ್ನಡೆ ಅನುಭವಿಸಲಿದೆ. 'ನಮಗೆ ಅಮೆರಿಕವು ಅತಿದೊಡ್ಡ ಮಾರುಕಟ್ಟೆ. ಉದ್ಯಮವು ನಡೆಸುವ ಜಾಗತಿಕ ವಹಿವಾಟಿನಲ್ಲಿ ಅಮೆರಿಕದ ಮಾರುಕಟ್ಟೆಯ ಪಾಲು ಶೇ 30ರಷ್ಟು ಇದೆ' ಎಂದು ಮುತ್ತು ಮತ್ತು ಆಭರಣ ರಫ್ತು ಉತ್ತೇಜನಾ ಮಂಡಳಿಯ ಅಧ್ಯಕ್ಷ ಕಿರೀಟ್ ಭನ್ಸಾಲಿ ಹೇಳಿದ್ದಾರೆ.

'ಇದು ಅಲ್ಪಕಾಲದ ಅಡೆತಡೆ'

ಅಮೆರಿಕವು ವಿಧಿಸಿರುವ ಸುಂಕವು ತಾತ್ಕಾಲಿಕ ಅಡೆತಡೆ ಮಾತ್ರ ಎಂದು ಭಾರತೀಯ ಅಕ್ಕಿ ರಫ್ತುದಾರರ ಒಕ್ಕೂಟ (ಐಆರ್‌ಇಎಫ್) ಹೇಳಿದೆ. ಈ ಸುಂಕ ಜಾರಿಗೆ ಬಂದರೂ, ಬೆಲೆ ನಿಗದಿ ವಿಚಾರದಲ್ಲಿ ವಿಯೆಟ್ನಾಂ ಮತ್ತು ಪಾಕಿಸ್ತಾನಕ್ಕಿಂತ ಉತ್ತಮ ಸ್ಥಾನದಲ್ಲಿ ಭಾರತ ಇರುತ್ತದೆ ಎಂದು ಒಕ್ಕೂಟ ಹೇಳಿದೆ.

'ಈ ಸುಂಕವು ದೀರ್ಘಾವಧಿಗೆ ಇರುವ ಅಡ್ಡಿ ಅಲ್ಲ. ಸರಿಯಾದ ಯೋಜನೆಗಳ ಮೂಲಕ ಭಾರತದ ಅಕ್ಕಿ ರಫ್ತುದಾರರು ಅಮೆರಿಕದ ಮಾರುಕಟ್ಟೆಯಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬಹುದು, ಬೆಳೆಸಿಕೊಳ್ಳಬಹುದು' ಎಂದು ಒಕ್ಕೂಟದ ರಾಷ್ಟ್ರೀಯ ಅಧ್ಯಕ್ಷ ಪ್ರೇಮ್ ಗರ್ಗ್ ಹೇಳಿದ್ದಾರೆ.

ಚೀನಾ, ವಿಯೆಟ್ನಾಂ, ಪಾಕಿಸ್ತಾನ ಮತ್ತು ಥಾಯ್ಲೆಂಡ್‌ನಿಂದ ಆಮದಾಗುವ ಅಕ್ಕಿಯ ಮೇಲೆ ವಿಧಿಸಿರುವ ಸುಂಕಕ್ಕಿಂತ ಭಾರತದ ಅಕ್ಕಿಯ ಮೇಲೆ ವಿಧಿಸಿರುವ ಸುಂಕವು ಕಡಿಮೆ ಇದೆ ಎಂದು ಅವರು ತಿಳಿಸಿದ್ದಾರೆ.

ಹಿತ ಕಾಯಲು ಸರ್ಕಾರ ಬದ್ಧ: ಗೋಯಲ್



ರಾಷ್ಟ್ರದ ಹಿತವನ್ನು ಕಾಯಲು ಕೇಂದ್ರ ಸರ್ಕಾರವು ಎಲ್ಲ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಸಂಸತ್ತಿನ ಉಭಯ ಸದನಗಳಲ್ಲಿ ಸ್ವಯಂಪ್ರೇರಿತವಾಗಿ ಹೇಳಿಕೆ ನೀಡಿದ ಸಚಿವ ಗೋಯಲ್, ಅಮೆರಿಕವು ವಿಧಿಸಿರುವ ಸುಂಕದ ಪರಿಣಾಮಗಳ ಬಗ್ಗೆ ಸರ್ಕಾರವು ಪರಿಶೀಲನೆ ನಡೆಸುತ್ತಿದೆ ಎಂದು ತಿಳಿಸಿದ್ದಾರೆ. ರಫ್ತುದಾರರು ಸೇರಿದಂತೆ ಸಂಬಂಧಪಟ್ಟ ಎಲ್ಲರ ಜೊತೆ ಸರ್ಕಾರವು ಮಾತುಕತೆ ನಡೆಸುತ್ತಿದೆ ಎಂದಿದ್ದಾರೆ.

'ರೈತರು, ಕಾರ್ಮಿಕರು, ಉದ್ಯಮಿಗಳು, ರಫ್ತುದಾರರು, ಎಂಎಸ್‌ಎಂಇ ವಲಯ ಹಾಗೂ ಉದ್ಯಮದ ಎಲ್ಲ ವಲಯಗಳ ಅಭಿವೃದ್ಧಿಗೆ ಸರ್ಕಾರವು ಅತ್ಯಂತ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ದೇಶದ ಹಿತಾಸಕ್ತಿಯನ್ನು ಕಾಪಾಡಲು ನಾವು ಎಲ್ಲ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ' ಎಂದು ಅವರು ಹೇಳಿದ್ದಾರೆ.

ಭಾರತವು ಕಚ್ಚಾ ತೈಲದ ಆಮದಿಗೆ ಹಲವು ದೇಶಗಳನ್ನು ನೆಚ್ಚಿಕೊಂಡಿದೆ. ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿರುವುದಕ್ಕೆ ದಂಡ ವಿಧಿಸುವ ಕ್ರಮ ಜಾರಿಗೆ ಬಂದರೆ, ಭಾರತದ ಸಂಸ್ಕರಣಾ ಕಂಪನಿಗಳು ಬೇರೆ ಪೂರೈಕೆದಾರರ ಕಡೆ ಮುಖ ಮಾಡಬಹುದು. ರಷ್ಯಾದ ಕಚ್ಚಾ ತೈಲ ಖರೀದಿಗೆ ಸಿಗುವ ರಿಯಾಯಿತಿಯ ಪ್ರಮಾಣ ಈಗ ಕಡಿಮೆ ಆಗಿದೆ

ಬಾರ್ಕ್ಲೇಸ್, ಬ್ರಿಟನ್ನಿನ ಬ್ಯಾಂಕಿಂಗ್ ಸಂಸ್ಥೆ

ರಫ್ತುದಾರರಲ್ಲಿ ಹೆಚ್ಚಿದ ತಲೆಬಿಸಿ



ನವದೆಹಲಿ (ಪಿಟಿಐ): ಶೇಕಡ 25ರಷ್ಟು ಸುಂಕದ ಪರಿಣಾಮಗಳ ಬಗ್ಗೆ ದೇಶದ ರಫ್ತುದಾರರು ತಲೆಬಿಸಿ ಮಾಡಿಕೊಂಡಿದ್ದಾರೆ.

ದಂಡದ ಪ್ರಮಾಣದ ಬಗ್ಗೆ ಸ್ಪಷ್ಟತೆ ಸಿಗುವವರೆಗೆ ಭಾರತದಿಂದ ಸರಕುಗಳ ಖರೀದಿ ಬೇಡ ಎಂದು ಅಮೆರಿಕದ ಖರೀದಿದಾರರು ಖರೀದಿ ಆದೇಶಗಳನ್ನು ರದ್ದುಪಡಿಸುತ್ತಿದ್ದಾರೆ ಅಥವಾ ಅವುಗಳನ್ನು ತಡೆಹಿಡಿಯುತ್ತಿದ್ದಾರೆ ಎಂದು ರಫ್ತು ವಹಿವಾಟಿನಲ್ಲಿ ತೊಡಗಿಸಿಕೊಂಡವರು ತಿಳಿಸಿದ್ದಾರೆ.

ಸುಂಕ ಮತ್ತು ದಂಡದ ಬಗ್ಗೆ ಸ್ಪಷ್ಟತೆ ಪಡೆದುಕೊಳ್ಳಲು ಅಮೆರಿಕವು ಕಾರ್ಯಾದೇಶ ಹೊರಡಿಸುವುದನ್ನು ಕಾಯಲಾಗುತ್ತಿದೆ ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟ ತಿಳಿಸಿದೆ.

ಸುದ್ದಿ 2 ನಿಮಿಷ

ಅಮೆರಿಕದ ಸುಂಕ: ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಭಾರತದ ಸರಕುಗಳ ಮೇಲೆ ಅಮೆರಿಕವು ಶೇ 25ರಷ್ಟು ಸುಂಕ ವಿಧಿಸಿರುವುದರ ಪರಿಣಾಮವು ಗುರುವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆಗಳಲ್ಲಿ ಕಂಡುಬಂತು. ದಿನದ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ಕಂಡವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 296 ಅಂಶ ಇಳಿಕೆಯಾಗಿ, 81,185ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ನಡುವೆ ಸೂಚ್ಯಂಕವು 786 ಅಂಶಗಳವರೆಗೆ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 86 ಅಂಶ ಕಡಿಮೆಯಾಗಿ, 24,768ಕ್ಕೆ ಕೊನೆಗೊಂಡಿದೆ.

ಟಾಟಾ ಸ್ಟೀಲ್, ಸನ್ ಫಾರ್ಮಾ, ರಿಲಯನ್ಸ್ ಇಂಡಸ್ಟ್ರೀಸ್, ಅದಾನಿ ಪೋರ್ಟ್ಸ್, ಎನ್‌ಟಿಪಿಸಿ ಮತ್ತು ಏಷ್ಯನ್ ಪೇಂಟ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆ ಆಗಿದೆ. ಹಿಂದೂಸ್ತಾನ್ ಯೂನಿಲಿವರ್, ಎಟರ್ನಲ್, ಐಟಿಸಿ, ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು ಪವರ್ ಗ್ರಿಡ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.



ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.74ರಷ್ಟು ಕಡಿಮೆಯಾಗಿದೆ. ಪ್ರತೀ ಬ್ಯಾರೆಲ್ ದರವು 72.70 ಡಾಲರ್ ಆಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರದ ವಹಿವಾಟಿನಲ್ಲಿ ₹850 ಕೋಟಿಯಷ್ಟು ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಮಾರುತಿ ಸುಜುಕಿಗೆ ₹3,792 ಕೋಟಿ ಲಾಭ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಮಾರುತಿ ಸುಜುಕಿ ಇಂಡಿಯಾ ₹3,792 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹3,760 ಕೋಟಿ ಲಾಭ ಗಳಿಸಿತ್ತು. ವಾಹನಗಳ ರಫ್ತು ಹೆಚ್ಚಳದಿಂದ ಲಾಭದ ಪ್ರಮಾಣದಲ್ಲಿ ಸ್ವಲ್ಪ ಏರಿಕೆಯಾಗಿದೆ ಎಂದು ಕಂಪನಿ ಗುರುವಾರ ಷೇರುಪೇಟೆಗೆ ತಿಳಿಸಿದೆ.

ಒಟ್ಟು ವರಮಾನವು ₹40,493 ಕೋಟಿಯಾಗಿದೆ. ಕಳೆದ ಬಾರಿ ಇದು ₹36,840 ಕೋಟಿಯಷ್ಟಿತ್ತು.

ದೇಶೀಯವಾಗಿ ವಾಹನಗಳ ಮಾರಾಟ ಶೇ 4.5ರಷ್ಟು ಕಡಿಮೆಯಾಗಿದ್ದರೆ, ರಫ್ತು ಶೇ 37ರಷ್ಟು ಹೆಚ್ಚಳವಾಗಿದೆ. ಕಂಪನಿಯು ಒಟ್ಟು 5,27,861 ವಾಹನಗಳನ್ನು ಮಾರಾಟ ಮಾಡಿದೆ. ಈ ಪೈಕಿ 4,30,889 ವಾಹನಗಳು ದೇಶೀಯವಾಗಿ ಮಾರಾಟವಾಗಿದ್ದರೆ, 96,972 ವಾಹನಗಳು ರಫ್ತಾಗಿವೆ ಎಂದು ತಿಳಿಸಿದೆ.

ದರ ಹೆಚ್ಚಳದಿಂದ ಕುಸಿದ ಬೇಡಿಕೆ: ಡಬ್ಲ್ಯುಜಿಸಿ

ಚಿನ್ನದ ಬೇಡಿಕೆ ಶೇ 10 ಇಳಿಕೆ

ಮುಂಬೈ (ಪಿಟಿಐ): ದೇಶದ ಚಿನ್ನದ ಬೇಡಿಕೆ ಜೂನ್ ತ್ರೈಮಾಸಿಕದಲ್ಲಿ ಶೇ 10ರಷ್ಟು ಕಡಿಮೆಯಾಗಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ವರದಿ ಗುರುವಾರ ತಿಳಿಸಿದೆ.

ಕಳೆದ ವರ್ಷದ ಜೂನ್ ತ್ರೈಮಾಸಿಕದಲ್ಲಿ 149.7 ಟನ್ ಚಿನ್ನಕ್ಕೆ ಬೇಡಿಕೆ ಇತ್ತು. ಅದು ಈ ಬಾರಿ 134.9 ಟನ್‌ಗೆ ಇಳಿದಿದೆ. ಹಳದಿ ಲೋಹದ ದರ ಹೆಚ್ಚಳವೇ ಬೇಡಿಕೆ ಕಡಿಮೆ ಆಗಲು ಕಾರಣ ಎಂದು ತಿಳಿಸಿದೆ.

ಮೌಲ್ಯದ ಲೆಕ್ಕದಲ್ಲಿ 2024ರ ಜೂನ್ ತ್ರೈಮಾಸಿಕದಲ್ಲಿ ಚಿನ್ನದ ಬೇಡಿಕೆಯು ₹93,850 ಕೋಟಿಯಷ್ಟಿತ್ತು. ಅದು ಈ ಬಾರಿ ₹1,21,800 ಕೋಟಿಯಷ್ಟಾಗಿದ್ದು, ಶೇ 30ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಚಿನ್ನದ ದರ ಹೆಚ್ಚಳವು ಆಭರಣಗಳ ಬೇಡಿಕೆ ಮೇಲೆ ಪರಿಣಾಮ ಬೀರಿದ್ದು, ಬೇಡಿಕೆಯು ಶೇ 17ರಷ್ಟು ಇಳಿದಿದೆ. ಆದರೆ, ಮೌಲ್ಯದ ಲೆಕ್ಕದಲ್ಲಿ ಆಭರಣಗಳಿಗೆ ಬೇಡಿಕೆ ಶೇ 20ರಷ್ಟು ಹೆಚ್ಚಳವಾಗಿದ್ದು, ₹80,150 ಕೋಟಿಯಾಗಿದೆ ಎಂದು ತಿಳಿಸಿದೆ.

'ಪ್ರಸಕ್ತ ವರ್ಷದ ಜನವರಿಯಿಂದ ಜೂನ್‌ವರೆಗೆ ಚಿನ್ನದ ಒಟ್ಟು ಬೇಡಿಕೆ ಅಂದಾಜು 253 ಟನ್ ಆಗಿದೆ. ಈ ವರ್ಷದ ಕೊನೆಯ ವೇಳೆಗೆ ಬೇಡಿಕೆಯು 600 ಟನ್‌ನಿಂದ 700 ಟನ್ ಆಗುವ ನಿರೀಕ್ಷೆ ಇದೆ. ದರ ಸ್ಥಿರವಾಗಿದ್ದರೆ ಬೇಡಿಕೆ 700 ಟನ್ ದಾಟಬಹುದು' ಎಂದು ಸಮಿತಿಯ ಭಾರತದ ಸಿಇಒ ಸಚಿನ್ ಜೈನ್ ಹೇಳಿದ್ದಾರೆ.

ಬೆಳ್ಳಿ ದರ ಕೆ.ಜಿಗೆ ₹2 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ದರ ಇಳಿಕೆಯಾಗಿದೆ.



10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹500 ಕಡಿಮೆಯಾಗಿ, ₹98,020ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ದರವು (ಶೇ 99.5 ಪರಿಶುದ್ಧತೆ) ₹400 ಇಳಿಕೆಯಾಗಿ, ₹97,800 ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹2 ಸಾವಿರ ಕಡಿಮೆಯಾಗಿ, ₹1.12 ಲಕ್ಷವಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಬೆಳ್ಳಿ ದರ ಇಳಿಕೆಯಾಗಿದೆ. ಹೀಗಾಗಿ, ದೇಶದ ಮಾರುಕಟ್ಟೆಯಲ್ಲೂ ದರ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಮ್ಯಾನ್ಮಾರ್: ತುರ್ತು ಪರಿಸ್ಥಿತಿ ಅಂತ್ಯ; ಚುನಾವಣೆಗೆ ಸಿದ್ಧತೆ

ಬ್ಯಾಂಕಾಕ್ (ಪಿಟಿಐ): ನಾಲ್ಕೂವರೆ ವರ್ಷದಿಂದ ಸೇನಾಡಳಿತದಡಿಯಲ್ಲಿದ್ದ ಮ್ಯಾನ್ಮಾರ್‌ನ ಸೇನೆಯು ಗುರುವಾರ ತುರ್ತು ಪರಿಸ್ಥಿತಿ ಹಿಂದಕ್ಕೆ ಪಡೆದಿರುವುದಾಗಿ ಘೋಷಿಸಿದೆ.

ಈ ವರ್ಷಾಂತ್ಯದಲ್ಲಿ ಹೊಸದಾಗಿ ಚುನಾವಣೆ ನಡೆಸುವ ಸಂಬಂಧ ಆಡಳಿತ ವಿಭಾಗಗಳನ್ನು ಪುನರಾಚನೆ ಮಾಡಲಾಗಿದೆ ಎಂದು ತಿಳಿಸಿದೆ.

ಡಿಸೆಂಬರ್ ತಿಂಗಳಲ್ಲಿ ಚುನಾವಣೆ ನಡೆಯಲಿದ್ದು, ದಿನಾಂಕ ಇನ್ನಷ್ಟೇ ನಿಗದಿಯಾಗಬೇಕಿದೆ. ದೇಶದಲ್ಲಿ ನಡೆಯುತ್ತಿರುವ ಅಂತರ್ಯುದ್ಧ ಹಾಗೂ ಸೇನಾ ವಿರೋಧಿ ಹೋರಾಟದಿಂದ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಯುವ ಕುರಿತು ಅನುಮಾನ ವ್ಯಕ್ತವಾಗಿದೆ. ಸೇನಾ ಮುಖ್ಯಸ್ಥ ಮಿನ್ ಅಂಗ್ ಹ್ಲಿಯಾಂಗ್ ಕೂಡ ಸರ್ಕಾರದ ಮುಖ್ಯಸ್ಥರಾಗಿ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಗುರುವಾರ ರಾತ್ರಿಯಿಂದಲೇ ತುರ್ತು ಪರಿಸ್ಥಿತಿ ಕೊನೆಗೊಳಿಸಲಾಗಿದೆ ಎಂದು ತಿಳಿಸಲಾಗಿದೆ.

ಮುಂಬೈ ಧಾರಣೆ (ಶೇಂಗಾ)

31-07-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7300-7400
ದಪ್ಪ ಗುಜರಾತ್ (ಹೊಸ)	8300-8400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1425 (1430)
ಒಂದು ವಾರದ ಡೆಲಿವರಿ	1420 (1425)
ಪಾಮ್ ವಾರದ ಡೆಲಿವರಿ	1198 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1280)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	98,250 (98,400)
ಬೆಳ್ಳಿ ಕೆ.ಜಿಗೆ	1,10,300 (1,13,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

12,000 ಉದ್ಯೋಗಿಗಳನ್ನು ತೆಗೆದುಹಾಕುವ ಕ್ರಮ

ಟಿಸಿಎಸ್‌ಗೆ ಸಮನ್ಸ್: ಸಚಿವ ಲಾಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: '12,000 ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕುವ ಬಗ್ಗೆ ವಿವರಣೆ ನೀಡಿ ಎಂದು ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್‌ಗೆ (ಟಿಸಿಎಸ್) ಸಮನ್ಸ್ ನೀಡಲಾಗಿದೆ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಟಿಸಿಎಸ್ ಕಂಪನಿಯು 12,000 ಉದ್ಯೋಗಿಗಳನ್ನು ತೆಗೆದುಹಾಕುತ್ತಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಯಾವ ಕಾರಣದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಮಾಹಿತಿ ನೀಡಿ ಎಂದು ಸೂಚಿಸಿದ್ದೇವೆ' ಎಂದರು.

'ಟಿಸಿಎಸ್‌ನಂತಹ ಕಂಪನಿಗಳಿಗೆ ಕಾರ್ಮಿಕ ಕಾನೂನುಗಳಿಂದ ವಿನಾಯತಿ ನೀಡಲಾಗಿದೆ. ಐದು ವರ್ಷಗಳಿಂದ ವಿನಾಯತಿಯನ್ನು ವಿಸ್ತರಿಸಿಕೊಂಡೇ ಬರಲಾಗುತ್ತಿದೆ. ಆದರೆ ಕೆಲವಾರು ಷರತ್ತುಗಳು ಅವುಗಳಿಗೂ ಅನ್ವಯವಾಗುತ್ತವೆ' ಎಂದು ಮಾಹಿತಿ ನೀಡಿದರು.

'ಇಂತಹ ಕಂಪನಿಗಳು ದೊಡ್ಡ ಸಂಖ್ಯೆಯಲ್ಲಿ ಉದ್ಯೋಗಿಗಳನ್ನು ತೆಗೆದುಹಾಕಬೇಕು ಎಂದರೆ ನಮಗೆ ಮಾಹಿತಿ ಒದಗಿಸಬೇಕು. ಈ ನಿಯಮದ ಅಡಿಯಲ್ಲೇ ಅವರಿಂದ ವಿವರಣೆ ಕೇಳಲಾಗಿದೆ. ನಮ್ಮ ಇಲಾಖೆಯ ಅಧಿಕಾರಿಗಳು ಟಿಸಿಎಸ್ ಪ್ರತಿನಿಧಿಗಳಿಗೆ ಕರೆ ಮಾಡಿ, ಮಾಹಿತಿ ನೀಡಿ ಎಂದು ಸೂಚಿಸಿದ್ದಾರೆ' ಎಂದು ತಿಳಿಸಿದರು.

10 ತಾಸು ಕೆಲಸಕ್ಕೆ ಅನುಮತಿ ಇಲ್ಲ: 'ಟಿಸಿಎಸ್ ಸೇರಿ ಹಲವು ಐಟಿ ಕಂಪನಿಗಳು ಕೆಲಸದ ಅವಧಿಯನ್ನು 10 ತಾಸಿಗೆ ಹೆಚ್ಚಿಸಲು ಅನುಮತಿ ನೀಡಿ ಎಂದು ಮನವಿ ಸಲ್ಲಿಸಿದ್ದವು. ಕೆಲಸದ ಅವಧಿಯನ್ನು 10 ತಾಸಿಗೆ ಹೆಚ್ಚಿಸಲು ಸಾಧ್ಯವಿಲ್ಲ ಎಂದು ಕಂಪನಿಗಳಿಗೆ ತಿಳಿಸಲಾಗಿದೆ' ಎಂದು ಸಂತೋಷ್ ಲಾಡ್ ತಿಳಿಸಿದರು.

ಟಿವಿಎಸ್ ಕ್ರೆಡಿಟ್ ಸರ್ವಿಸಸ್ ಲಾಭ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕೇತರ ಹಣಕಾಸು ಕಂಪನಿ ಟಿವಿಎಸ್ ಕ್ರೆಡಿಟ್ ಸರ್ವಿಸಸ್ ಲಿಮಿಟೆಡ್, ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹181 ಕೋಟಿ ತೆರಿಗೆ ನಂತರದ ಲಾಭ (ಪಿಎಟಿ) ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹140 ಕೋಟಿ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭ ಶೇ 29ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿ ತಿಳಿಸಿದೆ. ಒಟ್ಟು ವರಮಾನವು ₹1,697 ಕೋಟಿಯಾಗಿದೆ. ಸಾಲ ನೀಡಿಕೆ ಪ್ರಮಾಣದಲ್ಲಿ ಶೇ 12ರಷ್ಟು ಹೆಚ್ಚಳವಾಗಿದೆ. ಒಟ್ಟು ಸಾಲಗಳ ನಿರ್ವಹಣಾ ಮೌಲ್ಯವು (ಎಯುಎಂ) ₹26,898 ಕೋಟಿಯಾಗಿದೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಪುತ್ತೂರು	
ಕೋಕ	20000-27500
ಹೊಸತು	26000-48500
ಹಳತು	37500-52500

ಸಾಗರ	
ಬಿಳಿಗೋಟು	6099-27313
ಚಾಲಿ	22666-38599
ಕೋಕ	5869-22399
ಕೆಂಪುಗೋಟು	20169-27700
ರಾಶಿ	27299-57529
ಸಿಪ್ಪೆಗೋಟು	6666-20189

ಶಿವಮೊಗ್ಗ	
ಬೆಟ್ಟೆ	51554-60699
ಗೊರಬಲು	18020-33709
ರಾಶಿ	44666-57699
ಸರಕು	50100-94196

ಸಿದ್ದಾಪುರ	
ಬಿಳಿಗೋಟು	25089-32419
ಚಾಲಿ	34369-43329
ಕೋಕ	16219-26669
ಕೆಂಪುಗೋಟು	20669-24900
ರಾಶಿ	46099-48899
ತಟ್ಟಿಬೆಟ್ಟೆ	29099-39319

ಶಿರಸಿ	
ಬೆಟ್ಟೆ	28009-37609
ಬಿಳಿಗೋಟು	22099-35699
ಚಾಲಿ	38818-43922
ಕೆಂಪುಗೋಟು	18099-24989
ರಾಶಿ	42999-48999

ಯಲ್ಲಾಪುರ	
ಬಿಳಿಗೋಟು	17699-33299
ಚಾಲಿ	34323-43699
ಕೋಕ	9312-19099
ಕೆಂಪುಗೋಟು	16899-27089
ರಾಶಿ	39709-57000
ತಟ್ಟಿಬೆಟ್ಟೆ	31306-36899

'ನೌಕರರ ವೇತನ ಪರಿಷ್ಕರಣೆ 2027ಕ್ಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರಿಗೆ ನಿಗಮಗಳ ನೌಕರರ ವೇತನವನ್ನು 2023ರ ಮಾರ್ಚ್‌ನಲ್ಲಿ ಶೇ 15ರಷ್ಟು ಏರಿಕೆ ಮಾಡಲಾಗಿತ್ತು. ಮುಂದಿನ ಪರಿಷ್ಕರಣೆ 2027ರ ನಂತರ ಮಾತ್ರ ಸಾಧ್ಯ' ಎಂದು ಸಾರಿಗೆ ಇಲಾಖೆಯು ಪ್ರತಿಪಾದಿಸಿದೆ.

'2020ರಲ್ಲಿ ನಡೆಯಬೇಕಿದ್ದ ಪರಿಷ್ಕರಣೆಯು ಕೋವಿಡ್‌ನ ಕಾರಣದಿಂದ ಮುಂದಕ್ಕೆ ಹೋಗಿತ್ತು. ಪರಿಷ್ಕರಣೆ ಮೂರು ವರ್ಷ ತಡವಾಯಿತು ಎಂದೇ, ಆರ್ಥಿಕ ನಿಯಮಾವಳಿಗಳ ಪ್ರಕಾರ 2023ರಲ್ಲಿ ಶೇ 15ರಷ್ಟು ಏರಿಕೆ ಮಾಡಲಾಗಿತ್ತು. ಸರ್ಕಾರಿ ನೌಕರರಿಗೂ ಈ ಮಟ್ಟದ ವೇತನ ಏರಿಕೆ ನೀಡಿಲ್ಲ' ಎಂದು ಇಲಾಖೆಯ ಮೂಲಗಳು ಹೇಳಿವೆ.

'ವೇತನ ಪರಿಷ್ಕರಣೆಗೆ ಒತ್ತಾಯಿಸಿ ಮುಷ್ಕರಕ್ಕೆ ಕರೆ ನೀಡಿರುವ ಸಾರಿಗೆ ನಿಗಮಗಳ ನೌಕರರ ಸಂಘಟನೆಗಳ ಬೇಡಿಕೆಯಲ್ಲಿಯೇ ಒಮ್ಮತ ಇಲ್ಲ. ಬೇಡಿಕೆ ವಿಚಾರದಲ್ಲಿ ಸಂಘಟನೆಗಳು ಮೊದಲು ಒಮ್ಮತಕ್ಕೆ ಬರಲಿ. ಇಲ್ಲದಿದ್ದಲ್ಲಿ, ಯಾರ ಬೇಡಿಕೆಯನ್ನು ನಾವು ಪರಿಗಣಿಸಬೇಕು' ಎಂದು ಪ್ರಶ್ನಿಸಿವೆ.

'2023ರ ವೇತನ ಪರಿಷ್ಕರಣೆಯನ್ನು 2020ಕ್ಕೆ ಅನ್ವಯಿಸಿ, 38 ತಿಂಗಳ ಪರಿಷ್ಕೃತ ವೇತನದ ಬಾಕಿ ಪಾವತಿಸಿ ಎಂದು ಕೆಲ ಸಂಘಟನೆಗಳು ಕೋರಿವೆ. 2023ರ ಆದೇಶದಲ್ಲಿ, ಪರಿಷ್ಕರಣೆ 2020ಕ್ಕೆ ಅನ್ವಯಿಸುತ್ತದೆ ಎಂದು ಎಲ್ಲಿ ಉಲ್ಲೇಖಿಸಲಾಗಿದೆ? 2023ರಲ್ಲಿ ಪರಿಷ್ಕರಣೆ ಆದೇಶ ಹೊರಡಿಸಿದ್ದು ಹಿಂದಿನ ಸರ್ಕಾರ. ಆ ಆದೇಶವನ್ನು ಈಗಿನ ಸರ್ಕಾರ ಯಾವ ಮಾನದಂಡದ ಆಧಾರದಲ್ಲಿ ಬದಲಿಸಲು ಸಾಧ್ಯ? ವೇತನ ಪರಿಷ್ಕರಣೆಯನ್ನು ಪೂರ್ವಾನ್ವಯ ಮಾಡಲಾಗುವುದಿಲ್ಲ' ಎಂದು ಪ್ರತಿಪಾದಿಸಿವೆ.

'ಸರ್ಕಾರಿ ನೌಕರರಿಗೆ ಸಮನಾದ ವೇತನ ನೀಡಬೇಕು ಎಂದು ಕೆಲ ಸಂಘಟನೆಗಳು ಬೇಡಿಕೆ ಇಟ್ಟಿವೆ. ಸಾರಿಗೆ ನೌಕರರು ಸರ್ಕಾರಿ ನೌಕರರಲ್ಲ. ಸಾರಿಗೆ ನಿಗಮಗಳ ರೀತಿ ಸರ್ಕಾರದಡಿಯಲ್ಲಿ 62ಕ್ಕೂ ಹೆಚ್ಚು ನಿಗಮ–ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಿಗೆ ಅನ್ವಯವಾಗುವ ನಿಯಮಗಳ ಅಡಿಯಲ್ಲೇ ಪರಿಷ್ಕರಣೆ ನಡೆಯಬೇಕು. ನಿಯಮದಂತೆ 2023ರ ನಾಲ್ಕು ವರ್ಷದ ನಂತರ, ಅಂದರೆ 2027ರ ಮಾರ್ಚ್‌ನಲ್ಲಿ ಮಾತ್ರ ಪರಿಷ್ಕರಣೆ ಮಾಡಲು ಸಾಧ್ಯ' ಎಂದಿವೆ.

'ಮುಷ್ಕರ ಕೈಬಿಡಬೇಕು'

'ಸಾರಿಗೆ ನಿಗಮಗಳ ನೌಕರರ ಶ್ರೇಯಕ್ಕಾಗಿ ಸರ್ಕಾರ ಹಲವು ಕ್ರಮ ತೆಗೆದುಕೊಂಡಿದೆ. ಆರೇಳು ವರ್ಷಗಳಿಂದ ಸ್ಥಗಿತವಾಗಿದ್ದ ನೇಮಕಾತಿಗೆ ಚಾಲನೆ ನೀಡಿದ್ದು, 10,000 ಹುದ್ದೆಗಳಿಗೆ ನೇಮಕಾತಿ ಆರಂಭವಾಗಲಿದೆ. ಅವುಗಳಲ್ಲಿ 1,000 ಅನುಕಂಪದ ನೇಮಕಾತಿಗಳೂ ಇವೆ. 5,200 ಹೊಸ ಬಸ್‌ಗಳನ್ನು ಸೇರ್ಪಡೆ ಮಾಡಲಾಗಿದೆ. ನೌಕರರು ಮುಷ್ಕರವನ್ನು ಕೈಬಿಡಬೇಕು' ಎಂದು ಸಾರಿಗೆ ಇಲಾಖೆ ಕೋರಿದೆ.

ಡಬ್ಲ್ಯುಇಎಫ್ ಪ್ರತಿನಿಧಿಗಳ ಜತೆ ಸಚಿವ ಎಂ.ಬಿ.ಪಾಟೀಲ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಮತ್ತು ಸ್ವಿಟ್ಜರ್ಲೆಂಡ್ ಮಧ್ಯೆ ಆಗಿರುವ ಮುಕ್ತ ವ್ಯಾಪಾರ ಒಪ್ಪಂದದ ಅನುಕೂಲಗಳನ್ನು, ಕರ್ನಾಟಕವು ಪಡೆದುಕೊಳ್ಳುವ ವಿಚಾರವಾಗಿ ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ನಿಯೋಗದ ಜತೆಗೆ ಚರ್ಚಿಸಲಾಯಿತು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಡಬ್ಲ್ಯುಇಎಫ್‌ನ ದಕ್ಷಿಣ ಏಷ್ಯಾದ ಪ್ರತಿನಿಧಿ ಅದಿತಿ ವ್ಯಾಸ್ ಅವರ ನೇತೃತ್ವದ ನಿಯೋಗವು ಗುರುವಾರ ಎಂ.ಬಿ.ಪಾಟೀಲರನ್ನು ಭೇಟಿ ಮಾಡಿ, ಚರ್ಚೆ ನಡೆಸಿತು.



ಎಂ.ಬಿ. ಪಾಟೀಲ

ಈ ಬಗ್ಗೆ ಪ್ರಕಟಣೆ ನೀಡಿರುವ ಸಚಿವರು, 'ಸ್ವಿಟ್ಜರ್ಲೆಂಡ್ ಮತ್ತು ಕರ್ನಾಟಕ ರಾಜ್ಯ ಸರ್ಕಾರವು ವ್ಯಾಪಾರ, ವಾಣಿಜ್ಯ, ಹೂಡಿಕೆ ಕ್ಷೇತ್ರಗಳಲ್ಲಿನ ಅವಕಾಶಗಳನ್ನು ಬಳಕೆ ಮಾಡಿಕೊಳ್ಳುವ ಸಾಧ್ಯತೆಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು' ಎಂದು ತಿಳಿಸಿದ್ದಾರೆ.

'ಹೊಸ ಕೈಗಾರಿಕೆಗಳ ಕ್ಲಸ್ಟರ್‌ಗಳ ಸ್ಥಾಪನೆ, ಪರಿಶುದ್ಧ ಜಲಜನಕ ಮತ್ತಿತರ ಕ್ಷೇತ್ರಗಳಲ್ಲಿ ಹೊಸ ಉದ್ದಿಮೆ ಅವಕಾಶಗಳ ಬಗ್ಗೆ ಸ್ವಿಟ್ಜರ್ಲೆಂಡ್ ಮತ್ತು ಕರ್ನಾಟಕದ ಪಾಲುದಾರಿಕೆಗೆ ವಿಪುಲ ಅವಕಾಶಗಳು ಇವೆ ಎಂದು ಅದಿತಿ ವ್ಯಾಸ್ ಅವರು ಅಭಿಪ್ರಾಯ ಪಟ್ಟರು. ಡಬ್ಲ್ಯುಇಎಫ್, ಸೌದಿ ಅರೇಬಿಯಾದಲ್ಲಿ ಎರಡು ವರ್ಷಕ್ಕೊಮ್ಮೆ ಸಮಾವೇಶ ನಡೆಸುತ್ತದೆ. ಅದರಲ್ಲಿ ಭಾಗಿಯಾಗುವಂತೆ ಆಮಂತ್ರಿಸಿದರು' ಎಂದು ಹೇಳಿದ್ದಾರೆ.

ಬೀಜಿಂಗ್‌ನಲ್ಲಿ ಪ್ರವಾಹ: 44 ಸಾವು

ಬೀಜಿಂಗ್ (ಪಿಟಿಐ): ಭಾರಿ ಮಳೆಯಿಂದಾಗಿ ಬೀಜಿಂಗ್‌ನಲ್ಲಿ ಪ್ರವಾಹ ಪರಿಸ್ಥಿತಿ ಏರ್ಪಟ್ಟಿದ್ದು, ಕಳೆದೊಂದು ವಾರದಲ್ಲಿ ಮಳೆ ಸಂಬಂಧಿತ ಘಟನೆಗಳಲ್ಲಿ 44 ಮಂದಿ ಮೃತಪಟ್ಟಿದ್ದು, ಒಂಬತ್ತು ಮಂದಿ ನಾಪತ್ತೆಯಾಗಿದ್ದಾರೆ.

ಮಿಯುನ್ ಹಾಗೂ ಯಾಂಕಿಂಗ್ ಜಿಲ್ಲೆಯಲ್ಲಿ ಸಾವಿಗೀಡಾಗಿರುವ ಪ್ರಕರಣಗಳು ವರದಿಯಾಗಿವೆ. ನಾಪತ್ತೆ ಯಾಗಿರುವವರ ಹುಡುಕಾಟಕ್ಕೆ ವಿಪತ್ತು ನಿರ್ವಹಣಾ ತಂಡವು ರಕ್ಷಣಾ ಕಾರ್ಯಾಚರಣೆಯನ್ನು ತೀವ್ರಗೊಳಿಸಿದೆ.

ಮಳೆಯ ತೀವ್ರತೆಗೆ ಬೀಜಿಂಗ್‌ನ ಹಲವೆಡೆ ರಸ್ತೆಗಳಿಗೆ ಹಾನಿಯಾಗಿದ್ದು, 136 ಗ್ರಾಮಗಳಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ನಿಧನ ವಾರ್ತೆ

ಪ್ರಮೀಳಾ ತಾಯಿ ಮೇಢೆ



ನಾಗ್ಪುರ: ರಾಷ್ಟ್ರ ಸೇವಿಕಾ ಸಮಿತಿಯ ನಾಲ್ಕನೇ ಪ್ರಮುಖ ಸಂಚಾಲಿಕರಾಗಿದ್ದ ಪ್ರಮೀಳಾ ತಾಯಿ ಮೇಢೆ (97) ನಾಗ್ಪುರದ ಅಹಲ್ಯಾಬಾಯಿ ಮಂದಿರದಲ್ಲಿ ಗುರುವಾರ ನಿಧನರಾದರು.

1978ರಿಂದ 2003ರವರೆಗೆ ಅಖಿಲ ಭಾರತೀಯ ಪ್ರಮುಖ ಕಾರ್ಯವಾಹಿಕರಾಗಿದ್ದ ಅವರು, 2003ರಿಂದ 2006ರವರೆಗೆ ಸಹ ಪ್ರಮುಖ್ ಸಂಚಾಲಿಕ, 2006ರಿಂದ 2012ರವರೆಗೆ ಪ್ರಮುಖ ಸಂಚಾಲಿಕರಾಗಿ ಸಂಘಟನೆಯನ್ನು ಮುನ್ನಡೆಸಿದ್ದರು.

ಗುರುವಾರ ಇಡೀ ದಿನ ಅಹಲ್ಯಾ ಮಂದಿರದ ನೆಲ ಮಹಡಿಯಲ್ಲಿ ಅಂತಿಮ ದರ್ಶನದ ವ್ಯವಸ್ಥೆಗೆ ಮಾಡಲಾಗಿತ್ತು. ಶುಕ್ರವಾರ ಬೆಳಿಗ್ಗೆ 8 ಗಂಟೆಗೆ (ಆ.1) ಇಲ್ಲಿನ ಏಮ್ಸ್‌ಗೆ ಅವರ ದೇಹವನ್ನು ದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಆರ್ಥಿಕತೆ ಸತ್ತಿರುವುದು ಸತ್ಯ’

ಮೋದಿ, ನಿರ್ಮಲಾ ಹೊರತುಪಡಿಸಿ ಎಲ್ಲರಿಗೂ ಈ ವಿಚಾರ ಗೊತ್ತು: ರಾಹುಲ್

ನವದೆಹಲಿ: ‘ಮೋದಿ, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಹೊರತುಪಡಿಸಿ ಮಿಕ್ಕವರೆಲ್ಲರಿಗೂ ಭಾರತದ ಆರ್ಥಿಕತೆ ನಿರ್ಜೀವಗೊಂಡಿದೆ ಎಂಬುದು ತಿಳಿದಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಚಾಟಿ ಬೀಸಿದ್ದಾರೆ.



ರಾಹುಲ್ ಗಾಂಧಿ

ಭಾರತದ ಮೇಲೆ ಶೇ 25ರಷ್ಟು ಸುಂಕ ವಿಧಿಸಿ, ಅತ್ತ ಪಾಕಿಸ್ತಾನದ ಜತೆಗೆ ತೈಲ ಒಪ್ಪಂದ ಮಾಡಿಕೊಂಡಿರುವ ಅಮೆರಿಕದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ತುಟಿ ಬಿಚ್ಚುತ್ತಿಲ್ಲ ಎಂದು ವಿಪಕ್ಷಗಳು ಕಿಡಿ ಕಾರಿರುವ ನಡುವೆಯೇ ರಾಹುಲ್ ಈ ಹೇಳಿಕೆ ನೀಡಿದ್ದಾರೆ.

ಸುಂಕ ವಿಧಿಸುವುದು ಮಾತ್ರವಲ್ಲದೆ ಭಾರತದ್ದು ನಿರ್ಜೀವಗೊಂಡ ಆರ್ಥಿಕತೆ ಎಂದೂ ಅಮೆರಿಕ ಅಧ್ಯಕ್ಷ ಟ್ರಂಪ್ ಟೀಕಿಸಿದ್ದರು. ಈ ಬಗ್ಗೆ ಮಾಧ್ಯಮಗಳೊಂದಿಗೆ ರಾಹುಲ್ ಮಾತನಾಡಿ, ‘ಟ್ರಂಪ್ ಸತ್ಯವನ್ನೇ ಹೇಳಿದ್ದಾರೆ. ಮೋದಿ, ಸಚಿವೆ ನಿರ್ಮಲಾ ಅವರನ್ನು ಬಿಟ್ಟು ಮಿಕ್ಕೆಲ್ಲರಿಗೂ ಈ ವಿಚಾರ ತಿಳಿದಿದೆ’ ಎಂದಿದ್ದಾರೆ.

‘ಭಾರತದ ಆರ್ಥಿಕತೆ ನಿರ್ಜೀವಗೊಂಡಿದೆ ಎಂಬುದು ಇಡೀ ಜಗತ್ತಿಗೆ ಗೊತ್ತಿದೆ. ಅದಾನಿಗೆ ಸಹಾಯ ಮಾಡಲು ಬಿಜೆಪಿ ದೇಶದ ಆರ್ಥಿಕತೆಯನ್ನೇ ಕೊಂದಿದೆ. ಈ ಬಗ್ಗೆ ಆಶ್ಚರ್ಯಪಡುವಂಥದ್ದು ಏನೂ ಇಲ್ಲ. ಬದಲಾಗಿ, ಈ ಬಗ್ಗೆ ಮೋದಿ ಏಕೆ ಮಾತನಾಡುತ್ತಿಲ್ಲ ಎಂದು ಅವರನ್ನೇ ಕೇಳಿ’ ಎಂದೂ ರಾಹುಲ್ ಹೇಳಿದ್ದಾರೆ.

ಬಿಜೆಪಿ ನೇತೃತ್ವದ ಸರ್ಕಾರವು ದೇಶದ ಆರ್ಥಿಕ, ರಕ್ಷಣಾ ಹಾಗೂ ವಿದೇಶಾಂಗ ನೀತಿಯನ್ನು ನಾಶಗೊಳಿಸಿದೆ ಎಂದೂ ದೂರಿದ್ದಾರೆ.



ನಿರ್ಜೀವ ಆರ್ಥಿಕತೆಯ ಹೇಳಿಕೆ ಪುನರುಚ್ಚರಿಸುವ ಮೂಲಕ ರಾಹುಲ್ ಮತ್ತಷ್ಟು ಕೆಳಮಟ್ಟಕ್ಕೆ ಇಳಿದಿದ್ದಾರೆ. ಭಾರತೀಯರ ಸಾಧನೆಯನ್ನು ಅವಮಾನಿಸಿದ್ದಾರೆ

ಅಮಿತ್ ಮಾಳವೀಯ, ಬಿಜೆಪಿ ಐಟಿ ಮುಖ್ಯಸ್ಥ

‘ಆರ್ಥಿಕತೆ: 11ನೇ ಸ್ಥಾನದಿಂದ 5ನೇ ಸ್ಥಾನಕ್ಕೆ’

‘ಕೇವಲ ಐದು ದಶಕಗಳಲ್ಲಿ ಭಾರತವು ವಿಶ್ವದಲ್ಲೇ ಆರ್ಥಿಕ ಕ್ಷೇತ್ರದಲ್ಲಿ ವೇಗವಾಗಿ ಬೆಳೆಯುತ್ತಿರುವ ದೇಶವಾಗಿದೆ. 11ನೇ ಸ್ಥಾನದಿಂದ 5ನೇ ಸ್ಥಾನಕ್ಕೆ ಜಿಗಿದಿದ್ದೇವೆ. ಕಠಿಣ ಶ್ರಮ, ರೈತಾಪಿ ವರ್ಗದ ಕೊಡುಗೆ, ಉದ್ಯಮಗಳ ಬೆಳವಣಿಗೆಯಿಂದ ಇದು ಸಾಧ್ಯವಾಗಿದೆ’ ಎಂದು ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ. ‘ವಿಶ್ವದ ಉತ್ಪಾದನಾ ಹಬ್ ಆಗಿ ಭಾರತವನ್ನು ರೂಪಿಸಲು ಕಳೆದ ಒಂದು ದಶಕದಲ್ಲಿ ಏನೆಲ್ಲ ಅಗತ್ಯವಿದೆಯೋ ಆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ’ ಎಂದಿದ್ದಾರೆ.

ವಿಪಕ್ಷ ನಾಯಕ ಖರ್ಗೆ ಆಕ್ಷೇಪ

‘ಕದನವಿರಾಮ ಕುರಿತಂತೆ ಟ್ರಂಪ್ ಅವರ ಹೇಳಿಕೆ ಬಗ್ಗೆ ಸಂಸತ್ತಿನಲ್ಲಿ ಮಾತನಾಡುವುದಿಲ್ಲ ಎಂದು ಮೋದಿ ಶಪಥ ಮಾಡಿದಂತಿದೆ. ಈಗ ಭಾರತದ ವಿರುದ್ಧ ಟ್ರಂಪ್ ಆಧಾರರಹಿತ ಆರೋಪಗಳನ್ನು ಮಾಡಿದ್ದಾರೆ. ಈಗಲೂ ಮೋದಿ ಸುಮ್ಮನಿರುವರೇ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದ್ದಾರೆ.

‘ಮಹಾ’ದಲ್ಲೀಗ ರಾಜಕೀಯ ಜಟಾಪಟಿ

ಮಾಲೇಗಾಂವ್ ಪ್ರಕರಣ: ಆದೇಶದ ಬೆನ್ನಲ್ಲೇ ಕೆಸರೆರಚಾಟ

ಪ್ರಜಾವಾಣಿ ವಾರ್ತೆ

ಮುಂಬೈ: ಮಾಲೇಗಾಂವ್ ಬಾಂಬ್ ಸ್ಫೋಟ ಪ್ರಕರಣದ ಎಲ್ಲ ಏಳು ಆರೋಪಿಗಳನ್ನು ಖುಲಾಸೆಗೊಳಿಸಿ ನ್ಯಾಯಾಲಯ ಗುರುವಾರ ಆದೇಶ ಹೊರಡಿಸಿದ ಬೆನ್ನಲ್ಲೇ, ಮಹಾರಾಷ್ಟ್ರದಲ್ಲಿ ರಾಜಕೀಯ ಜಟಾಪಟಿ ಆರಂಭಗೊಂಡಿದೆ.

‘ಆಗಿನ ಯುಪಿಎ ಮೈತ್ರಿಕೂಟದ ನೇತೃತ್ವ ವಹಿಸಿದ್ದ ಕಾಂಗ್ರೆಸ್ ಪಕ್ಷವು ಇಸ್ಲಾಮಿಕ್ ಭಯೋತ್ಪಾದನೆಗೆ ಪ್ರತಿಯಾಗಿ ಹಿಂದೂ ಭಯೋತ್ಪಾದನೆ ಎಂಬ ಪದ ಸೃಷ್ಟಿಸಿತ್ತು’ ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

ನ್ಯಾಯಾಲಯದ ಆದೇಶ ಕುರಿತು ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಹಾಗೂ ಎನ್‌ಸಿಪಿ (ಆಗ ಇಬ್ಭಾಗವಾಗಿರಲಿಲ್ಲ) ಪಕ್ಷಗಳು, ‘ಭಯೋತ್ಪಾದನೆಗೆ ಯಾವುದೇ ಧರ್ಮ. ಈ ಪ್ರಕರಣಕ್ಕೆ ಸಂಬಂಧಿಸಿ ಎನ್‌ಐಎ ಸೂಕ್ತ ಸಾಕ್ಷ್ಯಗಳನ್ನು ಒದಗಿಸುವಲ್ಲಿ ವಿಫಲವಾಗಿದೆ’ ಎಂದಿವೆ.

ಈ ಬಾಂಬ್ ಸ್ಫೋಟ ಸಂಭವಿಸಿದ್ದ ಸಂದರ್ಭದಲ್ಲಿ, ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಮತ್ತು ಎನ್‌ಸಿಪಿ ಮೈತ್ರಿಕೂಟ ‘ಡೆಮಾಕ್ರಟಿಕ್ ಫ್ರಂಟ್’ ನೇತೃತ್ವದ ಸರ್ಕಾರವಿತ್ತು.

ಮಹಾತ್ಮ ಗಾಂಧಿ ಅವರ ಹತ್ಯೆಯೇ ಸ್ವತಂತ್ರ ಭಾರತದಲ್ಲಿ ನಡೆದ ಮೊದಲ ಭಯೋತ್ಪಾದಕ ಕೃತ್ಯ. ಗೋಡ್ಸೆ ಧರ್ಮ ಯಾವುದು? ಹೀಗಾಗಿ, ಭಯೋತ್ಪಾದನೆಗೆ ಧರ್ಮ, ಜಾತಿ ಇಲ್ಲ

ಪೃಥ್ವಿರಾಜ್ ಚವಾಣ್

ಕಾಂಗ್ರೆಸ್‌ನ ಹಿರಿಯ ನಾಯಕ

‘ಕೇಸರಿ ಭಯೋತ್ಪಾದನೆ ಎಂಬುದು ಇರಲಿಲ್ಲ. ಮುಂದೆಯೂ ಇರುವುದಿಲ್ಲ. ವೋಟ್‌ಬ್ಯಾಂಕ್ ರಾಜಕಾರಣ ಹಾಗೂ ಮುಸ್ಲಿಂ ಮತಗಳಿಗಾಗಿ ಕಾಂಗ್ರೆಸ್ ಪಕ್ಷ ಓಲೈಕೆ ರಾಜಕಾರಣ ಮಾಡುತ್ತಿದೆ. ಇದೇ ಕಾರಣಕ್ಕೆ ಅದು ಹಿಂದೂ ಭಯೋತ್ಪಾದನೆ ಎಂಬ ಪದವನ್ನು ಸೃಷ್ಟಿ ಮಾಡಿತು. ಈಗ, ಕಾಂಗ್ರೆಸ್ ಪಕ್ಷ ಹಿಂದೂ ಸಮುದಾಯದ ಕ್ಷಮೆ ಕೇಳಬೇಕು’ ಎಂದು ಫಡಣವೀಸ್ ಆಗ್ರಹಿಸಿದ್ದಾರೆ.

ಹಿಂದೂಗಳ ಮೇಲೆ ಅನ್ಯಾಯವಾಗಿ ಹೊರಿಸಲಾಗಿದ್ದ ಕಳಂಕವನ್ನು ಎನ್‌ಐಎ ನ್ಯಾಯಾಲಯದ ಈ ತೀರ್ಪು ಅಳಿಸಿ ಹಾಕಿದೆ. ಕಾಂಗ್ರೆಸ್‌ನ ಓಲೈಕೆ ರಾಜಕಾರಣದ ಮುಖವಾಡವೂ ಕಳಚಿದೆ ಎಂದು ಉಪಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದ್ದಾರೆ.

‘ಮುಂಬೈ ಉಪನಗರ ರೈಲುಗಳಲ್ಲಿ ನಡೆದಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ಆರೋಪಿಗಳನ್ನು ಖುಲಾಸೆ ಮಾಡಿ ಬಾಂಬೆ ಹೈಕೋರ್ಟ್ ನೀಡಿದ್ದ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಈ ಪ್ರಕರಣದಲ್ಲಿಯೂ ರಾಜ್ಯ ಸರ್ಕಾರ ಇಂಥದೇ ಕ್ರಮ ಕೈಗೊಳ್ಳುವುದೇ’ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

‘ಕೇಂದ್ರದಲ್ಲಿ ಸರ್ಕಾರ ಬದಲಾದ ನಂತರ, ಮಾಲೇಗಾಂವ್ ಬಾಂಬ್ ಸ್ಫೋಟ ಪ್ರಕರಣದ ಆರೋಪಿಗಳ ಕುರಿತು ಮೃದು ಧೋರಣೆ ತಳೆಯುವಂತೆ ಎನ್‌ಐಎ ಹೇಳಿತ್ತು ಎಂಬುದಾಗಿ ವಿಶೇಷ ಸರ್ಕಾರಿ ವಕೀಲೆ ರೋಹಿಣಿ ಸಾಲ್ಯಾನ್ ಹೇಳಿದ್ದರು. ಇಂದಿನ ತೀರ್ಪಿನಿಂದಾಗಿ ರೋಹಿಣಿ ಅವರ ಹೇಳಿಕೆಗೆ ಮಹತ್ವ ಬಂದಿದೆ’ ಎಂದು ಕಾಂಗ್ರೆಸ್‌ನ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಹರ್ಷವರ್ಧನ ಸಪ್ಕಾಲ್ ಹೇಳಿದ್ದಾರೆ.

ಭಾರತದ 6 ಕಂಪನಿಗಳಿಗೆ ನಿರ್ಬಂಧ

ಒಂದನೇ ಪುಟದಿಂದ

ವಿದೇಶಗಳಲ್ಲಿ ಭಯೋತ್ಪಾದನೆ ಬೆಂಬಲಿಸುವ ಮತ್ತು ತನ್ನದೇ ಜನರನ್ನು ದಮನಗೊಳಿಸುವ ಅಲ್ಲಿನ ಸರ್ಕಾರಕ್ಕೆ ಹಣದ ಹರಿವನ್ನು ತಡೆಯಲು ಅಮೆರಿಕ ಈ ಕ್ರಮ ಕೈಗೊಂಡಿದೆ’ ಎಂದು ವಿದೇಶಾಂಗ ಇಲಾಖೆ ಬುಧವಾರ ಹೇಳಿದೆ.

ಕಾಂಚನ್ ಪಾಲಿಮರ್ಸ್, ಅಲ್‌ಕೆಮಿಕಲ್ ಸೊಲ್ಯುಷನ್ಸ್, ರಮ್ನಿಕ್‌ಲಾಲ್ ಎಸ್. ಗೋಸಾಲಿಯಾ ಕಂಪನಿ, ಜುಪಿಟರ್ ಡೈ ಕೆಮ್ ಪ್ರೈವೆಟ್ ಲಿಮಿಟೆಡ್, ಗ್ಲೋಬಲ್ ಇಂಡಸ್ಟ್ರೀಸ್ ಕೆಮಿಕಲ್ ಲಿಮಿಟೆಡ್ ಮತ್ತು ಪರ್ಸಿಸ್ಟೆಂಟ್ ಪ್ರೈವೇಟ್ ಲಿಮಿಟೆಡ್ ಕಂಪನಿಗಳು ನಿರ್ಬಂಧಕ್ಕೆ ಒಳಗಾಗಿವೆ. ಭಾರತ ಅಲ್ಲದೆ ಯುಎಇ, ಟರ್ಕಿ ಮತ್ತು ಇಂಡೊನೇಷ್ಯಾದ ಕೆಲವು ಕಂಪನಿಗಳ ಮೇಲೂ ಅಮೆರಿಕ ನಿರ್ಬಂಧ ಹೇರಿದೆ.

ಬಿಆರ್‌ಎಸ್ ಶಾಸಕರ ಅನರ್ಹತೆ ಸ್ಪೀಕರ್‌ಗೆ 3 ತಿಂಗಳ ಗಡುವು

ನವದೆಹಲಿ (ಪಿಟಿಐ): ಆಡಳಿತಾರೂಢ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡ 10 ಮಂದಿ ಬಿಆರ್‌ಎಸ್ ಶಾಸಕರ ಅನರ್ಹತೆಗೆ ಸಂಬಂಧಿಸಿದಂತೆ ಮೂರು ತಿಂಗಳ ಒಳಗಾಗಿ ನಿರ್ಧಾರ ಕೈಗೊಳ್ಳುವಂತೆ ತೆಲಂಗಾಣ ವಿಧಾನಸಭೆ ಸ್ಪೀಕರ್ ಅವರಿಗೆ ಸುಪ್ರೀಂ ಕೋರ್ಟ್ ಗುರುವಾರ ಸೂಚಿಸಿದೆ.



ರಾಜಕೀಯ ಪಕ್ಷಾಂತರವನ್ನು ನಿಯಂತ್ರಿಸದಿದ್ದರೆ, ಅದು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವ ಶಕ್ತಿ ಹೊಂದಲಿದೆ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿತು.

ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ನೇತೃತ್ವದ ನ್ಯಾಯಪೀಠವು, ‘ನಾವು ಯಾವುದೇ ನಿರ್ದೇಶನ ನೀಡದಿದ್ದರೆ, ಸ್ಪೀಕರ್ ಮತ್ತದೇ ರೀತಿ ಮಾಡಿ, ‘ಶಸ್ತ್ರಚಿಕಿತ್ಸೆ ಯಶಸ್ವಿ, ರೋಗಿ ಸಾವು’ ಎಂಬ ಸನ್ನಿವೇಶದಂತಾಗಲಿದೆ’ ಎಂದು ಹೇಳಿತು.

ಪಕ್ಷಾಂತರಕ್ಕೆ ಕಡಿವಾಣ ಹಾಕುವುದಕ್ಕಾಗಿ ಪಕ್ಷಾಂತರ ನಿಷೇಧ ಕಾಯ್ದೆ ರೂಪಿಸಲಾಗಿದೆ. ಈ ಕಾಯ್ದೆಯ ಆಧಾರದಲ್ಲಿ ಶಾಸಕರನ್ನು ಅನರ್ಹಗೊಳಿಸುವುದರಿಂದ ಕಾಯ್ದೆಯ ಉದ್ದೇಶ ಈಡೇರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸುವ ಕೆಲಸವನ್ನು ಸ್ಪೀಕರ್ ಅಥವಾ ಸಭಾಪತಿ ಅವರಿಗೆ ವಹಿಸುವ ಬಗ್ಗೆ ಸಂಸತ್ತು ನಿರ್ಧರಿಸಬೇಕು. ಈ ವಿಷಯದಲ್ಲಿ ಸಲಹೆ ನೀಡುವುದು ನ್ಯಾಯಾಂಗದ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ತಿಳಿಸಿತು.

ಚಿಣ್ಣರ ಸಂಭ್ರಮ...

ಪಿಟಿಐ ಚಿತ್ರ



ಆಗ್ರಾದ ತಾಜ್‌ಮಹಲ್ ವೀಕ್ಷಣೆಗೆ ಬಂದ ಮಕ್ಕಳು ಗುರುವಾರ ಸುರಿದ ಮಳೆಯಲ್ಲಿ ಸಂಭ್ರಮಿಸಿದರು

ಸಿಬಿಎಸ್‌ಇ: ಕಟ್ಟಡದ ಒಟ್ಟು ವಿಸ್ತೀರ್ಣ ಆಧರಿಸಿ ತರಗತಿಗಳಿಗೆ ಅವಕಾಶ

ನವದೆಹಲಿ (ಪಿಟಿಐ): ‘ಶಾಲೆಯ ಕಟ್ಟಡದ ಒಟ್ಟು ವಿಸ್ತೀರ್ಣ ಆಧರಿಸಿ ಗರಿಷ್ಠ ತರಗತಿ ನಡೆಸಲು ಅವಕಾಶ ನೀಡಲು ಸಿಬಿಎಸ್‌ಇ ತನ್ನ ಬೈಲಾಕ್ಕೆ ತಿದ್ದುಪಡಿ ತಂದಿದೆ’ ಎಂದು ಅಧಿಕಾರಿ ತಿಳಿಸಿದ್ದಾರೆ.

ಶಾಲೆಗಳಲ್ಲಿ ಮಾಧ್ಯಮಿಕ ಹಾಗೂ ಹಿರಿಯ ಮಾಧ್ಯಮಿಕ ಮಟ್ಟದಲ್ಲಿಯೂ ಸಮಾನ ಸಂಖ್ಯೆಯ ತರಗತಿಗಳನ್ನು ನಡೆಸಬೇಕು ಎಂದು ಮಂಡಳಿ ನಿರ್ಧರಿಸಿದೆ.

‘ಶಾಲಾ ಆಡಳಿತ ಮಂಡಳಿ ಹಾಗೂ ಸಂಬಂಧಪಟ್ಟವರಿಂದ ಸಲಹೆಗಳನ್ನು ಪಡೆದುಕೊಳ್ಳಲಾಗಿದೆ. ಜಾಗದ ಕೊರತೆ ಇರುವ ಶಾಲೆಗಳಲ್ಲಿ ಅನುಮತಿ ಮೀರಿ ಹೆಚ್ಚುವರಿ ತರಗತಿಗಳನ್ನು ಆರಂಭಿಸಿದರೆ, ನಿರ್ವಹಣೆ ಕಷ್ಟ. ಅಲ್ಲದೇ, ಭೂಮಿಯ ಕೊರತೆಯಿಂದ ಹೆಚ್ಚುವರಿ ತರಗತಿಗಳನ್ನು ಆರಂಭಿಸಲು ಸಂಸ್ಥೆಗಳಿಗೆ ಸಾಧ್ಯವಾಗುತ್ತಿಲ್ಲ’ ಎಂದು ಸಿಬಿಎಸ್‌ಇ ಕಾರ್ಯದರ್ಶಿ ಹಿಮಾಂಶು ಗುಪ್ತಾ ತಿಳಿಸಿದ್ದಾರೆ.

2008ರ ಮಾಲೇಗಾಂವ್ ಬಾಂಬ್ ಸ್ಫೋಟ ಪ್ರಕರಣ

ಮೇಲ್ಮನವಿಗೆ ಸಂತ್ರಸ್ತ ಕುಟುಂಬಗಳ ನಿರ್ಧಾರ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಮಾಲೇಗಾಂವ್ ಬಾಂಬ್ ಸ್ಫೋಟ ಪ್ರಕರಣದ ಎಲ್ಲ ಆರೋಪಿಗಳನ್ನು ಖುಲಾಸೆಗೊಳಿಸಿ ಎನ್‌ಐಎ ವಿಶೇಷ ನ್ಯಾಯಾಲಯ ನೀಡಿರುವ ಆದೇಶ ಪ್ರಶ್ನಿಸಿ ಬಾಂಬೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಸಂತ್ರಸ್ತರ ಕುಟುಂಬಗಳು ನಿರ್ಧರಿಸಿವೆ.



‘ನಮ್ಮ ಹೋರಾಟವನ್ನು ಇಲ್ಲಿಗೆ ನಿಲ್ಲಿಸು ವುದಿಲ್ಲ. ಬಾಂಬೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುತ್ತೇವೆ. ಅಲ್ಲಿಯೂ ನ್ಯಾಯ ಸಿಗದಿದ್ದಲ್ಲಿ ಸುಪ್ರೀಂ ಕೋರ್ಟ್ ಕದ ತಟ್ಟುತ್ತೇವೆ’ ಎಂದು ಸಂತ್ರಸ್ತರ ಪರ ವಕೀಲ ಶಹೀದ್ ನದೀಮ್ ಗುರುವಾರ ಹೇಳಿದ್ದಾರೆ.

‘ಸಂದೇಹದ ಲಾಭ ನೀಡುವ ಮೂಲಕ ಎಲ್ಲ ಆರೋಪಿಗಳನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ. ಹೀಗಾಗಿ ಇದು ಪರಿಪೂರ್ಣವಾದ ಖುಲಾಸೆ ಆಗುವುದಿಲ್ಲ. ಶೀಘ್ರವೇ ಮೇಲ್ಮನವಿ ಸಲ್ಲಿಸಲಾಗುವುದು’ ಎಂದಿದ್ದಾರೆ.

ಮುಂಬೈ ಉಪನಗರ ರೈಲುಗಳಲ್ಲಿ ನಡೆದ ಸರಣಿ ಬಾಂಬ್ ಸ್ಫೋಟ ಪ್ರಕರಣದ ಎಲ್ಲ 12 ಆರೋಪಿಗಳನ್ನು ಖುಲಾಸೆಗೊಳಿಸಿ ಬಾಂಬೆ ಹೈಕೋರ್ಟ್ ನೀಡಿದ ತೀರ್ಪು ಪ್ರಶ್ನಿಸಿ, 24 ಗಂಟೆ ಒಳಗಾಗಿ ಮಹಾರಾಷ್ಟ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿ ಕೂಡ ರಾಜ್ಯ ಸರ್ಕಾರ ಅಷ್ಟೇ ವೇಗವಾಗಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು ಎಂದು ಹೇಳಿದ್ದಾರೆ.

ಪಿಐಎಲ್ ಸಲ್ಲಿಕೆ: ಎನ್‌ಐಎ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಬಾಂಬೆ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸುವುದಾಗಿ ವಕೀಲ ಹಾಗೂ ಸಾಮಾಜಿಕ ಹೋರಾಟಗಾರ ನಿತಿನ್ ಸಾತ್ಪುತೆ ಹೇಳಿದ್ದಾರೆ.

ಐವರು ನ್ಯಾಯಾಧೀಶರು...ಸುದೀರ್ಘ ವಿಚಾರಣೆ

2008ರಲ್ಲಿ ಮಾಲೇಗಾಂವ್‌ನಲ್ಲಿ ಬಾಂಬ್ ಸ್ಫೋಟಗೊಂಡ ಪ್ರಕರಣದ ವಿಚಾರಣೆ ಸುದೀರ್ಘ 17 ವರ್ಷ ನಡೆದಿದೆ. ಪ್ರಕರಣದ ವಿಚಾರಣೆಯ ವಿವಿಧ ಹಂತಗಳಲ್ಲಿ ಐವರು ನ್ಯಾಯಾಧೀಶರು ಕಲಾಪಗಳನ್ನು ನಡೆಸಿದ್ದಾರೆ. ಅದರೆ, ಒಂದು ಬಾರಿ ಮಾತ್ರ ತನಿಖಾ ಸಂಸ್ಥೆಯನ್ನು ಬದಲಾಯಿಸಲಾಗಿತ್ತು.

ಆರೋಪಿಗಳ ಬಂಧನ, ಆರೋಪ ನಿಗದಿ, ಆರೋಪಪಟ್ಟಿ ಸಲ್ಲಿಕೆ ಹಾಗೂ ವಿಚಾರಣೆ ಆರಂಭ ಒಂದೆಡೆಯಾದರೆ, 2008ರಿಂದ 2025ರ ನಡುವೆ ಐವರು ನ್ಯಾಯಾಧೀಶರು ಪ್ರಕರಣದ ವಿಚಾರಣೆ ನಡೆಸಿದರು. ಇದು, ವಿಚಾರಣೆ ವಿಳಂಬವಾಗಲು ಕಾರಣ ಎಂದು ಪ್ರಕರಣದ ಸಂತ್ರಸ್ತರು ಹಾಗೂ ಆರೋಪಿಗಳ ಅಭಿಪ್ರಾಯವಾಗಿದೆ.

‘ವಿಚಾರಣೆ ತ್ವರಿತವಾಗಿಸುವಲ್ಲಿ ಪ್ರಾಸಿಕ್ಯೂಷನ್ ಹಾಗೂ ಪ್ರತಿವಾದಿಗಳ ಪರ ವಕೀಲರ ವೈಫಲ್ಯವಿದೆ’ ಎಂದು ಆರೋಪಿಗಳಲ್ಲೊಬ್ಬರಾದ ಸಮೀರ್ ಕುಲಕರ್ಣಿ ಹೇಳಿದ್ದಾರೆ. ವಿಚಾರಣೆಯನ್ನು ತ್ವರಿತಗೊಳಿಸುವಂತೆ ನಿರ್ದೇಶನ ನೀಡಬೇಕು ಎಂದು ಕೋರಿ ಕುಲಕರ್ಣಿ ಅವರು ಹೈಕೋರ್ಟ್‌ಗೆ ಅರ್ಜಿಯನ್ನೂ ಸಲ್ಲಿಸಿದ್ದರು.

‘ನ್ಯಾಯಾಧೀಶರನ್ನು ಪದೇ ಪದೇ ಬದಲಾಯಿಸಿದ್ದು ವಿಚಾರಣೆ ತ್ವರಿತಗೊಳ್ಳುವುದಕ್ಕೆ ಅಡ್ಡಿಯಾಗಿತ್ತು. ಬೃಹತ್ ಪ್ರಮಾಣದ ದಾಖಲೆಗಳನ್ನು ಹೊಸ ನ್ಯಾಯಾಧೀಶರು ಅವಲೋಕಿಸಿಬೇಕಿತ್ತು. ವಿಳಂಬವಾಗಲು ಇದು ಕೂಡ ಒಂದು ಕಾರಣ’ ಎಂದು ಕೆಲ ಸಂತ್ರಸ್ತರ ಪರ ವಾದಿಸಿದ್ದ ವಕೀಲ ಶಹೀದ್ ನದೀಮ್ ಹೇಳುತ್ತಾರೆ.

ವಿಶೇಷ ನ್ಯಾಯಾಧೀಶ ವೈ.ಡಿ.ಶಿಂದೆ ಮೊದಲು ವಿಚಾರಣೆ ಆರಂಭಿಸಿದ್ದರು. ಆರಂಭದಲ್ಲಿ ಎಲ್ಲ ಆರೋಪಿಗಳ ವಿರುದ್ಧ ಮಹಾರಾಷ್ಟ್ರ ಸಂಘಟಿತ ಅಪರಾಧಗಳ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು. ಆರೋಪಿಗಳ ಪೈಕಿ ಯಾರೂ ಕೂಡ ಇಂತಹ ಗುಂಪಿಗೆ ಸೇರಿದವರಲ್ಲ ಎಂದು ಅಭಿಪ್ರಾಯಪಟ್ಟಿದ್ದ ವಿಶೇಷ ನ್ಯಾಯಮೂರ್ತಿ ಶಿಂದೆ, ಈ ಕಾಯ್ದೆಯ ಅವಕಾಶಗಳಡಿ ಆರೋಪ ನಿಗದಿ ಮಾಡಿದ್ದನ್ನು ರದ್ದುಗೊಳಿಸಿ ಮಹತ್ವದ ತೀರ್ಪು ನೀಡಿದ್ದರು.

ನಂತರದ ದಿನಗಳಲ್ಲಿ ವಿಶೇಷ ನ್ಯಾಯಾಧೀಶರಾದ ಎಸ್.ಡಿ.ಟೆಕಾಲೆ, ವಿ.ಎಸ್. ಪಡಲ್ಕರ್, ನ್ಯಾಯಾಧೀಶ ಪಿ.ಆರ್.ಸಿಟ್ರೆ ವಿಚಾರಣೆ ನಡೆಸಿದರು. ಕೊನೆಗೆ, ವಿಶೇಷ ನ್ಯಾಯಾಧೀಶ ಎ.ಕೆ.ಲಾಹೋಟಿ ವಿಚಾರಣೆ ಪೂರ್ಣಗೊಳಿಸಿ ತೀರ್ಪು ಪ್ರಕಟಿಸಿದ್ದಾರೆ.

ಚಿಟಿಕೆ ಸುದ್ದಿ

ಜೂನಿಯರ್ ಹಾಕಿ: ಎ ಡಿವಿಷನ್‌ನಲ್ಲಿ ಕರ್ನಾಟಕ

ಕಾಕಿನಾಡ (ಪಿಟಿಐ) ಶುಕ್ರವಾರ ಆರಂಭವಾಗಲಿರುವ 15ನೇ ರಾಷ್ಟ್ರೀಯ ಜೂನಿಯರ್ ಮಹಿಳೆಯರ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ 30 ತಂಡಗಳು ಪೈಪೋಟಿ ನಡೆಸಲಿವೆ. ಕರ್ನಾಟಕ ತಂಡವು ಎ ಗುಂಪಿನಲ್ಲಿದೆ.

ಹೊಸದಾಗಿ ಜಾರಿಗೆ ತರಲಾಗಿರುವ ವಿಭಾಗೀಯ ಮಾದರಿಯಲ್ಲಿ ಟೂರ್ನಿ ನಡೆಯಲಿದೆ. ಆಗಸ್ಟ್ 12ರಂದು ಟೂರ್ನಿ ಮುಕ್ತಾಯವಾಗಲಿದೆ. ಎ, ಬಿ ಮತ್ತು ಸಿ ಡಿವಿಷನ್‌ಗಳಲ್ಲಿ ತಂಡಗಳನ್ನು ವಿಂಗಡಿಸಲಾಗಿದೆ. ಎ ಡಿವಿಷನ್‌ನಲ್ಲಿ ನಾಲ್ಕು ಗುಂಪುಗಳಿವೆ.

ಡಿವಿಷನ್ ಎ ವಿಭಾಗದ ಪ್ರಥಮ ಗುಂಪಿನಲ್ಲಿರುವ ಕರ್ನಾಟಕ ತಂಡಕ್ಕೆ ಜಾರ್ಖಂಡ್, ಛತ್ತೀಸಗಡ ತಂಡಗಳನ್ನು ಎದುರಿಸಲಿದೆ.

ಬಿ ಮತ್ತು ಸಿ ಡಿವಿಷನ್‌ಗಳಲ್ಲಿ ತಲಾ ಎರಡು (ಎ ಮತ್ತು ಬಿ) ಗುಂಪುಗಳಿವೆ.

ಮಾಲ್ಟಾದಲ್ಲಿ ಯೂತ್ ಕಾಮನ್‌ವೆಲ್ತ್ ಗೇಮ್ಸ್

ನವದೆಹಲಿ (ಪಿಟಿಐ): ಮಾಲ್ಟಾದಲ್ಲಿ 2027ರಲ್ಲಿ ಎಂಟನೇ ಕಾಮನ್‌ವೆಲ್ತ್ ಯೂತ್ ಕ್ರೀಡಾಕೂಟ (ಸಿವೈಜಿ) ನಡೆಯಲಿದೆ.

14 ರಿಂದ 18 ವರ್ಷದೊಳಗಿನ ಒಂದು ಸಾವಿರ ಅಥ್ಲೀಟ್‌ಗಳು ಭಾಗವಹಿಸುವರು. ಒಟ್ಟು 74 ರಾಷ್ಟ್ರಗಳಿಂದ ಸ್ಪರ್ಧಿಗಳು ಭಾಗವಹಿಸುವರು. ಒಟ್ಟು ಎಂಟು ಕ್ರೀಡೆಗಳು ನಡೆಯಲಿವೆ.

ಮಾಲ್ಟಾ ದಕ್ಷಿಣ ಯುರೋಪಿನ ದ್ವೀಪರಾಷ್ಟ್ರವಾಗಿದೆ. ಮೆಡಿಟರೆನಿಯನ್ ಸಮುದ್ರದಲ್ಲಿದೆ.

‘ಇಂಡಿಪೆಂಡೆನ್ಸ್ ಕಪ್’ ರ‍್ಯಾಪಿಡ್ ಚೆಸ್

ಬೆಂಗಳೂರು: ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಚೆಸ್ ಸಂಸ್ಥೆ (ಬಿಆರ್‌ಡಿಸಿಎ) ಆಶ್ರಯದಲ್ಲಿ ಇದೇ 15ರಂದು ಅಖಿಲ ಭಾರತ ಫಿಡೆ ರೇಟೆಡ್ ‘ಇಂಡಿಪೆಂಡೆನ್ಸ್ ಕಪ್’ ರ‍್ಯಾಪಿಡ್ ಚೆಸ್ ಟೂರ್ನಿ ನಡೆಯಲಿದೆ.



ಹೊಸಕೋಟೆಯಲ್ಲಿ ಟೂರ್ನಿ ಆಯೋಜನೆಯಾಗಿದೆ. ಒಟ್ಟು ₹2.5 ಲಕ್ಷ ಬಹುಮಾನ ಮೊತ್ತ ಇದೆ. ಹೆಸರು ನೋಂದಾಯಿಸಲು ಆಗಸ್ಟ್ 13 ಕೊನೆಯ ದಿನವಾಗಿದೆ. ವಿವರಗಳಿಗೆ ಎ. ಚಿದಾನಂದ (ಮೊ: 9663405589) ಅವರನ್ನು ಸಂಪರ್ಕಿಸಬೇಕು ಎಂದು ಮುಖ್ಯ ಆರ್ಬಿಟರ್ ಕೆ. ಮುರುಗುಸುಂದರಂ ತಿಳಿಸಿದ್ದಾರೆ.

ವಿಶ್ವ ಈಜು ಚಾಂಪಿಯನ್‌ಷಿಪ್: ಮೆಕಿಂಟೋಷ್‌ಗೆ ಮೂರನೇ ಚಿನ್ನ

ಮರ್ಷಾನ್ ಚಿನ್ನದ ಬೇಟೆ ಆರಂಭ

ಸಿಂಗಪುರ (ಎಎಫ್‌ಪಿ): ಫ್ರಾನ್ಸ್‌ನ ಈಜುತಾರೆ ಲೆಯಾನ್ ಮರ್ಷಾನ್ ಅವರು ಸಿಂಗಪುರದಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಬೇಟೆ ಆರಂಭಿಸಿದರು. ಮತ್ತೊಂದೆಡೆ ಕೆನಡಾದ ಸಮ್ಮರ್ ಮೆಕಿಂಟೋಷ್ ಹ್ಯಾಟ್ರಿಕ್ ಸ್ವರ್ಣ ಪದಕಕ್ಕೆ ಕೊರಳೊಡ್ಡಿದರು.

ಪುರುಷರ 200 ಮೀಟರ್ ಮೆಡ್ಲೆಯ ಸೆಮಿಫೈನಲ್‌ನಲ್ಲಿ ವಿಶ್ವದಾಖಲೆ ನಿರ್ಮಿಸಿದ್ದ 23 ವರ್ಷದ ಮರ್ಷಾನ್, ಗುರುವಾರ ನಡೆದ ಫೈನಲ್‌ನಲ್ಲಿ ನಿರೀಕ್ಷೆಯಂತೆ ಅಗ್ರಸ್ಥಾನಿಯಾದರು. ಅವರು 1 ನಿಮಿಷ 53.68 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಇದು ಎರಡನೇ ಅತಿವೇಗದ ಅವಧಿ ಎನಿಸಿತು.

ಮರ್ಷಾನ್ ಅವರು ಬುಧವಾರ ನಡೆದ ಸೆಮಿಫೈನಲ್‌ನಲ್ಲಿ 1ನಿ.52.69 ಸೆ.ಗಳಲ್ಲಿ ಗುರಿ ಮುಟ್ಟುವ ಮೂಲಕ ಅಮೆರಿಕದ ರಯಾನ್ ಲಾಕ್ಟಿ 2011ರಲ್ಲಿ ಸ್ಥಾಪಿಸಿದ್ದ ದಾಖಲೆಯನ್ನು (1:54.00) ಮುರಿದಿದ್ದರು. 400 ಮೀಟರ್ ಮೆಡ್ಲೆನಲ್ಲೂ ಮರ್ಷಾನ್ ಕಣಕ್ಕೆ ಇಳಿಯುವರು. ಈ ವಿಭಾಗದ ವಿಶ್ವದಾಖಲೆ ಅವರ ಹೆಸರಿನಲ್ಲೇ ಇದೆ.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮರ್ಷಾನ್ ಅವರಿಗೆ ಇದು ಆರನೇ ಚಿನ್ನ. 2022ರ ಬುಡಾಪೆಸ್ಟ್‌ನಲ್ಲಿ ಎರಡು ಮತ್ತು 2023ರ ಫುಕುವೋಕಾದಲ್ಲಿ ಮೂರು ಸ್ವರ್ಣ ಗೆದ್ದಿದ್ದರು. ಕಳೆದ ವರ್ಷ ತವರಿನಲ್ಲಿ ನಡೆದ ಒಲಿಂಪಿಕ್ಸ್‌ನ-ಲ್ಲಿ ನಾಲ್ಕು ಚಿನ್ನ ಸೇರಿದಂತೆ ಐದು ಪದಕ



ಚಿನ್ನ ಗೆದ್ದ ಸಂಭ್ರಮದಲ್ಲಿ ಫ್ರಾನ್ಸ್‌ನ ಲೆಯಾನ್ ಮರ್ಷಾನ್ ಎಎಫ್‌ಪಿ ಚಿತ್ರ

ಡೇವಿಡ್‌ಗೆ ಎರಡನೇ ಚಿನ್ನದ ಪದಕ

ರುಮೇನಿಯಾದ ಈಜುಪಟು ಡೇವಿಡ್ ಪೊಪೊವಿಸಿ ಡಬಲ್ ಚಿನ್ನದ ಸಾಧನೆ ಮೆರೆದರು. 200 ಮೀಟರ್ ಫ್ರೀಸ್ಟೈಲ್‌ನಲ್ಲಿ ಚಿನ್ನ ಗೆದ್ದಿದ್ದ ಅವರು, 100 ಮೀಟರ್ ಫ್ರೀಸ್ಟೈಲ್‌ನಲ್ಲೂ ಚಾಂಪಿಯನ್ ಆದರು.

20 ವರ್ಷದ ಪೊಪೊವಿಸಿ 46.51 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಅಮೆರಿಕದ ಜ್ಯಾಕ್ ಅಲೆಕ್ಸಿ ಬೆಳ್ಳಿ (46.92) ಮತ್ತು ಆಸ್ಟ್ರೇಲಿಯಾದ ಕೈಲ್ ಚಾಲ್ಮರ್ಸ್ ಕಂಚಿನ ಪದಕ (47.17) ಪಡೆದರು.

ತಮ್ಮದಾಗಿಸಿಕೊಂಡಿದ್ದರು. ಅಮೆರಿಕದ ಶೈನ್ ಕಾಸಸ್ (1:54.30) ಮತ್ತು ಹಂಗೇರಿಯ ಹ್ಯೂಬರ್ಟ್ ಕೋಸ್ (1:55.34) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಮೆಕಿಂಟೋಷ್ ಹ್ಯಾಟ್ರಿಕ್: 18 ವರ್ಷದ ಮೆಕಿಂಟೋಷ್ ಅವರು ಮಹಿಳೆಯರ 200 ಮೀಟರ್ ಬಟರ್‌ಫ್ಲೈನಲ್ಲಿ ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮಿದರು. ಅವರು 400 ಮೀ. ಬಟರ್‌ಫ್ಲೈ ಮತ್ತು 200 ಮೀ. ಮೆಡ್ಲೆನಲ್ಲಿ ಈಗಾಗಲೇ ಚಿನ್ನ ಗೆದ್ದಿದ್ದಾರೆ.

ಇಲ್ಲಿ ಐದು ಸ್ವರ್ಣ ಗೆಲ್ಲುವ ಪ್ರಯತ್ನದಲ್ಲಿರುವ ಮೆಕಿಂಟೋಷ್, ಈಜು ದಂತಕತೆ ಮೈಕೆಲ್ ಫೆಲ್ಪ್ಸ್ ಅವರ ದಾಖಲೆಗೆ ಮತ್ತಷ್ಟು ಹತ್ತಿರ ವಾದರು. 2007ರ ಕೂಟದಲ್ಲಿ ಅಮೆರಿಕದ ಫೆಲ್ಪ್ಸ್ ಐದು ವೈಯಕ್ತಿಕ ಚಿನ್ನ ಸೇರಿದಂತೆ ಏಳು ಸ್ವರ್ಣ ಗೆದ್ದಿದ್ದರು.

ಮೆಕಿಂಟೋಷ್ 2 ನಿಮಿಷ 01.99 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ, ಕೂದಲೆಳೆಯ ಅಂತರದಲ್ಲಿ ವಿಶ್ವದಾಖಲೆ ಅವಕಾಶ ತಪ್ಪಿಸಿಕೊಂಡರು. ಚೀನಾದ ಲಿಯು ಜಿ (2ನಿ.01.81) ಈ ವಿಭಾಗದಲ್ಲಿ ದಾಖಲೆ ಹೊಂದಿದ್ದಾರೆ. ಆದರೆ, ಕೆನಡಾದ ತಾರೆ ಎರಡನೇ ಅತಿ ವೇಗದ ಸಮಯದಲ್ಲಿ ಗುರಿ ತಲುಪಿದರು.

ಅಮೆರಿಕದ ರೇಗನ್ ಸ್ಮಿತ್ (2:04.99) ಬೆಳ್ಳಿ ಪದಕ ಗೆದ್ದರೆ, ಆಸ್ಟ್ರೇಲಿಯಾದ ಎಲಿಜಬೆತ್ ಡೆಕ್ಕರ್ಸ್ (2:06.12) ಕಂಚು ತಮ್ಮದಾಗಿಸಿಕೊಂಡರು. ಚೀನಾದ 12 ವರ್ಷದ ಯು ಝಿದಿ (2:06.43) ಮತ್ತೆ ಅಲ್ಪ ಅಂತರದಲ್ಲಿ ಪದಕ ವಂಚಿತರಾದರು. 200 ಮೀಟರ್ ಮೆಡ್ಲೆ ಬಳಿಕ ಇಲ್ಲೂ ನಾಲ್ಕನೇ ಸ್ಥಾನ ಗಳಿಸಿದರು.

ಕ್ಯಾಥರೀನ್ ಚಾಂಪಿಯನ್: ಅಮೆರಿಕದ ಕ್ಯಾಥರೀನ್ ಬರ್ಕಾಫ್ (27.08 ಸೆಕೆಂಡ್) ಅವರು ಮಹಿಳೆಯರ 50 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಸ್ವದೇಶದ ರೇಗನ್ ಸ್ಮಿತ್ (27.25) ಅವರ ಸವಾಲನ್ನು ಮೆಟ್ಟಿನಿಂತು ಚಾಂಪಿಯನ್ ಆದರು.

ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿ

ಎಂಟರ ಘಟ್ಟಕ್ಕೆ ಅಗ್ರ ಶ್ರೇಯಾಂಕಿತರ ಲಗ್ಗೆ

ಪ್ರಜಾವಾಣಿ ವಾರ್ತೆ


ಮಂಗಳೂರು: ಅಗ್ರ ಶ್ರೇಯಾಂಕದ ಅಭಿವನ್ ಗರ್ಗ್ ಅವರು ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಮತ್ತು 19 ವರ್ಷದೊಳಗಿನವರ ವಿಭಾಗಗಳಲ್ಲಿ ಗುರುವಾರ ಎದುರಾಳಿಗಳನ್ನು ನೇರ ಗೇಮ್‌ಗಳಲ್ಲಿ ಸೋಲಿಸಿ ಕ್ವಾರ್ಟರ್‌ಫೈನಲ್ ತಲುಪಿದರು. ಮಹಿಳಾ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಅಶ್ವತಿ ವರ್ಗೀಸ್ ಅವರೂ ಎಂಟರ ಘಟ್ಟಕ್ಕೆ ಮುನ್ನಡೆದರು.

19 ವರ್ಷದೊಳಗಿನ ಮಹಿಳಾ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ದಿಯಾ ಭೀಮಯ್ಯ ಸಹ ಸುಲಭ ಗೆಲುವಿನೊಡನೆ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಕರ್ನಾಟಕ ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ ಮತ್ತು ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಸಂಸ್ಥೆ ಉರ್ವ ಕ್ರೀಡಾ ಸಂಕೀರ್ಣದಲ್ಲಿ ಈ ಟೂರ್ನಿ ಆಯೋಜಿಸಿದೆ.

ಪುರುಷರ ವಿಭಾಗದ 16ರ ಘಟ್ಟದ ಪಂದ್ಯದಲ್ಲಿ ಬೆಂಗಳೂರಿನ ಅಭಿನವ್ 21–10, 21–14ರಲ್ಲಿ ಪ್ರವರಾರ್ಚಿತ್ ರುದ್ರಾಕ್ಷಲಮಠಂ ವಿರುದ್ಧ ಗೆಲುವು ಸಾಧಿಸಿದರು. 19 ವರ್ಷದೊಳಗಿನವರ ವಿಭಾಗದಲ್ಲಿ 21–13, 21–12 ರಿಂದ ಬೆಂಗಳೂರಿನ ರೋಹನ್ ಶ್ರೀಸಾಯ್ ಅವರನ್ನು ಮಣಿಸಿದರು.

ಸೀನಿಯರ್ ಮಹಿಳಾ ವಿಭಾಗದಲ್ಲಿ ಬೆಂಗಳೂರಿನ ಅಶ್ವತಿ 21–12, 21–19ರಲ್ಲಿ ಅನನ್ಯಶ್ರೀ ಮುರಳಿ ವಿರುದ್ಧ ಜಯ ಗಳಿಸಿದರು. 19 ವರ್ಷದೊಳಗಿನವರ ವಿಭಾಗದಲ್ಲಿ ದಿಯಾ 21–17, 21–17ರಲ್ಲಿ ಅನನ್ಯಶ್ರೀ ಮುರಳಿ ಅವರನ್ನು ಹಿಮ್ಮೆಟ್ಟಿಸಿದರು.



ಮಹಿಳೆಯರ ಡಬಲ್ಸ್‌ನಲ್ಲಿ ಅಶ್ವತಿ ಮತ್ತು ದಿಯಾ ಜೋಡಿ ಕ್ವಾರ್ಟರ್ ಫೈನಲ್ ತಲುಪಿತು. 19 ವರ್ಷದೊಳಗಿನ ಮಹಿಳೆಯರ ಡಬಲ್ಸ್‌ನಲ್ಲಿ ಸಿಂಚನಾ ಸಿ. ಮತ್ತು ದಕ್ಷಿಣ ಕನ್ನಡದ ಅದಿತಿ ಆಚಾರ್ಯ ಜೋಡಿ ಸಹ ಎಂಟರ ಘಟ್ಟ ತಲುಪಿತು.

ಪುರುಷರ ವಿಭಾಗದ ಇತರ ಪಂದ್ಯಗಳಲ್ಲಿ ಬೆಂಗಳೂರಿನ ರುದ್ರ ಶಾಹಿಗೆ 21–15, 21–14ರಲ್ಲಿ ವೈಭವ್ ವಿರುದ್ಧ, ಶ್ಯಾಮ್ ಬಿಂಡಿಗನವಿಲೆ ಅವರಿಗೆ 21–12, 21–17ರಲ್ಲಿ ಧ್ಯಾನ್ ಸಂತೋಷ್ ವಿರುದ್ಧ; ಲಾಲ್ ಸಾಯ್‌ಗೆ 17–21, 21–17, 22–20ರಲ್ಲಿ ಅನಿರುದ್ಧ ದೇಶಪಾಂಡೆ ವಿರುದ್ಧ; ಶ್ರೀಕರ್ ರಾಜೇಶ್‌ಗೆ 21–17, 21–16ರಲ್ಲಿ ಆದಿತ್ಯ ದಿವಾಕರ್ ವಿರುದ್ಧ ಗೆಲುವು.

ನಿಕೋಲಸ್ ರಾಜ್‌ಗೆ 21–9, 21–19ರಲ್ಲಿ ಸಹರ್ಷ್ ಪ್ರಭು ವಿರುದ್ಧ; ತುಷಾರ್ ಸುವೀರ್‌ಗೆ 21–13, 21–16ರಲ್ಲಿ ಪ್ರಣವ್ ವಿರುದ್ಧ 21–13, 21–16ರಲ್ಲಿ, ನರೇನ್ ಅಯ್ಯರ್‌ಗೆ 19–21, 21–9, 21–14ರಲ್ಲಿ ವಿಶಾಲ್ ವಿರುದ್ಧ ಜಯ.

19 ವರ್ಷದೊಳಗಿನ ವಿಭಾಗದಲ್ಲಿ ಅಭಿನವ್ ಗರ್ಗ್ ಜೊತೆ ನಿಶ್ಚಲ್, ಕೌಶಿಕ್ ರೆಡ್ಡಿ, ಹಾರ್ದಿಕ್ ದಿವ್ಯಾಂಶ್, ಪ್ರಣಯ್, ಪ್ರದ್ಯೋತ್ ರವಿ, ಶ್ಯಾಂ ಬಿಂಡಿಗನವಿಲೆ, ಓಂಕಾರ್ (ಎಲ್ಲರೂ ಬೆಂಗಳೂರು) ಎಂಟರ ಘಟ್ಟಕ್ಕೆ ಮುನ್ನಡೆದರು.

ಸೀನಿಯರ್ ಮಹಿಳೆಯರ ವಿಭಾಗದಲ್ಲಿ ಅಶ್ವತಿ ಜೊತೆಗೆ ಮುಸ್ಕಾನ್ ಖಾನ್, ಹಿತೈಶ್ರೀ, ಪ್ರೆರಣಾ ಶೇಟ್, ದಿಶಾ ಸಂತೋಷ್, ಶೈನಾ ಮಣಿಮುತ್ತು, ಆಶಿ ದಾಸ್, ಲಕ್ಷ್ಯಾ ರಾಜೇಶ್ ಎಂಟರ ಸುತ್ತಿಗೆ ಮುನ್ನಡೆದರು.

29ರಿಂದ ಪಿಕೆಎಲ್: 4 ತಾಣಗಳಲ್ಲಿ ಪಂದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) 12ನೇ ಆವೃತ್ತಿ ಆಗಸ್ಟ್ 29ರಿಂದ ಆರಂಭವಾಗಲಿದೆ. ಲೀಗ್‌ನ ಉದ್ಘಾಟನಾ ಪಂದ್ಯದಲ್ಲಿ ತೆಲುಗು ಟೈಟನ್ಸ್ ಹಾಗೂ ತಮಿಳ್ ತಲೈವಾಸ್ ತಂಡಗಳು ಸೆಣಸಲಿವೆ.

2025ರ ಆವೃತ್ತಿಯಲ್ಲಿ ಒಟ್ಟು 12 ತಂಡಗಳು ನಾಲ್ಕು ತಾಣಗಳಲ್ಲಿ ಪ್ರಶಸ್ತಿಗಾಗಿ ಹೋರಾಟ ನಡೆಸಲಿವೆ. ವಿಶಾಖಪಟ್ಟಣ, ಜೈಪುರ, ಚೆನ್ನೈ ಮತ್ತು ದೆಹಲಿಯಲ್ಲಿ ಪಂದ್ಯಗಳು ನಡೆಯಲಿವೆ.

ವಿಶಾಖಪಟ್ಟಣದ ರಾಜೀವ್ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಆಗಸ್ಟ್ 29ರಂದು ನಡೆಯುವ ಎರಡನೇ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡವು ಪುಣೇರಿ ಪಲ್ಟನ್ ವಿರುದ್ಧ ಅಭಿಯಾನ ಆರಂಭಿಸಲಿದೆ.

ಲೀಗ್ ಹಂತದಲ್ಲಿ 108 ಪಂದ್ಯಗಳು ನಡೆಯಲಿವೆ. ಬಹುತೇಕ ಪಂದ್ಯಗಳು ಡಬಲ್ ಹೆಡರ್ ಆಗಿವೆ. ಸೆ.11ರವರೆಗೆ ಮೊದಲ ಲೆಗ್‌ನ 28 ಪಂದ್ಯಗಳು ವಿಶಾಖಪಟ್ಟಣದಲ್ಲಿ ನಡೆಯಲಿವೆ. 2018ರ ಬಳಿಕ ಪಿಕೆಎಲ್ ಪಂದ್ಯಗಳು ಇಲ್ಲಿ ನಡೆಯುತ್ತಿವೆ.

ಸೆ.12ರಿಂದ ಸೆ.27ರವರೆಗೆ ಎರಡನೇ ಲೆಗ್‌ನ 24 ಪಂದ್ಯಗಳು ಜೈಪುರದ ಎಸ್‌ಎಂಎಸ್ ಸ್ಟೇಡಿಯಂನ ಒಳಾಂಗಣ ಹಾಲ್‌ನಲ್ಲಿ ನಡೆಯಲಿವೆ. ಇಲ್ಲಿ ಮೊದಲ ಪಂದ್ಯದಲ್ಲಿ ಎರಡು ಬಾರಿಯ ಚಾಂಪಿಯನ್ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಬೆಂಗಳೂರು ಬುಲ್ಸ್‌ನೊಂದಿಗೆ ಮುಖಾಮುಖಿಯಾಗಲಿದೆ.

ಚೆನ್ನೈನ ಎಸ್‌ಡಿಎಟಿ ಒಳಾಂಗಣ ಕ್ರೀಡಾಂಗಣದಲ್ಲಿ ಸೆ.29ರಿಂದ ಅ.12ರವರೆಗೆ ಮೂರನೇ ಲೆಗ್‌ನ ಪಂದ್ಯಗಳು ನಡೆಯಲಿವೆ. ಒಟ್ಟು 28 ಪಂದ್ಯಗಳಿಗೆ ಈ ಕ್ರೀಡಾಂಗಣ ಸಾಕ್ಷಿಯಾಗಲಿವೆ. ಮೊದಲ ಪಂದ್ಯದಲ್ಲಿ ಯು.ಪಿ. ಯೋಧಾಸ್ ತಂಡವು ಗುಜರಾತ್ ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಅ.13ರಿಂದ ಅ.23ರವರೆಗೆ ದೆಹಲಿಯ ತ್ಯಾಗರಾಜ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಕೊನೆಯ ಲೆಗ್‌ನ 28 ಪಂದ್ಯಗಳು ನಡೆಯಲಿವೆ. ಮೊದಲ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವು ಹರಿಯಾಣ ಸ್ಟೀಲರ್ಸ್ ತಂಡವನ್ನು ಎದುರಿಸಲಿದೆ.

ಪ್ಲೇ ಆಫ್ ಹಂತದ ಪಂದ್ಯಗಳ ವೇಳಾಪಟ್ಟಿಯನ್ನು ಇನ್ನೂ ಪ್ರಕಟಿಸಿಲ್ಲ.

ಅಗ್ರ ಶ್ರೇಯಾಂಕದ ಲೀಗೆ ತರುಣ್ ಆಘಾತ

ಮಕಾವ್ (ಪಿಟಿಐ): ಭಾರತದ ಯುವ ಆಟಗಾರ ತರುಣ್ ಮನ್ನೇಪಲ್ಲಿ ಅವರು ಮಕಾವ್ ಓಪನ್ ಬಿಡಬ್ಲ್ಯುಎಫ್ ಸೂಪರ್ 300 ಟೂರ್ನಿಯಲ್ಲಿ ಅಗ್ರ ಶ್ರೇಯಾಂಕದ ಲೀ ಚಿಯುಕ್ ಯಿಯು ಅವರನ್ನು ಮೂರು ಗೇಮ್‌ಗಳ ಸೆಣಸಾಟದಲ್ಲಿ ಸೋಲಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಭಾರತದ ಅಗ್ರ ಆಟಗಾರ ಲಕ್ಷ್ಯ ಸೇನ್ ಅವರೂ ಗುರುವಾರ ಎಂಟರ ಘಟ್ಟ ತಲುಪಿದರು.

ತರುಣ್ 19–21, 21–14, 22–20 ರಿಂದ ಹಾಂಗ್‌ಕಾಂಗ್‌ನ ಲೀ ಚಿಯುಕ್ ಅವರನ್ನು ಸೋಲಿಸಿದರು.

ಕಾಮನ್ವೆಲ್ತ್ ಗೇಮ್ಸ್ ಚಾಂಪಿಯನ್ ಲಕ್ಷ್ಯ ಸೇನ್ ಇನ್ನೊಂದು ಪಂದ್ಯದಲ್ಲಿ 21–14, 14–21, 21–17 ರಿಂದ ಇಂಡೊನೇಷ್ಯಾದ ಚಿಕೊ ಆರಾ ದ್ವಿವಾರ್ದೊಯೊ ಅವರನ್ನು ಹಿಮ್ಮೆಟ್ಟಿಸಿದರು. ಆದರೆ ಆಯುಷ್ ಶೆಟ್ಟಿ ಸವಾಲು ಅಂತ್ಯಗೊಂಡಿತು. ಅವರು ಮಲೇಷ್ಯಾದ ಜಸ್ಟಿನ್ ಹೊಹ್ ಅವರಿಗೆ 18–21, 16–21 ರಿಂದ ಮಣಿದರು.

‘ಜೀನ್ ಟೆಸ್ಟ್’ ಕಡ್ಡಾಯ: ವಿಶ್ವ ಅಥ್ಲೆಟಿಕ್ಸ್

ಪ್ಯಾರಿಸ್ (ಎಎಫ್‌ಪಿ): ಪ್ರಮುಖ ಕೂಟಗಳಲ್ಲಿ ಮಹಿಳೆಯರ ವಿಭಾಗದಲ್ಲಿ ಭಾಗವಹಿಸುವ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟುಗಳು ಸೆಪ್ಟೆಂಬರ್‌ನಿಂದ ಅನ್ವಯವಾಗುವಂತೆ ‘ವಂಶವಾಹಿ ಪರೀಕ್ಷೆ’ಗೆ ಒಳಗಾಗಬೇಕಾಗುತ್ತದೆ ಎಂದು ವಿಶ್ವ ಅಥ್ಲೆಟಿಕ್ಸ್ ಘೋಷಿಸಿದೆ.

ಸೆಪ್ಟೆಂಬರ್ 13 ರಿಂದ 21ರವರೆಗೆ ಟೋಕಿಯೊದಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ ವೇಳೆಯಿಂದ ಈ ಪರೀಕ್ಷೆ ಅನ್ವಯಿಸಲಾಗುವುದು. ‘ಸ್ವಾಬ್ ಪರೀಕ್ಷೆ’ ಅಥವಾ ರಕ್ತ ಪರೀಕ್ಷೆಯ ಮೂಲಕ ಇದನ್ನು ಪತ್ತೆ ಮಾಡಲಾಗುವುದು

ಭಾರತ ತಂಡಕ್ಕೆ ಕನ್ನಡಿಗ ಕರುಣ್ ಆಸರೆ

ಓವಲ್‌ನಲ್ಲಿ ಐದನೇ ಟೆಸ್ಟ್ • ಸತತ ಐದನೇ ಬಾರಿ ಟಾಸ್ ಸೋತ ನಾಯಕ ಶುಭಮನ್ ಗಿಲ್ • ಮಳೆಯಾಟದಲ್ಲಿ ಜಾರಿದ ಅಗ್ರ ಬ್ಯಾಟರ್‌ಗಳು

• ಸಿದ್ದಿಕಿರಣ್

ಲಂಡನ್: ಮಳೆಯ ಕಣ್ಣಾಮುಚ್ಚಾಲೆಯ ನಡುವೆ ಆರಂಭವಾದ ಐದನೇ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡದ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ತಡಬಡಾಯಿಸಿದರು. ಆದರೆ, ಕನ್ನಡಿಗ ಕರುಣ್ ನಾಯರ್ ಅವರು ಅಜೇಯ ಅರ್ಧಶತಕ ದಾಖಲಿಸಿ ತಂಡಕ್ಕೆ ಆಸರೆಯಾದರು.

ಮೋಡ ಮುಸುಕಿದ ಗುರುವಾರ ಆತಿಥೇಯ ಇಂಗ್ಲೆಂಡ್ ತಂಡದ ಹಂಗಾಮಿ ನಾಯಕ ಓಲಿ ಪೋಪ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಭಾರತ ತಂಡದ ನಾಯಕ ಶುಭಮನ್ ಗಿಲ್ ಸರಣಿಯಲ್ಲಿ ಸತತ ಐದನೇ ಬಾರಿ ಟಾಸ್ ಸೋತರು. ಪ್ರವಾಸಿ ಬಳಗವು ಆರಂಭದಲ್ಲಿಯೇ ಆಘಾತ ಅನುಭವಿಸಿತು. ಚಹಾ ವಿರಾಮದ ವೇಳೆಗೆ 3 ವಿಕೆಟ್‌ಗಳಿಗೆ 85 ರನ್ ಗಳಿಸಿತ್ತು. ನಂತರ ಕೆಲಹೊತ್ತು ಮಳೆಯಿಂದಾಗಿ ಆಟ ಸ್ಥಗಿತಗೊಂಡು ಮತ್ತೆ ಆರಂಭವಾಯಿತು. ಮೊದಲ ದಿನದಾಟದ ಮುಕ್ತಾಯಕ್ಕೆ ಕರುಣ್ (ಔಟಾಗದೇ 52; 98ಎ, 4x7) ಬ್ಯಾಟಿಂಗ್ ಬಲದಿಂದ 64 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 204 ರನ್ ಗಳಿಸಿದೆ.

ಕಳೆದ ನಾಲ್ಕು ಪಂದ್ಯಗಳು ನಡೆದ ಅಂಗಣಗಳಿಗಿಂತಲೂ ವಿಭಿನ್ನವಾದ ಪಿಚ್ ಇಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಗತಿಯನ್ನು ಬುಧವಾರವೇ ಗಿಲ್ ಪಡೆ ಅರಿತಿತ್ತು. ಓವಲ್ ಕ್ರೀಡಾಂಗಣದ ಮುಖ್ಯ ಪಿಚ್ ಕ್ಯುರೇಟರ್ ಲಿಯಾನ್ ಫೋರ್ಟಿಸ್ ಅವರು 2023ರಿಂದಲೇ ಇಲ್ಲಿಯ ಸರೆ ತಂಡಕ್ಕಾಗಿ ಇಂತಹದೇ ಅಂಗಣ ಸಿದ್ಧಪಡಿಸುತ್ತಿದ್ದಾರೆ. ಹಸಿರು ನಳನಳಿಸುವ ಪಿಚ್ ವೇಗಿಗಳಿಗೆ ನೆರವು ನೀಡುವಂತಿತ್ತು. ಅದರಿಂದಾಗಿ ಸಹಜವಾಗಿ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇದು ಫಲ ಕೂಡ ನೀಡಿತು.



ಕರುಣ್ ನಾಯರ್ ಬ್ಯಾಟಿಂಗ್ –ಪಿಟಿಐ ಚಿತ್ರ

ವೇಗಿ ಗಸ್ ಅಟ್ಕಿನ್ಸನ್ ಇನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಯಶಸ್ವಿ ಜೈಸ್ವಾಲ್ (2) ಬಿದ್ದರು. ಆದರೆ ಅಂಪೈರ್ ಎಹಸಾನ್ ರಝಾ ಅವರು ಔಟ್ ನೀಡಲಿಲ್ಲ. ಪೋಪ್ ಅವರು ಯುಡಿಆರ್‌ಎಸ್ (ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ) ಅವಕಾಶ ಬಳಸಿ ಕೊಂಡರು. ಜೈಸ್ವಾಲ್ ಬ್ಯಾಟ್‌ಗೆ ಬಡಿಯದ ಚೆಂಡು ಪ್ಯಾಡ್‌ಗಳನ್ನು ಸವರಿತ್ತು ಮತ್ತು ಸ್ಟಂಪ್‌ಗಳಿಗೆ ನೇರವಾಗಿ ಸಾಗಿತ್ತು. ಭಾರತಕ್ಕೆ ಮೊದಲ ಆಘಾತವಾಯಿತು. ಹೋದ ವರ್ಷ ಇಲ್ಲಿ ನಡೆದಿದ್ದ ಶ್ರೀಲಂಕಾ ಎದುರಿನ ಸರಣಿಯಲ್ಲಿ ಗಾಯಗೊಂಡಿದ್ದ ಬೆನ್ ಸ್ಟೋಕ್ಸ್ ಬದಲಿಗೆ ನಾಯಕತ್ವ ವಹಿಸಿದ್ದ ಪೋಪ್ 14 ರೆಫರಲ್‌ಗಳಲ್ಲಿ ವಿಫಲ ರಾಗಿದ್ದರು. ಆದರೆ ಇಲ್ಲಿ ಸಫಲವಾದರು.

ಇನ್ನೊಂದೆಡೆ ಕೆ.ಎಲ್. ರಾಹುಲ್ (14;40ಎ) ಮತ್ತು ಎಡಗೈ ಬ್ಯಾಟರ್ ಸಾಯಿ ಸುದರ್ಶನ್ (38;108ಎ) ಅವರು ಕ್ರಿಸ್ ವೋಕ್ಸ್ ಅವರ ಪರಿಣಾಮ ಕಾರಿ ದಾಳಿಯನ್ನು ತಾಳ್ಮೆಯಿಂದ ಎದುರಿಸಿದರು. ಆದರೆ ಅಟ್ಕಿನ್ಸನ್, ಜೋಶ್ ಟಂಗ್ ಅಥವಾ ಜೆಮಿ ಓವರ್ಟನ್ ಅವರ ದಾಳಿಗೆ ಅಷ್ಟೇನೂ ಅವರು ಬೆದರಲಿಲ್ಲ.

ಆದರೆ ರಾಹುಲ್ (14; 40ಎಸೆತ) ಅವರು ವೋಕ್ಸ್ ಎಸೆತವೊಂದನ್ನು ಆಡುವ ಭರದಲ್ಲಿ ಚೆಂಡನ್ನು ಸ್ಟಂಪ್ಸ್‌ಗೆ ಎಳೆದುಕೊಂಡರು. ಜೊತೆಯಾಟಕ್ಕೆ ತೆರೆಬಿತ್ತು. ಈ ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿರುವ ಬ್ಯಾಟರ್ ಶುಭಮನ್ ಗಿಲ್ ಅವರು ಸಾಯಿ ಸುದರ್ಶನ್ ಜೊತೆಗೆ ಸೇರಿಕೊಂಡರು. ಊಟದ ವಿರಾಮಕ್ಕೆ ಎಂಟು ನಿಮಿಷಗಳು ಬಾಕಿ ಇದ್ದ ಸಂದರ್ಭದಲ್ಲಿ ಮಳೆ ಸುರಿಯಿತು.

ಅಟ್ಕಿನ್ಸನ್ ಎಸೆತದಲ್ಲಿ ಗಿಲ್ ಚೆಂದದ ಕವರ್ ಡ್ರೈವ್ ಪ್ರಯೋಗಿಸಿದರು. ಟೆಸ್ಟ್ ಸರಣಿಯೊಂದರಲ್ಲಿ ಗರಿಷ್ಠ ರನ್ ಗಳಿಸಿದವರ ಪಟ್ಟಿಯ ಅಗ್ರಸ್ಥಾನದಲ್ಲಿ ರುವ ಸುನಿಲ್ ಗಾವಸ್ಕರ್ (774) ಅವರ ದಾಖಲೆಯನ್ನು ಮೀರಿ ನಿಲ್ಲುವತ್ತ ಗಿಲ್ ದಾಪುಗಾಲಿಟ್ಟರು. ಅವರ ಪುಲ್ ಮತ್ತು ಡ್ರೈವ್‌ಗಳು ಆಕರ್ಷಕವಾಗಿದ್ದವು. ಆದರೆ ಊಟದ ವಿರಾಮದ ನಂತರದ ಎರಡನೇ ಓವರ್‌ನಲ್ಲಿ ಗಿಲ್ ದಂಡ ತೆತ್ತರು. ಶಾರ್ಟ್‌ಕವರ್ಸ್ ನತ್ತ ಚೆಂಡನ್ನು ಹೊಡೆದ ಅವರು ಒಂದು ರನ್‌ಗಾಗಿ ಓಡಿದರು. ಚೆಂಡು ಬೌಲರ್ ಅಟ್ಕಿನ್ಸನ್ ಅವರತ್ತ ಸಾಗಿತು. ಇದನ್ನು ಗಮನಿಸಿದ ನಾನ್‌ಸ್ಟ್ರೈಕರ್ ಸಾಯಿ ಅವರು ನಿರಾಕರಿಸಿ, ಗಿಲ್ ಅವರನ್ನು ಮರಳಿ ಹೋಗುವಂತೆ ಸೂಚಿಸಿದರು. ಆದರೆ ಅವರು ಮರಳುವಷ್ಟರಲ್ಲಿ ಅಟ್ಕಿನ್ಸನ್ ಚುರುಕಾಗಿ ನೇರ ಥ್ರೋ ಮಾಡಿ, ಗಿಲ್ ರನೌಟ್ ಆಗಲು ಕಾರಣರಾದರು. ಗಿಲ್ ಖಾತೆಯಲ್ಲಿ ಸದ್ಯ 743 ರನ್‌ಗಳು ಇವೆ.

‘ಕೊನೆಯ’ ಟೆಸ್ಟ್‌ಗೆ ಮತ್ತೆ ಅವಕಾಶ ಪಡೆದ ಕರುಣ್ ಎದುರಾಳಿ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿ, ಸರಣಿಯಲ್ಲಿ ಮೊದಲ ಅರ್ಧಶತಕ ದಾಖಲಿಸಿದರು. ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ ಅವರು ಮಾತ್ರ ಜವಾಬ್ದಾರಿಯುತ ಆಟ ಪ್ರದರ್ಶಿಸಿದರು. ಮೊದಲ ಮೂರು ಟೆಸ್ಟ್‌ಗಳಲ್ಲಿ ಆಡಿದ್ದ ಅವರು (0,20,31,26,40 ಮತ್ತು 14) ದೊಡ್ಡ ಇನಿಂಗ್ಸ್ ಆಡುವಲ್ಲಿ ವಿಫಲರಾಗಿದ್ದರು. ಹೀಗಾಗಿ, ನಾಲ್ಕನೇ ಟೆಸ್ಟ್‌ನಲ್ಲಿ ಆಡುವ ಬಳಗದಿಂದ ಅವರನ್ನು ಕೈಬಿಡಲಾಗಿತ್ತು.

ತಾಳ್ಮೆಯ ಆಡವಾಡುತ್ತಿದ್ದ ಸುದರ್ಶನ್ ವಿಕೆಟ್ ಪಡೆದು ಜೋಶ್ ಟಂಗ್ ಸಂಭ್ರಮಿಸಿದರು. ನಂತರ ಬಂದ ರವೀಂದ್ರ ಜಡೇಜ (9) ಮತ್ತು ಧ್ರುವ ಜುರೇಲ್ (19) ಅವರೂ ಬೇಗನೆ ಪೆವಿಲಿಯನ್ ಸೇರಿಕೊಂಡರು. ಗಾಯಾಳಾಗಿರುವ ರಿಷಭ್ ಪಂತ್ ಬದಲು ಜುರೇಲ್ ಅವಕಾಶ ಪಡೆದಿದ್ದಾರೆ.

ಬಳಿಕ ಬಂದ ವಾಷಿಂಗ್ಟನ್ ಸುಂದರ್ (ಔಟಾಗದೇ 19) ಅವರು ಕರುಣ್ ಅವರೊಂದಿಗೆ ಮುರಿಯದ ಏಳನೇ ವಿಕೆಟ್ ಜೊತೆಯಾಟದಲ್ಲಿ 51 (88ಎ) ಸೇರಿಸಿ, ಎರಡನೇ ದಿನಕ್ಕೆ ಆಟವನ್ನು ಕಾಯ್ದುಕೊಂಡಿದ್ದಾರೆ.

ಮುಖ್ಯಾಂಶಗಳು


- ಜಸ್‌ಪ್ರೀತ್ ಬೂಮ್ರಾಗೆ ವಿಶ್ರಾಂತಿ, ಆಕಾಶ್‌ದೀಪ್, ಪ್ರಸಿದ್ಧ ಕಣಕ್ಕೆ
- ಕರುಣ್ ನಾಯರ್ ಅವರಿಗೆ ಮತ್ತೊಂದು ಅವಕಾಶ
- ಇಂಗ್ಲೆಂಡ್‌ಗೆ ಬೆನ್ ಸ್ಟೋಕ್ಸ್ ಬದಲು ಓಲಿ ಪೋಪ್ ನಾಯಕತ್ವ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ: 6 ವಿಕೆಟ್‌ಗೆ 204 (64 ಓವರ್‌ಗಳಲ್ಲಿ) (ಗುರುವಾರದ ದಿನದಾಟ ಮುಕ್ತಾಯಕ್ಕೆ)

ಜೈಸ್ವಾಲ್ ಎಲ್‌ಬಿಡಬ್ಲ್ಯು ಬಿ ಅಟ್ಕಿನ್ಸನ್ 2 (9 ಎ)
ರಾಹುಲ್ ಬಿ ವೋಕ್ಸ್ 14 (40ಎ, 4x1)
ಸುದರ್ಶನ್ ಸಿ ಸ್ಮಿತ್ ಬಿ ಟಂಗ್ 38 (108ಎ, 4x6)
ಗಿಲ್ ರನ್‌ಔಟ್ 21 (35ಎ, 4x4)
ಕರುಣ್ ನಾಯರ್ ಔಟಾಗದೇ 52 (98ಎ, 4x7)
ಜಡೇಜ ಸಿ ಸ್ಮಿತ್ ಬಿ ಟಂಗ್ 9 (13ಎ, 4x1)
ಜುರೇಲ್ ಸಿ ಬ್ರೂಕ್ ಬಿ ಅಟ್ಕಿನ್ಸನ್ 19 (40ಎ, 4x2)
ವಾಷಿಂಗ್ಟನ್ ಔಟಾಗದೇ 19 (45ಎ, 4x2)
ಇತರೆ: 30 (ಬೈ 4, ಲೆಗ್‌ಬೈ 6, ನೋಬಾಲ್ 4, ವೈಡ್ 16)
ವಿಕೆಟ್ ಪತನ: 1-10 (ಯಶಸ್ವಿ ಜೈಸ್ವಾಲ್, 3.1), 2–38 (ಕೆ. ಎಲ್.ರಾಹುಲ್, 15.1), 3-83 (ಶುಭಮನ್ ಗಿಲ್, 27.2), 4-101 (ಸಾಯಿ ಸುದರ್ಶನ್, 35.4), 5-123 (ರವೀಂದ್ರ ಜಡೇಜ, 39.3), 6-153 (ಧ್ರುವ ಜುರೇಲ್, 49.3)
ಬೌಲಿಂಗ್: ಕ್ರಿಸ್ ವೋಕ್ಸ್ 14–1–46–1, ಅಟ್ಕಿನ್ಸನ್ 19–7–31–2, ಜೋಶ್ ಟಂಗ್ 13–3–47–2, ಜೇಮಿ ಓವರ್ಟನ್ 16–0–66–0, ಜೇಕಬ್ ಬೆಥೆಲ್ 2–1–4–0

Queen of the Board



ದಿವ್ಯಾ ದೇಶ್ ಮುಖ್, ಭಾರತದ ಮೊದಲ ಮಹಿಳಾ ವಿಶ್ವಕಪ್ ಚೆಸ್ ಚಾಂಪಿಯನ್ ಆಗಿದ್ದಾರೆ

ನನ್ನ ಆಟದ ಕಡೆಗಷ್ಟೇ ಗಮನ ಕೇಂದ್ರೀಕರಿಸಿದ್ದೆ: ದಿವ್ಯಾ

ನಾಗ್ಪುರ (ಪಿಟಿಐ): ‘ನಾನು ಕಳೆದು ಕೊಳ್ಳುವುದು ಏನೂ ಇರದ ಕಾರಣ ಕೋನೇರು ಹಂಪಿ ವಿರುದ್ಧ ಫಿಡೆ ಮಹಿಳಾ ಚೆಸ್ ವಿಶ್ವಕಪ್ ಫೈನಲ್ ಪಂದ್ಯ ಆಡುವಾಗ ಯಾವುದೇ ಒತ್ತಡದಲ್ಲಿ ಇರಲಿಲ್ಲ’ ಎಂದು ದಿವ್ಯಾ ದೇಶಮುಖ್ ಹೇಳಿದರು.

ಜಾರ್ಜಿಯಾದ ರಾಜಧಾನಿ ಬಟುಮಿಯಿಂದ ಬುಧವಾರ ತಡರಾತ್ರಿ ಮುಂಬೈ ಮೂಲಕ ಇಲ್ಲಿಗೆ ಮರಳಿದ ಯುವ ಸಾಧಕಿಗೆ ವಿಮಾನ ನಿಲ್ದಾಣದಲ್ಲಿ ಆತ್ಮೀಯ ಸ್ವಾಗತ ನೀಡಲಾಯಿತು.

ಕ್ಲಾಸಿಕಲ್ ಸುತ್ತಿನ ಎರಡು ಪಂದ್ಯಗಳು ‘ಡ್ರಾ’ ಆದ ನಂತರ ಕಾಲಮಿತಿಯ ಟೈಬ್ರೇಕರ್‌ನಲ್ಲಿ 19 ವರ್ಷ ವಯಸ್ಸಿನ ದಿವ್ಯಾ, ಅನುಭವಿ ಎದುರಾಳಿಯನ್ನು ಮಣಿಸಿ ವಿಶ್ವಕಪ್ ಗೆದ್ದಿದ್ದರು.

‘ಫಲಿತಾಂಶ ನನ್ನ ಕೈಯಲ್ಲಿಲ್ಲದ ಕಾರಣ ನಾನು ನನ್ನ ಆಟದ ಕಡೆಗಷ್ಟೇ ಗಮನ ಕೇಂದ್ರೀಕರಿಸಿದೆ. ಬೇರೇನೂ ಯೋಚಿಸಿರಲಿಲ್ಲ’ ಎಂದು ಹೇಳಿದರು.

ವಿಮಾನ ನಿಲ್ದಾಣದಲ್ಲಿ ಅವರು ಮಾತನಾಡುವಾಗ ತಮ್ಮ ಯಶಸ್ಸಿನ ಶ್ರೇಯವನ್ನು ತಂದೆ–ತಾಯಿಗೆ ಸಮರ್ಪಿಸಿದ್ದರು.

‘ನನ್ನ ವೃತ್ತಿಜೀವನದಲ್ಲಿ ತಂದೆ–ತಾಯಿ ವಹಿಸಿದ ಪಾತ್ರ ಬಲುದೊಡ್ಡದು.



ನಾಗ್ಪುರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಪದಕ ಮತ್ತು ಟ್ರೋಫಿ ಪ್ರದರ್ಶಿಸಿದ ದಿವ್ಯಾ ದೇಶಮುಖ್ ಪಿಟಿಐ ಚಿತ್ರ

ಅವರ ನೆರವಿಲ್ಲದೇ ಹೋಗಿದ್ದಲ್ಲಿ ನಾನು ಈ ಹಂತಕ್ಕೆ ತಲುಪಲು ಆಗುತ್ತಿರಲಿಲ್ಲ. ನನ್ನ ಕುಟುಂಬ, ಪೋಷಕರು, ಸೋದರಿ ಆರ್ಯಾ, ನನ್ನ ಮೊದಲ ಕೋಚ್ ರಾಹುಲ್ ಜೋಶಿ ಅವರಿಗೆ ಶ್ರೇಯ ಸಲ್ಲಬೇಕು. ನಾನು ಗ್ರ್ಯಾಂಡ್‌ಮಾಸ್ಟರ್ ಆಗಬೇಕೆಂದು ಕೋಚ್ ಸದಾ ಹಾರೈಸುತ್ತಿದ್ದರು. ಈ ಗೆಲುವು ಅವರಿಗಾಗಿ’ ಎಂದು ದಿವ್ಯಾ ತಮ್ಮ ಕೋಚ್ ಅವರನ್ನು ಸ್ಮರಿಸಿದರು. 2020ರಲ್ಲಿ ಜೋಶಿ ಅವರು 40ನೇ ವಯಸ್ಸಿನಲ್ಲಿ ನಿಧನರಾಗಿದ್ದರು.

ಜಿ. ಕಸ್ತೂರಿರಂಗನ್ ಟ್ರೋಫಿ ಟಿ20 ಕ್ರಿಕೆಟ್: ಶರಣಬಸವ ಅಜೇಯ ಶತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶರಣಬಸವ (ಔಟಾಗದೇ 100, 63ಎಸೆತ, 4X12, 6X3) ಅಜೇಯ ಶತಕದ ಬಲದಿಂದ ವಿಲ್ಸನ್ ಗಾರ್ಡನ್ ತಂಡವು ಇಲ್ಲಿ ನಡೆಯುತ್ತಿರುವ ಜಿ. ಕಸ್ತೂರಿರಂಗನ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ಕೆಎಸ್‌ಸಿಎ ಟಿ20 ಲೀಗ್ ಕಮ್ ನಾಕೌಟ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ವಿಲ್ಸನ್ ಗಾರ್ಡನ್ ತಂಡವು 25 ರನ್‌ಗಳಿಂದ ಮಿನರ್ವ ಸಿಸಿ ವಿರುದ್ಧ ಗೆದ್ದಿತು. ಇನ್ನೊಂದು ಪಂದ್ಯದಲ್ಲಿ ಸಮಿತ್ ದ್ರಾವಿಡ್ (61 ರನ್) ಅರ್ಧಶತಕದ ಬಲದಿಂದ ವಿಜಯಾ ಸಿಸಿ ತಂಡವು 63 ರನ್‌ಗಳಿಂದ ವಿಶ್ವೇಶ್ವರಪುರಂ ಕ್ರಿಕೆಟ್ ಕ್ಲಬ್ ಎದುರು ಜಯಿಸಿತು.

ಸಂಕ್ಷಿಪ್ತ ಸ್ಕೋರು: ವಿಲ್ಸನ್ ಗಾರ್ಡನ್ ಸಿಸಿ: 20 ಓವರ್‌ಗಳಲ್ಲಿ 6ಕ್ಕೆ153 (ಶರಣಬಸವ ಔಟಾಗದೇ 100, ಎಸ್. ಚಿರಂತ್ 22ಕ್ಕೆ3) ಮಿನರ್ವಾ ಸಿಸಿ: 10 ಓವರ್‌ಗಳಲ್ಲಿ 6ಕ್ಕೆ73 (ನಿತಿನ್ ರೆಡ್ಡಿ 27ಕ್ಕೆ2) ವಿಜೆಡಿ ಪದ್ಧತಿಯಲ್ಲಿ ವಿಲ್ಸನ್ ಗಾರ್ಡನ್ ಸಿಸಿಗೆ 25 ರನ್ ಜಯ. **ವಿಜಯಾ ಸಿಸಿ:** 20 ಓವರ್‌ಗಳಲ್ಲಿ 6ಕ್ಕೆ198 (ಸಮಿತ್ ದ್ರಾವಿಡ್ 61, ಮಹೇಶಕುಮಾರ್ ಪಿ. 46ಕ್ಕೆ3) ವಿಶ್ವೇಶ್ವರಪುರಂ ಸಿಸಿ (2): 20 ಓವರ್‌ಗಳಲ್ಲಿ 7ಕ್ಕೆ135 (ಮಾಧವ ಧಾರವಾಡಕರ್ 58, ಪಿ. ಧ್ರುವ 26ಕ್ಕೆ2, ಯಶ್ ರಾಜ್ ಪೂಜಾ 24ಕ್ಕೆ2) ವಿಜಯಾ ಸಿಸಿಗೆ 63 ರನ್ ಜಯ. **ಫ್ರೆಂಡ್ಸ್ ಯೂನಿಯನ್ ಸಿಸಿ(1):** 20 ಓವರ್‌ಗಳಲ್ಲಿ 1 ವಿಕೆಟ್‌ಗೆ 199 (ಬಿ.ಯು. ಶಿವಕುಮಾರ್ 92, ರೋಹನ್ ಆರ್ ರೇವಣಕರ್ ಔಟಾಗದೇ 92) ಚಿಂತಾಮಣಿ ಸ್ಪೋರ್ಟ್ಸ್ ಅಸೋಸಿಯೇಷನ್: 18 ಓವರ್‌ಗಳಲ್ಲಿ 123 (ಅಮೃತ್ ಪ್ರವೀಣ 23ಕ್ಕೆ2, ಐ.ಜಿ. ಅನಿಲ್ 12ಕ್ಕೆ3, ರಾಜೇಂದ್ರ ಡಂಗನವರ್ 18ಕ್ಕೆ2, ಆರುಷ್ ಮಲ್ಹೋತ್ರಾ 17ಕ್ಕೆ2) ಫ್ರೆಂಡ್ಸ್ ಯೂನಿಯನ್‌ಗೆ 76 ರನ್‌ಗಳ ಜಯ. **ಯಾಂಕಿಸ್ ಸಿಸಿ:** 18 ಓವರ್‌ಗಳಲ್ಲಿ 7ಕ್ಕೆ98 (ಕೆ.ಪಿ. ಕಾರ್ತಿಕೇಯ 10ಕ್ಕೆ2), ವಲ್ಚರ್ಸ್ ಸಿಸಿ: 14.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 99 (ಆರ್. ಪ್ರಜ್ವಲ್ ಗೌಡ 4ಕ್ಕೆ2) ವಲ್ಚರ್ಸ್ ಸಿಸಿಗೆ 6 ವಿಕೆಟ್‌ಗಳ ಜಯ. ಮಳೆಯಿಂದಾಗಿ 18 ಓವರ್‌ಗಳ ಇನಿಂಗ್ಸ್ ನಿಗದಿ. **ಸ್ವಸ್ತಿಕ್ ಯೂನಿಯನ್ ಸಿಸಿ (2):** 19 ಓವರ್‌ಗಳಲ್ಲಿ 9ಕ್ಕೆ195 (ಬಿ. ವಿಜಯರಾಜ್ 61, ಮೊಹಮ್ಮದ್ ತಾಹ 57, ಸುಹಾಸ್ ಪುರುಷೋತ್ತಮ 15ಕ್ಕೆ2, ಶೀತಲ್ ಕುಮಾರ್ 54ಕ್ಕೆ2, ಸಾಹಿಲ್ ಶರ್ಮಾ 24ಕ್ಕೆ4) ಜಯನಗರ ಕ್ರಿಕೆಟರ್ಸ್: 14.4 ಓವರ್‌ಗಳಲ್ಲಿ 101 (ಸಾತ್ವಿಕ್ ಎಸ್ ಸಾಯಿರಾಜ್ 18ಕ್ಕೆ2, ನೇಥನ್ ಡಿಮೆಲೊ 15ಕ್ಕೆ6) ಸ್ವಸ್ತಿಕ್ ಯೂನಿಯನ್ ಸಿಸಿಗೆ 95 ರನ್ ಜಯ. **ಜಾಲಿ ಕ್ರಿಕೆಟರ್ಸ್:** 20 ಓವರ್‌ಗಳಲ್ಲಿ 6ಕ್ಕೆ162 (ಆರ್ಯನ್ 47, ಜೆ.ಪಿ. ಅರವಿಂದ್ 29ಕ್ಕೆ2) ಕ್ಯಾವಲಿಯರ್ಸ್ ಸಿಸಿ: 20 ಓವರ್‌ಗಳಲ್ಲಿ 8ಕ್ಕೆ157 (ಆರ್. ಪ್ರಾಣೇಶ್ 35ಕ್ಕೆ2, ಸುಮಂತ್ 23ಕ್ಕೆ2, ಪ್ರಮೋದ್ ಗೌಡ 38ಕ್ಕೆ2) ಜಾಲಿ ಕ್ರಿಕೆಟರ್ಸ್‌ಗೆ 5 ರನ್ ಜಯ. **ಸೋಷಿಯಲ್ ಕ್ರಿಕೆಟರ್ಸ್:** 20 ಓವರ್‌ಗಳಲ್ಲಿ 143 (ಮೊಹಮ್ಮದ್ ರಿಹಾನ್ 25ಕ್ಕೆ2, ಎನ್.ಎಸ್. ಶೌರ್ಯ 34ಕ್ಕೆ3, ಎಚ್.ಕೆ. ವಿಶ್ವನಾಥ್ 26ಕ್ಕೆ2) ಆರ್‌ವಿಸಿಇ ಜಿಮ್ಖಾನಾ: 2 ಓವರ್‌ಗಳಲ್ಲಿ 2 ವಿಕೆಟ್‌ಗೆ 9 (ಮಳೆಯಿಂದಾಗಿ ಪಂದ್ಯ ಸ್ಥಗಿತ) **ಎನ್‌ಗ್ರೇಡ್ ಸಿಸಿ:** 20 ಓವರ್‌ಗಳಲ್ಲಿ 8ಕ್ಕೆ149 (ಬಿ. ಶಶಾಂಕ್ 44, ಧೀರಜ್ ಜೆ ಗೌಡ 29ಕ್ಕೆ2, ಕ್ಲೆಮೆಂಟ್ ರಾಜಮೋಹನ್ ಕೆ 26ಕ್ಕೆ3, ಎಸ್‌ಎಸ್‌ಜಿ ರೋಹಿತ್ 17ಕ್ಕೆ2) ಜವಾನ್ಸ್ ಸಿಸಿ: 16.4 ಓವರ್‌ಗಳಲ್ಲಿ 119 (ಟಿ. ಚಿರಂಜೀವಿ 8ಕ್ಕೆ2, ಕುಶಾಲ್ ಗೌಡ 31ಕ್ಕೆ3, ಎಸ್. ಶೈಲೇಶ್ 27ಕ್ಕೆ2, ಕೆ. ವಿಷ್ಣು ಬಾಲಾಜಿ25ಕ್ಕೆ2) ವಿಜೆಡಿ ಪದ್ಧತಿಯಲ್ಲಿ ಎನಗ್ರೇಡ್ಸ್‌ಸಿಸಿಗೆ 15 ರನ್‌ಗಳ ಜಯ. **ಜಯನಗರ ಯುನೈಟೆಡ್ ಕ್ರಿಕೆಟರ್ಸ್:** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 128 (ಮೊಹಮ್ಮದ್ ಸರ್ಷನ್ 15ಕ್ಕೆ3) ಸಿಟಿ ಜಿಮ್ಖಾನಾ: 19.3 ಓವರ್‌ಗಳಲ್ಲಿ 3ಕ್ಕೆ132 (ಸಿದ್ಧಾಂಥ್ ಸ್ಮರಣ್ ಔಟಾಗದೇ 56, ಕೆ. ಸುಧನ್ವ 15ಕ್ಕೆ2) ಸಿಟಿ ಜಿಮ್ಖಾನಾಗೆ 7 ವಿಕೆಟ್‌ಗಳ ಜಯ. **ಜವಾಹರ್ ಸ್ಪೋರ್ಟ್ಸ್ ಕ್ಲಬ್ (2):** 20 ಓವರ್‌ಗಳಲ್ಲಿ 4ಕ್ಕೆ154 (ಎಂ.ಪಿ. ಸಮರ್ಥ್ 83, ಶ್ರೇಯಸ್ ಕುಮಾರ್ 32ಕ್ಕೆ2, ಲಕ್ಷಣ್ 26ಕ್ಕೆ2) ಮಾಡರ್ನ್ ಸಿಸಿ: 19.3 ಓವರ್‌ಗಳಲ್ಲಿ 118 (ಕಿಶನ್ ಕುಮಾರ್ 10ಕ್ಕೆ3, ರೋನಕ್ ಯಲ್‌ವಾಲ್ 21ಕ್ಕೆ3) ಜವಾಹರ್ ಸ್ಪೋರ್ಟ್ಸ್ ಕ್ಲಬ್‌ಗೆ 36 ರನ್ ಜಯ. **ದೂರವಾಣಿ ಕ್ರಿಕೆಟರ್ಸ್ (1):** 20 ಓವರ್‌ಗಳಲ್ಲಿ 6ಕ್ಕೆ172 (ಕರ್ಣ ಸೂರ್ಯವಂಶಿ 74, ಆರ್.ಜಿ. ಮೋರೆ 29ಕ್ಕೆ3, ಬಿ. ಶರ್ವೇಶ್ ಕುಲೊತುಂಗನ್ 23ಕ್ಕೆ2) ವಿಶ್ವೇಶ್ವರಪುರಂ ಸಿಸಿ: 2.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 14 (ಮಳೆಯಿಂದಾಗಿ ಪಂದ್ಯ ಸ್ಥಗಿತ).

ಬೆಂಗಳೂರು ರೇಸ್

ವಿಕ್ಟರ್ ಹುಗೊ ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಕಪ್ ಶುಕ್ರವಾರ ಮುಕ್ತಾಯಗೊಳ್ಳಲಿರುವ ಬೆಂಗಳೂರು ಬೇಸಿಗೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಿಕ್ಟರ್ ಹುಗೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಆಂದ್ರೆ 1, ಪ್ರಿಸ್ಟೈನ್ ಗ್ಲೋರಿ 6, ಸ್ಟಾರ್ ಸ್ಟಡೆಡ್ 4
2ನೇ ರೇಸ್: ಡಬಲ್ ಸ್ಕಾಚ್ 6, ಸೀ ಡೈಮಂಡ್ 1, ಚೆನ್ನಾಗಿದೆ 5
3ನೇ ರೇಸ್: ಡಬಲ್ ವಿಷನ್ 2, ಏಬಲ್ ಒನ್ 4, ಎಲ್ ಅಲಮೀನ್ 7
4ನೇ ರೇಸ್: ಬೆಸಿಲಿಕ 4, ಬೆಲ್ಲವಿಟ 5, ಎಕ್ಲಿಪ್ಸ್ ಪಲ್ಸ್ 8
5ನೇ ರೇಸ್: ಚಾಂಪಿಯನ್ಸ್ ವೇ 4, ಕಲಮಿಟ್ಸ 6, ಶುಭಾಂಕರ್ 2
6ನೇ ರೇಸ್: ವಿಕ್ಟರ್ ಹುಗೊ 5, ಪಾಸಿಟಾನೊ 2, ರೇಮಿಯಲ್ 1
7ನೇ ರೇಸ್: ವೆಲ್ಲಿಂಗ್ಟನ್ 3, ಲಾಟರ್‌ಬ್ರನ್ನೆನ್ 6, ಬೆಜವಾಡ ಸುಲ್ತಾನ್ 8
8ನೇ ರೇಸ್: ಹಬಿಬ್ಟಿ 3, ಎಲ್‌ಜಿಎಸ್ ಸ್ಟಾರ್ 4, ಮೆಹ್ರ 2

ಉತ್ತಮ ಬೆಟ್: ಚಾಂಪಿಯನ್ ವೇ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8